ಪ್ರಜಾ ಪ್ಲಸ್+

ನಾಟ್ಯ ಸಂಧ್ಯಾ

ವಿದುಷಿ ಚೈತ್ರಾ ಆರ್. ಜಗದೀಶ್ ಅವರ ಶಿಷ್ಯೆ ಶಿವಾನಿ ಹೇಮಂತ್ ಅವರ ಭರತನಾಟ್ಯ ಕಾರ್ಯಕ್ರಮ ಜೂನ್ 22ರಂದು ಶನಿವಾರ ನಡೆಯಲಿದೆ.

ಅತಿಥಿಗಳು: ವಿದ್ವಾನ್ ಸತ್ಯನಾರಾಯಣ ರಾಜು, ವೈಜಯಂತಿ ಕಾಶಿ, ಕಸ್ತೂರಿ ಶಂಕರ್, ಪುಷ್ಪಾ ಕಾಶಿನಾಥ್.

ಕಾರ್ಯಕ್ರಮ ನಡೆಯುವ ಸ್ಥಳ: ಜೆಎಸ್‌ಎಸ್ ಶಿವರಾತ್ರೀಶ್ವರ ಕೇಂದ್ರ, ಜಯನಗರ. ಸಂಜೆ 5.

ಇಂದು, ನಾಳೆ ಸಂಗೀತ ಸಮ್ಮಿಲನ



ಇಂಡಿಯನ್ ಮ್ಯೂಸಿಕ್ ಎಕ್ಸ್‌ಪೀರಿಯನ್ಸ್ ಮ್ಯೂಸಿಯಂ (ಐಎಂಇ) ಜೆಪಿ ನಗರದ ಆವರಣದಲ್ಲಿ ವಿಶ್ವ ಸಂಗೀತ ದಿನದ ಪ್ರಯುಕ್ತ ಸಂಗೀತ ಕಾರ್ಯಕ್ರಮ ಆಯೋಜಿಸಿದೆ.

ಜೂನ್ 22ರಂದು ಬೆಳಿಗ್ಗೆ 6.30ಕ್ಕೆ ಹಿಂದೂಸ್ತಾನಿ ಸಂಗೀತ ಕಛೇರಿ (ಬೆಳಗಿನ ರಾಗ) ನಡೆಯಲಿದೆ. ಶೃತಿ ಬೋಡೆ ಅವರೊಂದಿಗೆ ತಬಲಾದಲ್ಲಿ ಯೋಗೀಶ್ ಭಟ್, ಹಾರ್ಮೋನಿಯಂನಲ್ಲಿ ವಿಘ್ನೇಶ್ ಭಾಗವತ್ ಸಾಥ್ ನೀಡಲಿದ್ದಾರೆ. ಅಕೋಡ ಅವರಿಂದ ಫ್ರೆಂಚ್ ಕ್ರಿಯೋಲ್ ಜಾಝ್ ಸಂಗೀತ ಪ್ರದರ್ಶನ ಸಂಜೆ 7ಗಂಟೆಗೆ ಇರಲಿದೆ.

ಕಲಾವಿದರು: ಅಕೋಡ, ವ್ಯಾಲೇರಿ ಚಾನೆ ಟೆಫ್(ಪಿಯಾನೊ/ಓಕಲ್ಸ್), ಎರಿಕ್ ಪರೆಜ್(ತಾಳವಾದ್ಯ) ಮತ್ತು ಥಾಮಸ್ ಬೌಡೆ(ಬಾಸ್)

ಜೂನ್ 23ರಂದು ಕರ್ನಾಟಕ ಸಂಗೀತ ಕೊಳಲು ಕಛೇರಿ ನಡೆಯಲಿದೆ. ಬೆಳಿಗ್ಗೆ 6.30ಕ್ಕೆ. ಹೇಮಂತ್ ಮತ್ತು ಹೇರಂಬ (ಕೊಳಲು ಸಹೋದರರು). ಮೃದಂಗದಲ್ಲಿ ಅರ್ನೂ ವಿನೋದ್ ಶ್ಯಾಮ್ ಮತ್ತು ಮೋರ್ಚಿಂಗ್‌ನಲ್ಲಿ ಎ ಚಿದಾನಂದ ಸಾಥ್ ನೀಡಲಿದ್ದಾರೆ.

ಜ್ಯಾಮ್ ಸೆಷನ್ ಮತ್ತು ಕಛೇರಿ ಜತೆಗೆ ಅಂತರ ಸಾಂಪ್ರದಾಯಿಕ ರಾಕ್ ಬ್ಯಾಂಡ್ ಗಾಲೇ ಜ್ಯಾಮ್ ಸೆಷನ್ ಇರಲಿದೆ. ಸಂಜೆ 4ಕ್ಕೆ. ಪ್ರವೇಶ ಉಚಿತ.

ಎರಡು ದಿನಗಳ ತಾಳಮದ್ದಳೆ

ಯಕ್ಷ ಕೌಮುದೀ ಟ್ರಸ್ಟ್ ಎರಡು ದಿನಗಳ ತಾಳಮದ್ದಳೆ ಹಮ್ಮಿಕೊಂಡಿದೆ. ಜೂನ್ 22ರಂದು 'ಭಕ್ತ ಸುಧನ್ವ' ಪ್ರಸಂಗವು ಪೂರ್ಣಪ್ರಜ್ಞ ವಿದ್ಯಾಪೀಠದಲ್ಲಿ ಇರಲಿದೆ. ಜೂನ್ 23ರಂದು 'ವಾಮನ ಚರಿತ್ರೆ' ಪ್ರಸಂಗ ನಡೆಯಲಿದೆ. **ಭಾಗವತಿಕೆ:** ಕೇಶವ ಹೆಗಡೆ ಕೊಳಗಿ. ಮೃದಂಗ: ಶಂಕರ ಭಾಗವತ, ಯಲ್ಲಾಪುರ. **ಅರ್ಥಧಾರಿಗಳು:** ಶಂಭು ಶರ್ಮಾ ವಿಟ್ಲ, ಗಣರಾಜ ಕುಂಬ್ಳೆ, ಗ.ನಾ ಭಟ್ಟ

ಕಾರ್ಯಕ್ರಮ ನಡೆಯುವ ಸ್ಥಳ: ಕೊಬಾಲ್ಟ್ ಗ್ಯಾಲರಿ, ನಂ 778, 1ನೇ ಮುಖ್ಯರಸ್ತೆ, 1ನೇ ಅಡ್ಡರಸ್ತೆ, 5ನೇ ಹಂತ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ.



ಯಕ್ಷ ಪಕ್ಷದಲ್ಲಿ 'ತ್ರಿಶಂಕು ಚರಿತ್ರೆ'

ಫಾಟಕ್ ಯಕ್ಷ ಸಂಸ್ಕೃತಿ ಟ್ರಸ್ಟ್ 'ಯಕ್ಷ ಪಕ್ಷ' ಹಮ್ಮಿಕೊಂಡಿದೆ. ಜೂನ್ 22ರಂದು ಬವಲಾಡಿ ಹಿರಿಯಣ್ಣ ಹೆಬ್ಬಾರ್ ರಚಿತ 'ತ್ರಿಶಂಕು ಚರಿತ್ರೆ' ಪ್ರಸಂಗ ನಡೆಯಲಿದೆ.

ಹಿಮ್ಮೇಳದಲ್ಲಿ ಅನಂತ ಹೆಗಡೆ ದಂತಳಿಗೆ, ಎ.ಪಿ.ಫಾಟಕ್ ಕಾರ್ಕಳ. ಅರ್ಥದಾರಿಗಳು: ಉಮಾಕಾಂತ ಭಟ್, ವಾಸುದೇವ ರಂಗ ಭಟ್ಟ, ಶೇಣಿ ವೇಣುಗೋಪಾಲ ಭಟ್, ಅಜಿತ್ ಕಾರಂ ಇರಲಿದ್ದಾರೆ.

ಕಾರ್ಯಕ್ರಮ ನಡೆಯುವ ಸ್ಥಳ: ಗೋಖಲೆ ಸಾರ್ವಜನಿಕ ಸಂಸ್ಥೆ, ಬಸವನಗುಡಿ. ಸಂಜೆ 6ರಿಂದ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

WEEKEND CORNER

ಕ್ಲಾಸಿಫೈಡ್ಸ್

RENTAL PROPERTIES

Accommodation Available

House

WHEELER'S ROAD Extn:- Luxurious house 2 BHK Ground Floor attached Dining. East Facing 30,000/-. 8217332018

Commercial

Available for rent

OFFICES / SHOWROOM SPACE

Posh well maintained and furnished Building B+G+4 Floors, 4000 SqFt each Floor with Lift and Generator. Ideally suited for Restaurant, Corporate Office, Banks. Available for Rent on corner plot Chamarajapet, Mysore Road.

Contact: 91080 12898 Email: lvsmurthy2009@gmail.com

COMMERCIAL SPACE for RENT 1200 sqft (Ground /First) on 9th Cross Malleshwaram, Prime Location. Contact 9844067297 (10am to 7pm)

COMMERCIAL SHOP Rent 510 Sqft Close to Shreegandha Kaval Bustop, Near Nagarbhavi BDA Complex: 9343911234

5 ACRES Commercial Land Available for Rent in Bidadi on Bangalore Mysore Road Interested: 9972181837

Industrial And Factory

AVAILABLE OF Industrial Shed of 95000 sqft at Soukya Road, Whitefield. Contact:9341234288/ 9663224353/ 9845417487.

INDUSTRIAL SHED/GODOWN for rent in Harohalli Industrial Area 3rd phase, 11,000 Sft, Contact : 9108982314

RENT: INDUSTRIAL shed @ KIADB Harohalli Phase-2, Built 2000 in 22000 sqft, 8HP, Phone: 9972299585

BUILDERS ESSENTIAL

Roofing Materials

***WE-FIX* LEAKING** ROOF, TANK, SUMP, BATHROOM, SKYLIGHT, HOUSE PAINTING, TILING, CARPENTRY, EPOXY, CIVIL WORKS. 9448572697

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE BUYING

General

General

REQUIRED LAND BBMP LIMITS/ BMRDA/ BIAAPA/ BMICAPA LAND With Converted yellow Zone. No agent/ Only owners. Mob: 9035010595 / 9035055919

Sites

Banashankari

BDA SITES WANTED ARKAVATHY ANJANAPURA BANASHANKRI 6TH STAGE VISHWESHWARAIA KEMPEGOWDA ANY BDA LAYOUT. CONTACT: 9845062822, 8660751654

Multiple Locations

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

Sadashiva Nagar

WANTED :1800 TO 2400 SFT PLOT IN SADHASHIVANAGAR. SITE OWNERS CALL BUYER 6361455241

REAL ESTATE SELLING

Sites

Arkavathi Layout

BDA-SITE FOR Sale Arkavathi Layout 15th Block 40x60. Jakkur Srirampura 5500sqft For Sale Call:7676900174 6363496142

BDA ARKAVATHY layout. 40×60. Near Manyatha Tech Park Owner Contact No. 9663005859/ 9731594565

Banashankari

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

BANASHANKARI 6TH Stage,BDA Sites Buying/Selling, 50x80,40x60,30x40, 20x30,Genuine Buyers/Sellers: 9513332646, 9902764626

BDA SITE FOR SALE @. BSK 6TH STAGE 7TH BLOCK 40x60 NORTH. IN GOOD LOCATION. 98455-55666

BDA 30X40 N/F site sale Banashankari 5th stage near Vasantha Vallabha Temple,No brokers. Contact:7899747576

BSK 6TH Stage, 9th Block, 1600 Sqft S/W Corner 60ft Road and 10th Block 30x50 West Contact: 9945964049, 9663184766

BANASHANKARI 6TH Stage, 4th 'T' Block, 30x40 site for sale. Contact:- 9844006666.

Bannerghatta Road

SALE 7ACRES LAND Clear Title, Sakalavara Village, Can Reach On Asphalt Road, Bannerghatta Road. 9480316343

Jakkur

SITE FOR Sale 40x60 Site No. 13, Jakkur, Venkateshpura, Rate 6500/- per sqft. (Negotiable) Mob. No:- 9448277755.

J P Nagar

JP-NAGAR 3RD Near Mini Forest, Sites/ House Corner 30x55, 55x62, 30x45, 40x60, 40x45, 50x80, 60x90, 45x72 Corner Commercial Complex: 9739995042

Kanakapura Road

DC CONVERSION, 30x48 e-khata, all amenities. North Face, Buildings Surrounded, Nelguli Village, 500 mtrs. Kanakapura Road. 9343751639

BDA APPROVED BCC Layout, 30x40, 40x60, 9000/- Banashankari 6th Stage, 50x80, 80" Road.19000/- 9845704509

Kempegowda Layout

***NADAPRABHU* KEMPEGOWDA** Layout 9th block 'D' Sector 82x65 South West Corner Commercial site sale. ₹.6500/-.sqft. Contact:9686469799

KEMPEGOWDA LAYOUT BDA Site, 50×80 Double Road 1st block K Sector Near Peripheral Ring Road Commercial: 7899570235

BDA KEMPEGOWDA layout. 50×80. 300 Feet Road Commercial Site, Owner. Contact. No. 9663005859/ 7899570235

BDA SITE Nadaprabhu Kempegowda Layout, Ist Block, adjacent 300 Feet Road, 30x40 East facing,Call: 9448793428

Nelamangala

NELAMANGALA NEAR BGS Medical Collage Arasinakunte, KALPATARU Layout, NDA 'A' Katha East 3270 Sft: 9353348309/ 9448735404

"30X50 SOUTH-FACING site for sale @ Nelamangala Rashi developers close to D-Mart Tumkur highway. 9845268611"

Ombr Layout

OMBR LAYOUT Excellent location East Facing 30x40 BDA SITE Price Rs 19,000/ Sft Call: 98451-84220

Sanjaynagar

RMV BHOOPASANDRA BDA Site 29'x57' East 40' Road besides Central Excise, Off Chawla Road Rs. 3.30 Crore Call 9980555558

Uttarahalli

UTTARAHALLI GATED Layout , A'Khatha Site Sale, 40x61, North Rs.9950/-psft Negotioble : 9740150364, 8884707773

Vishweshwariah Layout

AVAILABLE BDA Sites 40X60, 30X40 Vishweshwaraiah Layout 1st Block, 2nd Block 40ft Road Good Location: 9844603127

"30X40 RESIDENTIAL BDA SITES SALE 6TH BLOCK VISHVESHWARAIAH LAYOUT, 30X50 RAILWAY LAYOUT [NEAR RTO]- 9845143579"

Kengeri

SITE FOR Sale Kengeri Kodipalya 30×40 westfacing BBMP 'B' Katha, Bank loan available. Price 65,00,000: Contact: 9035699974

House

Basaveshwaranagar

60X40 EAST facing Independent House at prime location for Sale 45 squares building, Ground, 1st & 2nd Floor with 5 Bedrooms attached bathroom, built with teak wood, Italian Marble Tiles, at BEML Layout, Basaveshwaranagar, Bangalore-560079. Clear Titles & 'A' Katha, Rs.5.10 Crores (slightly negotiable). Party going out of station. Immediate Registration. 9845765559/ 9845043282

HOUSE FOR sale 40x60 west, Ground and first floor, Good location, Near Pavithra paradise. 9845527196.

Girinagar

40X60 OLD House for Sale, East Facing at Girinagar, full Cheque Payment. Contact: 9880270482

J P Nagar

SALE BRAND New House JP.NAGAR 9th Phase 40x60 Royal Park Residency 1st Phase 5BHK Modern Interiors Rs.4.5 Crores Negotiable. 'SHIVU' 9880004149

Nagarabhavi

"SALE: 4BHK Duplex House 3.25 Crore and 3BHK old house 2.30 Crore. Nagarabhavi near Papareddypalya, Deepa complex. 9845014134"

R T Nagar

OLD HOUSE SALE G+1, 6 Houses, Receiving Rent 36,000. Size:22x62 West Facing A.K.Ashram Road (Behind Kabir Ashram) RT.Nagar, Bangalore 12000`Per.Sft Negotiable. Call: 8970159998 7730218999.

Commercial Building

Banashankari

NF 9000 sft commercial Building (5 Flr) on site measuring 2650sq ft @Bank Colony- BSK 1st Stg for Sale. Brokers Excuse. 9880599012/9632190465

Basavanagudi

SALE 25X45 Commercial old Building With Tenent Thyagarajnagar East Facing 50feet road Call:9611844667 8123515830

Flat

Rajarajeshwari Nagar

SALE 2BHK 1170Sft, in Deccan Heights Ideal Homes Rajarajeshwarinagar Rs.55Lakhs: 9448508410

Farm House/ Land/ Resorts

Out-Station

SALE: MARALAVADI Fully Developed FARM HOUSE 10 Acres on 60 Feet Road. Coconut, Sandalwood, Areca Trees, etc. 1.3 Crores/ Acre Negotiable. SHIVU- 9880004149.

Home Finance

General

BEST INVESTMENT OPPORTUNITY For Middle Income Group. Buy Sites in Pre-Launch Cost to Cost Bank Loans/ Installments: 9902604714

Villas/Bunglows

Mysore

FOR SALE A beautiful residential bungalow in excess of 40 squares in Vijayanagar 1st Stage, Mysore. Price 12.5 Cr No brokers Contact 97409 07835

Sadashiva Nagar

PRIME RESIDENTIAL VACANT PLOT 45X60 OPPOSITE PARK ACROSS SADASHIVANAGAR SWIMMING POOL SOUTH-FACE CONTACT OWNER 98440 18823

JOB OPPORTUNITIES

General

EMPLOYEE NEEDED! Business Development Office for property developer company No investment, age above 30 years experienced required. Earning Rs. 50,000/- per month Retired persons are eligible. Contact:- 9845334751.

Teachers/ Professors

V.V.R. SCHOOL: Wanted Science Teacher for Grade 8th, 9th & 10th with minimum 2 years experience. Send Resume to Mail Id:- vvrschool2003@gmail.com/ 9901651138.

Wanted

WANTED COUNTER sales Persons Full time/ Part time (7am to 4 pm) with Guarantor. Contact: Gokul Dairy Farm, 20/3, 4th main Gandhinagar Bangalore-9. Timings 9 am to 10 am.

ಶ್ರೀ ಪ್ರಸನ್ನ ಗಣಪತಿ ಸನ್ನಿಧಿ
(ಸದಾಶಿವನಗರ ಯುವಕ ಸಂಘದ ಸಂಚಾಲಿತವಾಗಿದೆ)
15ನೇ ಅಡ್ಡರಸ್ತೆ ಸದಾಶಿವನಗರ ಬೆಂಗಳೂರು- 560080

ಶ್ರೀ ಕ್ರೋಧಿನಾಮ ಸಂವತ್ಸರ, ಜೇಷ್ಠ ಮಾಸ ಕೃಷ್ಣ ಪಕ್ಷದ ಚತುರ್ಥಿ ದಿನಾಂಕ: 25.06.2024ನೇ ಮಂಗಳವಾರ **"ಅಂಗಾರಕ ಸಂಕಷ್ಟಹರ ಚತುರ್ಥಿ"** ಅಂಗವಾಗಿ ವಿಶೇಷ ಸೇವೆಗಳು ಹಾಗೂ ಪೂಜಾ ಕೈಂಕರ್ಯಗಳನ್ನು ಆಯೋಜಿಸಲಾಗಿದೆ.

ಸೇವಾ ವಿವರ

ಬೆಳಗ್ಗೆ 6.00 ರಿಂದ 7.00 ರವರೆಗೆ : **ಗಣ ಹೋಮ**
ಬೆಳಗ್ಗೆ 7.00 ರಿಂದ 8.00 ರವರೆಗೆ : **ಮಹಾಭಿಷೇಕ**
ಸಂಜೆ 5.30 ರಿಂದ 6.30 ರವರೆಗೆ : **ವಿಶೇಷ ಅಭಿಷೇಕ**

ವಿಶೇಷ ಕಾರ್ಯಕ್ರಮ ಸಂಜೆ 7.00 ರಿಂದ 8.30 ರವರೆಗೆ ಸಂಗೀತ ರಸ-ಸಂಜೆ, ಭಕ್ತಿಗೀತ ಗಾಯನ ವಿದುಷಿ- ರಮ್ಯ ವಶಿಷ್ಠ ಮತ್ತು ತಂಡದವರಿಂದ

8:30ಕ್ಕೆ ಸರಿಯಾಗಿ ಮಹಾಮಂಗಳಾರತಿ ನಂತರ ಪ್ರಸಾದ ವಿನಿಯೋಗ, ಭಕ್ತಾದಿಗಳು ಕಾಣಿಕೆಯನ್ನು ನಗದು ಹಾಗೂ ವಸ್ತು ರೂಪದಲ್ಲಿ ನೀಡುವುದನ್ನು ಗೌರವಪೂರ್ವಕ ಸ್ವೀಕರಿಸಿ ರಸೀದಿ ನೀಡಲಾಗುವುದು ಅಥವಾ ನೇರವಾಗಿ ಸಂಸ್ಥೆಯ ಖಾತೆಗೆ ನಗದು ಜಮಾ ಮಾಡಬಹುದು.

ಖಾತೆ ಸಂಖ್ಯೆ- 520101199721390
ಐ.ಎಫ್. ಎಸ್. ಸಿ - UBIN0906417
ಬ್ಯಾಂಕ್ ಮತ್ತು ಶಾಖೆ : ಯೂನಿಯನ್ ಬ್ಯಾಂಕ್, ಸದಾಶಿವನಗರ.

ಸರ್ವರಿಗೂ ಆದರದ ಸುಸ್ವಾಗತ
ಎಸ್. ವೈ. ಎ.

PERSONAL

Change of Name

I, SHARATH S/o Ramani Balakrishna Pillai Arumugam Residing at Karpaga Nilaya, 3rd Cross Road, Near Gokul College Road, Harohalli Kolar. Have Changed my name to Sharath Arumugam Ramani vide affidavit dated 15.06.2024 before Notary M Ramalinge Gowda Kolar Henceforth I shall be called as Sharath Arumugam Ramani only.

I, PRAMOD KUMAR N, residing at Bengaluru-78 have changed my name as PRAMODH KUMAR N, vide affidavit dated 21/06/2024 before Notary K.S.Bammappanavar, Bengaluru


CHANGE OF NAME
I, **RAJESHWARI,** Spouse of No. 14217413A Ex Naik T.B Shadakshara Aradhya, residing at No. 325, Maruthi Nilaya, 8th Main, HRBR 1st Block, Kalyana Nagar, Bengaluru-43, have changed my name from **RAJESHWARI** To **S. RAJESHWARI (DOB: 10-06-1961)** vide affidavit dated 21-06-2024 before Notary Y.R. Chandrasekar, Bengaluru.

CHANGE OF NAME
I, **VISWAJEET SANJAY NADGOUDA,** residing at C-2 Villa, Ranka Colony, Bilekahalli, Bengaluru-76 have changed my name to **VISHWAJEET NADGOUDA** vide affidavit dated 21.06.2024, before notary A Gerard, Bengaluru. Henceforth I shall be called **VISHWAJEET NADGOUDA** only.

CHANGE OF NAME
I, **GAYATRI TIMMARAJU,** Residing at B-017, Sobha Coral, Jakkur, Bangalore-560064, have change my name from **GAYATRI RADHAMADHU RAO** To **GAYATRI TIMMARAJU** vide affidavit dated 21/06/2024 before notary Chandrakala, Bengaluru. Henceforth I shall be called **GAYATRI TIMMARAJU** only.

CHANGE OF NAME
I, **JYOTHI SHAMSUNDER MUTHREJA** residing at Benson Town, Bangalore- 46, declare that I have changed my name from **JYOTHI SHAM MUTHREJA** to **JYOTHI SHAMSUNDER MUTHREJA** vide affidavit dt 04.06.2024 before Notary K V Mani, Bangalore.

I, SHAIK IMTHIYAZ, have changed my name to SHAIK IMTHYAZ, Vide Affidavit dated 21.06.2024 sworn before advocate and notary Ambujakshi, Bangalore



DH DECCAN HERALD Classifieds More value, more impact
ಪ್ರಜಾವಾಣಿ

REAL ESTATE

BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY

@ 2481/-*
FOR 15 WORDS



www.dhclassifieds.com

BOOK NOW

Book your ad with us now! For more details contact:

+91 9845114560 | +91 9901641752 | +91 9886213331
+91 9731810277 | +91 9900428036 | 080-45557163/164

*Conditions apply

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ




ಚರ್ಚೆ: ಅಕಾಡೆಮಿ, ಪ್ರಾಧಿಕಾರಗಳು ಸರ್ಕಾರದ ಅಡಿಯಾಳುಗಳು ಎಂದು ಭಾವಿಸುವುದು ಸರಿಯೇ?
ಇಂದು ಮೂರು ಜಿಲ್ಲೆಗಳಿಗೆ 'ರೆಡ್ ಅಲರ್ಟ್' 5
'ಪಕ್ಷ ವ್ಯವಸ್ಥೆ ಇಲ್ಲದೆ ಸರ್ಕಾರ, ಅಕಾಡೆಮಿಗಳಿಲ್ಲ' 8

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
77,209	23,501	₹75,070 (ಬೆಂಗಳೂರು)	₹93,500 (ಬೆಂಗಳೂರು)	83.57

ಕೇಜ್ರಿವಾಲ್‌ಗೆ ತಪ್ಪದ ಜೈಲು

ನವದೆಹಲಿ(ಪಿಟಿಐ): ದೆಹಲಿ ಅಬಕಾರಿ ನೀತಿ ಹಗರಣದ ಜೊತೆ ನಂಟಿನ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್



ಅವರಿಗೆ ಜಾಮೀನು ನೀಡಿ ವಿಚಾರಣಾ ನ್ಯಾಯಾಲಯ ಹೊರಡಿಸಿದ್ದ ಆದೇಶಕ್ಕೆ ದೆಹಲಿ ಹೈಕೋರ್ಟ್ ಶುಕ್ರವಾರ ಮಧ್ಯಂತರ ತಡೆ ನೀಡಿದೆ. ಹೀಗಾಗಿ, ಅರವಿಂದ ಕೇಜ್ರಿವಾಲ್ ಅವರ ಜೈಲುವಾಸ ಮುಂದುವರಿದಿದೆ.

ಅರ್ಜಿ ವಿಚಾರಣೆ ನಡೆಸಿದ, ನ್ಯಾಯಮೂರ್ತಿ ಸುಧೀರಕುಮಾರ್ ಜೈನ್ ಅವರಿದ್ದ ರಜಾಕಾಲದ ಪೀಠ, ಸಂಬಂಧಪಟ್ಟ ಪಕ್ಷಗಾರರು ಜೂನ್ 24ರ ಒಳಗಾಗಿ ಪ್ರತಿಕ್ರಿಯೆ ಸಲ್ಲಿಸಬೇಕು ಎಂದು ಸೂಚಿಸಿದೆ.

'ಜಾಮೀನು ಆದೇಶಕ್ಕೆ ಸಂಬಂಧಿಸಿದಂತೆ ಎಲ್ಲ ದಾಖಲೆಗಳನ್ನು ಪರಿಶೀಲಿಸಬೇಕಿದೆ. ಹೀಗಾಗಿ, 2–3 ದಿನಗಳ ಕಾಲ ಆದೇಶವನ್ನು ಕಾಯ್ದಿರಿಸಲಾಗುವುದು' ಎಂದೂ ನ್ಯಾಯಪೀಠ ಹೇಳಿದೆ.

10ನೇ ಪುಟ ನೋಡಿ

ಹಣದ ಮೂಲ: ಐ.ಟಿ ತನಿಖೆ?

ಕೊಲೆ ಪ್ರಕರಣದಿಂದ ಪಾರಾಗಲು ₹ 70 ಲಕ್ಷ ಬಳಕೆ • ಕಸ್ಟಡಿ ಅಂತ್ಯ ಸಂಭವ

• ಆದಿತ್ಯ ಕೆ.ಎ.



ಬೆಂಗಳೂರು: ರೇಣುಕಸ್ವಾಮಿ ಕೊಲೆ ಪ್ರಕರಣ ಮುಚ್ಚಿ ಹಾಕಲು ಆರೋಪಿಗಳು ₹70 ಲಕ್ಷ ಹಣ ಬಳಕೆ ಮಾಡಿರುವುದು ತನಿಖೆಯಿಂದ ಗೊತ್ತಾಗಿದ್ದು, ಹಣದ ಮೂಲ ಪತ್ತೆಗೆ ತನಿಖಾಧಿಕಾರಿಗಳು ಮುಂದಾಗಿದ್ದಾರೆ.

ಪ್ರಕರಣದಲ್ಲಿ ದೊಡ್ಡ ಮೊತ್ತದ ಹಣವನ್ನು ಜಪ್ತಿ ಮಾಡಲಾಗಿದೆ. ಬೃಹತ್ ಮೊತ್ತದ ನಗದು ಕೈಬದಲಾವಣೆ ಯಾಗಿರುವ ಕುರಿತು ಪೊಲೀಸರು ಆದಾಯ ತೆರಿಗೆ (ಐ.ಟಿ) ಇಲಾಖೆ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ. ಹಣದ ವಹಿವಾಟಿನ ಬಗ್ಗೆ ಐ.ಟಿ ಅಧಿಕಾರಿಗಳು ತನಿಖೆ ಆರಂಭಿಸುವ ಸಾಧ್ಯತೆ ಇದೆ.

'ಹಣದ ಮೂಲ ಪತ್ತೆ ಮಾಡುವಂತೆ ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳಿಗೆ ಪಶ್ಚಿಮ ವಿಭಾಗದ ಪೊಲೀಸರು ಕೋರಿದ್ದಾರೆ. ಐ.ಟಿ ಅಧಿಕಾರಿಗಳು, ಹಣ ಯಾರಿಗೆಲ್ಲಾ ವರ್ಗಾವಣೆಗೊಂಡಿತ್ತು ಎಂಬುದರ ಕುರಿತು ತನಿಖೆ ನಡೆಸಲಿದ್ದಾರೆ' ಎಂದು ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

'ಆರೋಪಿ ಪ್ರದೋಷ್ ಮೂಲಕ, ಪೊಲೀಸರಿಗೆ ಶರಣಾದ ಆರೋಪಿಗಳಾದ ಕಾರ್ತಿಕ್, ರಾಘವೇಂದ್ರ, ನಿಖಿಲ್, ಕೇಶವ ಮೂರ್ತಿಗೆ ತಲಾ ₹5 ಲಕ್ಷವನ್ನು ದರ್ಶನ್ ನೀಡಿದ್ದರು' ಎಂದು ಮೂಲಗಳು ತಿಳಿಸಿವೆ.

5ನೇ ಪುಟ ನೋಡಿ

ಏನೇನು ಸಾಕ್ಷ್ಯ ಸಂಗ್ರಹ

- 28 ಸ್ಥಳಗಳಲ್ಲಿ ಮಹಜರು
- 139 ಸಾಕ್ಷ್ಯ ಸಂಗ್ರಹ
- ₹70 ಲಕ್ಷ, ಇದುವರೆಗೂ ಆರೋಪಿಗಳಿಂದ ಜಪ್ತಿ ಮಾಡಲಾದ ಹಣ
- 17 ಆರೋಪಿಗಳ ಬಂಧನ
- 4 ಪೊಲೀಸ್ ಕಸ್ಟಡಿಯಲ್ಲಿರುವ ಆರೋಪಿಗಳು
- 13 ನ್ಯಾಯಾಂಗ ಬಂಧನದಲ್ಲಿರುವ ಆರೋಪಿಗಳು

ಪವಿತ್ರಾಗೌಡ ವಿಚಾರಣಾಧೀನ ಕೈದಿ 6024

ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹ ಸೇರಿರುವ ಪವಿತ್ರಾಗೌಡ ಅವರಿಗೆ ವಿಚಾರಣಾಧೀನ ಕೈದಿ ನಂಬರ್: 6024 ನೀಡಲಾಗಿದೆ.

ಕಾರಾಗೃಹದ 'ಡಿ' ಬ್ಯಾರಕ್‌ನಲ್ಲಿ ಪವಿತ್ರಾ ಅವರನ್ನು ಇರಿಸಲಾಗಿದೆ. ಉಳಿದ, ಆರೋಪಿಗಳನ್ನು ಪ್ರತ್ಯೇಕ ಸೆಲ್‌ನಲ್ಲಿ ಇಡಲಾಗಿದೆ. ಗುರುವಾರ ರಾತ್ರಿ 8 ಗಂಟೆ ಸುಮಾರಿಗೆ ಪವಿತ್ರಾ ಸೇರಿ ಉಳಿದ ಆರೋಪಿಗಳನ್ನು ಪೊಲೀಸರು ಭದ್ರತೆಯಲ್ಲಿ ಕರೆದೊಯ್ದು ಜೈಲಿಗೆ ಬಿಟ್ಟು ಬಂದಿದ್ದರು.

'ಪವಿತ್ರಾ ತಮ್ಮ ಬ್ಯಾರಕ್‌ನಲ್ಲಿ ಮೌನಕ್ಕೆ ಜಾರಿದ್ದಾರೆ. ಇತರೆ ಕೈದಿಗಳೊಂದಿಗೆ ಅಷ್ಟಾಗಿ ಮಾತುಕತೆ ನಡೆಸುತ್ತಿಲ್ಲ. ತಿಂಡಿ, ಊಟ ನೀಡಿದರೆ ಸ್ವಲ್ಪ ಮಾತ್ರವೇ ಸೇವಿಸುತ್ತಿದ್ದಾರೆ. ಶುಕ್ರವಾರ ಮಧ್ಯಾಹ್ನ ಅವರ ಸಂಬಂಧಿಕರು ಕಾರಾಗೃಹಕ್ಕೆ ಬಂದು ಮಾತನಾಡಿಸಿ ತೆರಳಿದರು' ಎಂದು ಕಾರಾಗೃಹದ ಮೂಲಗಳು ತಿಳಿಸಿವೆ.

ಜೀವಾವಧಿ ಶಿಕ್ಷೆಯ ಕೃತ್ಯ

ಆರೋಪಿಗಳು ಪ್ರಭಾವಿಗಳು, ಹಣಬಲ ಹಾಗೂ ಅಭಿಮಾನಿ ಬಳಗ ಹೊಂದಿದ್ದಾರೆ. ಇವರಿಗೆ ಜಾಮೀನು ನೀಡಿದರೆ ತಮ್ಮ ಪ್ರಭಾವ ಬಳಸಿ ಸಾಕ್ಷಿದಾರರಿಗೆ ಬೆದರಿಕೆ ಹಾಕುವ ಹಾಗೂ ವ್ಯವಸ್ಥಿತ ರೀತಿಯಲ್ಲಿ ಮತ್ತಷ್ಟು ಸಾಕ್ಷ್ಯ ನಾಶಪಡಿಸುವ ಸಾಧ್ಯತೆ ಇದೆ. ಪ್ರಕರಣದ ಎಲ್ಲ ಆರೋಪಿಗಳು ಕೃತ್ಯ, ಒಳಸಂಚು ಹಾಗೂ ಸಾಕ್ಷ್ಯನಾಶದಲ್ಲಿ ಭಾಗಿ ಆಗಿರುವುದು ಸಾಕ್ಷಿದಾರರ ಹೇಳಿಕೆಗಳು, ತಾಂತ್ರಿಕ ಸಾಕ್ಷ್ಯಗಳಲ್ಲಿ ಗೊತ್ತಾಗಿದೆ. ಇದು ಜೀವಾವಧಿ ಶಿಕ್ಷೆಯ ಕೃತ್ಯವಾಗಿದ್ದು ಜಾಮೀನು ಮಂಜೂರು ಮಾಡಬಾರದು ಎಂದು ನ್ಯಾಯಾಲಯದಲ್ಲಿ ಕೋರಲಾಗಿದೆ. ಇದನ್ನೂ ಉಲ್ಲೇಖಿಸಿಯೇ ರಿಮಾಂಡ್ ಅರ್ಜಿ ಸಲ್ಲಿಸಲಾಗಿದೆ.

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಲೈಂಗಿಕ ದೌರ್ಜನ್ಯ: ಸೂರಜ್ ಮೇಲೂ ಆರೋಪ

ಪ್ರಜಾವಾಣಿ ವಾರ್ತೆ



ಹಾಸನ: ಮಾಜಿ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ಲೈಂಗಿಕ ದೌರ್ಜನ್ಯದ ಆರೋಪಗಳ ತನಿಖೆ ನಡೆಯುತ್ತಿರುವಾಗಲೇ, ಅವರ ಸಹೋದರ, ವಿಧಾನ ಪರಿಷತ್ ಸದಸ್ಯ ಡಾ. ಸೂರಜ್ ರೇವಣ್ಣ ಕೂಡ ಲೈಂಗಿಕ ದೌರ್ಜನ್ಯ ಎಸಗಿದ ಆರೋಪಕ್ಕೆ ಗುರಿಯಾಗಿದ್ದಾರೆ.

'ನನ್ನ ಮೇಲೆ ಸೂರಜ್ ರೇವಣ್ಣ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ' ಎಂದು ಅರಕಲಗೂಡು ಜೆಡಿಎಸ್ ಕಾರ್ಯಕರ್ತ ಎನ್ನಲಾದ ವ್ಯಕ್ತಿ, ಬೆಂಗಳೂರಿನಲ್ಲಿ ಗೃಹ ಸಚಿವರು, ಪೊಲೀಸ್ ಮಹಾನಿರ್ದೇಶಕರಿಗೆ ದೂರು ಸಲ್ಲಿಸಿದ್ದಾರೆ ಎಂದು ತಿಳಿದು ಬಂದಿದೆ. ಆದರೆ, ಈ ಬಗ್ಗೆ ಜಿಲ್ಲೆಯಲ್ಲಿ ಯಾವುದೇ ಪ್ರಕರಣ ದಾಖಲಾಗಿಲ್ಲ.

ಇದಕ್ಕೆ ಪ್ರತಿಯಾಗಿ, ಆರೋಪ ಮಾಡಿರುವ ವ್ಯಕ್ತಿಯ ವಿರುದ್ಧ ಹೊಳೆನರಸೀಪುರ ನಗರ ಠಾಣೆಯಲ್ಲಿ ಶುಕ್ರವಾರ ಪ್ರಕರಣ ದಾಖಲಾಗಿದೆ. '₹5 ಕೋಟಿಗೆ ಬೇಡಿಕೆ ಇಟ್ಟಿದ್ದು, ಹಣ ನೀಡದಿದ್ದರೆ, ಲೈಂಗಿಕ ದೌರ್ಜನ್ಯದ ಆರೋಪ ಮಾಡುವುದಾಗಿ ಬೆದರಿಕೆ ಹಾಕಿದ್ದಾನೆ' ಎಂದು ಸೂರಜ್ ಬ್ರಿಗೇಡ್‌ನ ಖಜಾಂಚಿ ಶಿವಕುಮಾರ್ ಎಚ್.ಎಲ್. ಎಂಬುವವರು ದೂರಿನಲ್ಲಿ ಆರೋಪಿಸಿದ್ದಾರೆ.

'ಖಾಸಗಿ ಫೈನಾನ್ಸ್‌ನಲ್ಲಿ ಕೆಲಸ ಮಾಡುತ್ತಿದ್ದಾಗ, ಈ ವ್ಯಕ್ತಿ ಪರಿಚಿತನಾಗಿದ್ದ. ನಾನು ಸೂರಜ್ ಬ್ರಿಗೇಡ್ ಖಜಾಂಚಿ ಆಗಿರುವುದರಿಂದ, ಸೂರಜ್ ಅವರನ್ನು ಭೇಟಿ ಮಾಡಿಸುವಂತೆ ಕೇಳಿದ್ದ. ಅದರಂತೆ ಜೂನ್ 16ರಂದು ಸೂರಜ್ ಅವರು ಚನ್ನರಾಯಪಟ್ಟಣ ತಾಲ್ಲೂಕಿನ ಗನ್ನಿಗಡದ ತೋಟದ ಮನೆಯಲ್ಲಿ ಸಿಗುತ್ತಾರೆ ಎಂದು ತಿಳಿಸಿದ್ದೆ' ಎಂದು ವಿವರಿಸಿದ್ದಾರೆ.

'ಅಂದು ಸೂರಜ್ ಅವರನ್ನು ಭೇಟಿ ಮಾಡಿದ್ದು, ಕೆಲಸ ಕೊಡಿಸಿ ಎಂದು ಕೇಳಿದ್ದ. ಆದರೆ, ಸೂರಜ್ ಈಗ ಸಾಧ್ಯವಿಲ್ಲ ಮುಂದೆ ನೋಡೋಣ ಎಂದಿದ್ದಾರೆ ಎಂದು ಆ ವ್ಯಕ್ತಿ ತಿಳಿಸಿದ್ದ. ಈಗ ನೀನೂ ಸಹಾಯ ಮಾಡದಿದ್ದರೆ, ಸೂರಜ್ ರೇವಣ್ಣ ನನ್ನ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಎಂದು ಆರೋಪ ಮಾಡುವುದಾಗಿ ಬೆದರಿಕೆ ಹಾಕಿದ್ದ' ಎಂದು ಶಿವಕುಮಾರ್ ಆರೋಪಿಸಿದ್ದಾರೆ.

5ನೇ ಪುಟ ನೋಡಿ

ಪೆನ್‌ಡ್ರೈವ್ ಹಂಚಿಕೆ: ತನಿಖೆ ಚುರುಕು

ಹಾಸನ: ಮಾಜಿ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ಲೈಂಗಿಕ ದೌರ್ಜನ್ಯ, ಅಶ್ಲೀಲ ವಿಡಿಯೊ ಪ್ರಕರಣದ ತನಿಖೆ ನಡೆಸುತ್ತಿರುವ ಎಸ್ಐಟಿ ಅಧಿಕಾರಿಗಳು ಪೆನ್‌ಡ್ರೈವ್ ಹಂಚಿಕೆ ಮಾಡಿದವರ ಬೆನ್ನು ಹತ್ತಿದ್ದಾರೆ. ಪ್ರಜ್ವಲ್ ಬಂಧನದ ನಂತರ ಪ್ರಕರಣಕ್ಕೆ ಸಂಬಂಧಿಸಿದ ಇನ್ನೊಂದು ಆಯಾಮದ ತನಿಖೆಯನ್ನು ಚುರುಕುಗೊಳಿಸಿದ್ದಾರೆ.

5ನೇ ಪುಟ ನೋಡಿ

ಜಾರ್ಖಂಡ್ ವ್ಯಕ್ತಿಯಿಂದ ಕೃತ್ಯ: ಮಗುವನ್ನು ರಕ್ಷಿಸಿ ಪೋಷಕರಿಗೆ ಒಪ್ಪಿಸಿದ ಪೊಲೀಸರು

ಮಗು ಅಪಹರಿಸಿ ₹10 ಲಕ್ಷಕ್ಕೆ ಬೇಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಗು ಅಪಹರಿಸಿ ₹10 ಲಕ್ಷಕ್ಕೆ ಬೇಡಿಕೆ ಇಟ್ಟಿದ್ದ ಜಾರ್ಖಂಡ್‌ನ ಆರೋಪಿಯನ್ನು ಎಲೆಕ್ಟ್ರಾನಿಕ್ ಸಿಟಿ ಪೊಲೀಸರು ಬಂಧಿಸಿದ್ದಾರೆ.

ಜಾರ್ಖಂಡ್‌ನ ಜಸ್ಮುದ್ದೀನ್ ಶೇಖ್ (25) ಬಂಧಿತ ಆರೋಪಿ.

'ಜೂನ್ 17ರಂದು ಸಂಜೆ 6 ಗಂಟೆ ಸುಮಾರಿಗೆ ಪ್ರಗತಿನಗರದ ಚಿಕ್ಕತೋಗೂರು ಮುಖ್ಯರಸ್ತೆಯಲ್ಲಿ ಆಟವಾಡುತ್ತಿದ್ದ ಮಗುವನ್ನು ಅಪಹರಣ ಮಾಡಿದ್ದ. ಮಗುವನ್ನು ಬೊಮ್ಮನಹಳ್ಳಿ ಸೇರಿ ವಿವಿಧೆಡೆ ಆಟೊದಲ್ಲಿ ಕರೆದೊಯ್ದು ಸುತ್ತಾಡಿಸಿದ್ದ.

ನಂತರ, ವಾಟ್ಸ್‌ಆ್ಯಪ್ ಕರೆ ಮಾಡಿ ಪೋಷಕರಿಗೆ ಹಣಕ್ಕೆ ಬೇಡಿಕೆ ಇಟ್ಟಿದ್ದ. ತಕ್ಷಣವೇ ಅವರು ನೀಡಿದ ದೂರು ಆಧರಿಸಿ ಆರೋಪಿಯನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಕರೆ ಆಧರಿಸಿ ತಂತ್ರಜ್ಞಾನದ ನೆರವಿನಿಂದ ಜೂನ್ 18ರ ಮಧ್ಯ ರಾತ್ರಿ ಅಸ್ಟೋರಿಯಾ ಪಾರ್ಕ್ ಅಪಾರ್ಟ್‌ಮೆಂಟ್‌ನ ಫ್ಲ್ಯಾಟ್‌ನಿಂದ ಆರೋಪಿಯನ್ನು ವಶಕ್ಕೆ ಪಡೆಯಲಾಯಿತು' ಎಂದು ಪೊಲೀಸರು ಹೇಳಿದರು.

ಆರೋಪಿ ಹೋಟೆಲ್ ನಡೆಸುತ್ತಿದ್ದ. ಹೋಟೆಲ್ ಉದ್ಯಮದಲ್ಲಿ ನಷ್ಟಕ್ಕೆ ಒಳಗಾದ ಆರೋಪಿ ಮಕ್ಕಳನ್ನು ಅಪಹರಿಸಿ ಪೋಷಕರನ್ನು ಬೆದರಿಸಿ ಹಣ ಸುಲಿಗೆ ಮಾಡಲು ಸಂಚು ರೂಪಿಸಿದ್ದ. ಇದಕ್ಕೂ ಮೊದಲು ಇಬ್ಬರು ಮಕ್ಕಳಿಗೆ ಕೇಕ್ ಕೊಡಿಸುವ ನೆಪದಲ್ಲಿ ಅಪಹರಣ ಮಾಡಲು ಮುಂದಾಗಿದ್ದ. ಅದು ಸಾಧ್ಯವಾಗಿರಲಿಲ್ಲ' ಎಂದು ಪೊಲೀಸರು ಹೇಳಿದರು.

'ರಕ್ಷಣೆ ಮಾಡಿದ ಮಗವನ್ನು ಪೋಷಕರ ವಶಕ್ಕೆ ಒಪ್ಪಿಸಲಾಗಿದೆ' ಎಂದು ತಿಳಿಸಿದರು.

ಬಾಡಿಗೆಗೆ ಕಾರು ಪಡೆದು ವಂಚನೆ

ಬೆಂಗಳೂರು: ಕಾರು ಬಾಡಿಗೆಗೆ ಪಡೆದು ನಂತರ ಅದಕ್ಕೆ ಅಳವಡಿಸಿದ್ದ ಜಿಪಿಎಸ್ ತೆಗೆದು ಮಾರಾಟ ಮಾಡುತ್ತಿದ್ದ ಆರೋಪಿಯನ್ನು ಹುಳಿಮಾವು ಠಾಣೆ ಪೊಲೀಸರು ಬಂಧಿಸಿದ್ದಾರೆ.

ಲಗ್ಗೆರೆ ನಿವಾಸಿ ಶ್ರೀನಿವಾಸ್ (32) ಬಂಧಿತ ಆರೋಪಿ. ಬಂಧಿತ ಆರೋಪಿಯಿಂದ ₹90 ಲಕ್ಷ ಮೌಲ್ಯದ 9 ಕಾರು ವಶಪಡಿಸಿಕೊಳ್ಳಲಾಗಿದೆ.

'ಆರೋಪಿಯು ಮಾಲೀಕರಿಂದ ಕಾರುಗಳನ್ನು ಬಾಡಿಗೆಗೆ ಪಡೆದುಕೊಳ್ಳುತ್ತಿದ್ದ. ನಂತರ, ಕಾರಿನಲ್ಲಿರುತ್ತಿದ್ದ ಜಿಪಿಎಸ್ ಅನ್ನು ತೆಗೆದು ಹಾಕಿ ನಕಲಿ ದಾಖಲೆಗಳನ್ನು ಸೃಷ್ಟಿಸಿ, ಕಾರು ಸಹಿತ ಪರಾರಿ ಆಗುತ್ತಿದ್ದ. ಬಳಿಕ ಮಾಲೀಕರಿಗೆ ಮತ್ತು ಕಾರು ಖರೀದಿದಾರರಿಗೆ ಮೋಸ ಮಾಡುತ್ತಿದ್ದ' ಎಂದು ಪೊಲೀಸರು ಹೇಳಿದರು.

'ಠಾಣಾ ವ್ಯಾಪ್ತಿಯಲ್ಲಿ ಮಾರ್ಚ್ 25ರಂದು ಕಾರು ಬಾಡಿಗೆಗೆ ಕೊಡುವವರಿಂದ ಕಾರನ್ನು ಆರೋಪಿ ಶ್ರೀನಿವಾಸ್ ತಿಂಗಳ ಮಟ್ಟಿಗೆ ಬಾಡಿಗೆಗೆ ಪಡೆದುಕೊಂಡಿದ್ದ. ನಂತರ, ಅವರ ಕಾರಿಗೆ ಅಳವಡಿಸಿದ್ದ ಜಿಪಿಎಸ್ ಅನ್ನು ತೆಗೆದುಹಾಕಿ ಬಾಡಿಗೆಗೆ ಕಾರು ಕೊಟ್ಟವರ ಸಂಪರ್ಕಕ್ಕೆ ಸಿಗದೆ ತಲೆಮರೆಸಿಕೊಂಡಿದ್ದ. ಕಾರು ಮಾಲೀಕರು ನೀಡಿದ ದೂರು ಆಧರಿಸಿ ತನಿಖೆ ನಡೆಸಿ ಆರೋಪಿಯನ್ನು ಬಂಧಿಸಲಾಗಿದೆ. ಜೂನ್ 9ರಂದು ಶಿವಮೊಗ್ಗದಲ್ಲಿ ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಿದಾಗ ಕೃತ್ಯ ಎಸಗಿದ್ದನ್ನು ಬಾಯ್ಬಿಟ್ಟಿದ್ದಾನೆ. ಹೆಚ್ಚಿನ ವಿಚಾರಣೆಗಾಗಿ ಆರೋಪಿಯನ್ನು ಆರು ದಿನ ಕಸ್ಟಡಿಗೆ ಪಡೆದುಕೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

ವಿಲಾಸಿ ಜೀವನಕ್ಕಾಗಿ ಸೈಕಲ್ ಕಳ್ಳತನ

ಅಪರಾಧ ಸುದ್ದಿ

ಬೆಂಗಳೂರು: ವಿಲಾಸಿ ಜೀವನಕ್ಕಾಗಿ ನಗರದ ವಿವಿಧೆಡೆ ದುಬಾರಿ ಬೆಲೆಯ ಸೈಕಲ್‌ಗಳನ್ನು ಕಳವು ಮಾಡುತ್ತಿದ್ದ ಕಳ್ಳನನ್ನು ಕೋಣನಕುಂಟೆ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಜಿಗಣಿ ಭರಮಸಾಗರ ನಿವಾಸಿ ನಾರಾಯಣಸ್ವಾಮಿ(43) ಬಂಧಿತ.

ಆರೋಪಿಯಿಂದ ₹12 ಲಕ್ಷದ 60 ಸೈಕಲ್‌ಗಳನ್ನು ಜಪ್ತಿ ಮಾಡಲಾಗಿದೆ.
ಜೆ.ಪಿ.ನಗರ 8ನೇ ಹಂತದ ಸಾರಥಿ ನಗರದ ನಿವಾಸಿಯೊಬ್ಬರು ಸೈಕಲ್ ಕಳ್ಳತನವಾಗಿತ್ತು. ಈ ಸಂಬಂಧ ದಾಖಲಾದ ದೂರಿನ ಮೇರೆಗೆ ತನಿಖೆ ನಡೆಸಿ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

'ಆರೋಪಿ ಅವಿವಾಹಿತನಾಗಿದ್ದು, ಸೈಕಲ್ ಕಳ್ಳತನವನ್ನೆ ಕಸುಬಾಗಿಸಿಕೊಂಡಿದ್ದ. ವಿಲಾಸಿ ಜೀವನಕ್ಕೆ ಸುಲಭವಾಗಿ ಹಣ ಗಳಿಸುವ ಉದ್ದೇಶದಿಂದ ಸೈಕಲ್‌ಗಳನ್ನು ಕಳ್ಳತನ ಮಾಡುತ್ತಿದ್ದ. ನಗರದ ಹಲವು ಕಡೆ ಸುತ್ತಾಡಿ ಮನೆ ಎದುರು, ಪಾರ್ಕಿಂಗ್ ಸ್ಥಳಗಳಲ್ಲಿ ನಿಲುಗಡೆ ಮಾಡಿದ ದುಬಾರಿ ಸೈಕಲ್‌ಗಳನ್ನು ಗುರಿಯಾಗಿಸಿ ಕಳ್ಳತನ ಮಾಡುತ್ತಿದ್ದ. ಅವುಗಳನ್ನು ಆನೇಕಲ್, ಜಿಗಣಿ ಸೇರಿ ಹಲವು ಕಡೆ ಮಾರಾಟ ಮಾಡುತ್ತಿದ್ದ' ಎಂದು ಪೊಲೀಸರು ಹೇಳಿದರು.

'ಆರೋಪಿಯು ಈ ಹಿಂದೆಯೂ ಸೈಕಲ್ ಕಳವು ಪ್ರಕರಣದಲ್ಲಿ ಹಲವು ಬಾರಿ ಬಂಧನಕ್ಕೆ ಒಳಗಾಗಿ ಜೈಲು ಸೇರಿದ್ದ. ಜಾಮೀನು ಪಡೆದು ಬಿಡುಗಡೆಯಾದ ಬಳಿಕ ಮತ್ತೆ ತನ್ನ ಹಳೇ ಚಾಳಿ ಮುಂದುವರಿಸಿದ್ದ. ಆರೋಪಿಯ ಬಂಧನದಿಂದ ಕೋಣನಕುಂಟೆ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿದ್ದ ಮೂರು ಸೈಕಲ್ ಕಳವು ಪ್ರಕರಣಗಳು ಪತ್ತೆಯಾಗಿವೆ.

ಆರೋಪಿಯು ವಿಚಾರಣೆ ವೇಳೆ ನೀಡಿದ ಮಾಹಿತಿ ಮೇರೆಗೆ ಬುಕ್ಕಸಾಗರ ಹಳ್ಳಿಯಿಂದ 25 ಸೈಕಲ್‌ಗಳು, ಬೇಗೂರು ಕೊಪ್ಪ ರಸ್ತೆಯಲ್ಲಿ 24 ಸೈಕಲ್‌ಗಳು, ಕೊತ್ತನೂರು ಮತ್ತು ಕೋಣನಕುಂಟೆಯಲ್ಲಿ 10 ಸೈಕಲ್‌ಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

ಹಿಂದೂಜಾ ಕುಟುಂಬದ ನಾಲ್ವರಿಗೆ ಜೈಲು

ಜಿನಿವಾ (ಎಪಿ): ಮನೆಗೆಲಸದವರ ಮೇಲೆ ದೌರ್ಜನ್ಯ ಎಸಗಿದ್ದಾರೆ ಎಂಬ ಪ್ರಕರಣದಲ್ಲಿ ಪ್ರತಿಷ್ಠಿತ ಹಿಂದೂಜಾ ಕುಟುಂಬದ ನಾಲ್ವರಿಗೆ ನಾಲ್ಕರಿಂದ ನಾಲ್ಕೂವರೆ ವರ್ಷಗಳ ಜೈಲು ಶಿಕ್ಷೆ ವಿಧಿಸಿ, ಸ್ವಿಸ್ ಅಪರಾಧ ನ್ಯಾಯಾಲಯವೊಂದು ತೀರ್ಪು ನೀಡಿದೆ.

ಭಾರತ ಮೂಲದ ಉದ್ಯಮಿ ಪ್ರಕಾಶ್ ಹಿಂದೂಜಾ, ಅವರ ಪತ್ನಿ, ಮಗ ಹಾಗೂ ಸೊಸೆ ಅಪರಾಧಿಗಳು. ತೀರ್ಪು ಪ್ರಕಟವಾದಾಗ ಹಿಂದೂಜಾ ಕುಟುಂಬದ ಅವರ ವ್ಯಾಪಾರ ವ್ಯವಸ್ಥಾಪಕ ನಜಿಬ್ ಜಿಯಾಜಿ ಹಾಜರಿದ್ದರು. ಅವರಿಗೂ 18 ತಿಂಗಳ ಶಿಕ್ಷೆ ವಿಧಿಸಲಾಗಿದೆ.

ನಗರದ ಹಲವೆಡೆ ಉತ್ತಮ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಲವು ಪ್ರದೇಶಗಳಲ್ಲಿ ಶುಕ್ರವಾರ ಉತ್ತಮ ಮಳೆಯಾಗಿದೆ.


ಕಾಮಾಕ್ಷಿಪಾಳ್ಯ ಒಂದನೇ ಮುಖ್ಯ ರಸ್ತೆಯಲ್ಲಿ ಮಳೆನೀರಿನ ಜೊತೆ ಒಳಚರಂಡಿ ನೀರು ಸೋರಿಕೆಯಿಂದ ಸುಮನಹಳ್ಳಿ ಮೇಲ್ಸೇತುವೆ ಹಾಗೂ ಕೆಳಭಾಗದಲ್ಲಿ ಸಂಚಾರ ದಟ್ಟಣೆ ಉಂಟಾಗಿತ್ತು.


ನಾಯಂಡಹಳ್ಳಿ, ರಾಜರಾಜೇಶ್ವರಿ ನಗರ, ಜ್ಞಾನಭಾರತಿ, ವಿದ್ಯಾರಣ್ಯಪುರ, ಕೆಂಗೇರಿ, ಜಕ್ಕೂರು ಹಾಗೂ ಹೆಮ್ಮಿಗೆಪುರದಲ್ಲಿ ಒಂದು ಸೆಂಟಿ ಮೀಟರ್‌ಗೂ ಹೆಚ್ಚಿನ ಮಳೆಯಾಗಿದೆ.

ಮಾರುತಿ ಮಂದಿರ, ಹಂಪಿನಗರ, ವಿದ್ಯಾಪೀಠ, ವಿಶ್ವೇಶ್ವರಪುರಂ, ಬಿಳೇಕಹಳ್ಳಿ, ಕೋಣನಕುಂಟೆ, ಗೊಟ್ಟಿಗೆರೆ, ಸಿಂಗಸಂದ್ರ, ಕಾಡುಗೋಡಿ, ಕೊಡಿಗೆಹಳ್ಳಿಯಲ್ಲಿ ಉತ್ತಮ ಹಗದೂರು, ಯಲಹಂಕ, ಶೆಟ್ಟಿಹಳ್ಳಿ, ಮಳೆಯಾಗಿದೆ.



ನಗರದ ಬಿ.ವಿ.ಕೆ.ಅಯ್ಯಂಗಾರ್ ರಸ್ತೆಯಲ್ಲಿ ಮಳೆಯಲ್ಲಿ ಕೊಡೆ ಹಿಡಿದುಕೊಂಡು ಸಾಗಿದ ವಿದ್ಯಾರ್ಥಿನಿಯರು —ಪ್ರಜಾವಾಣಿ ಚಿತ್ರ / ಕಿಶೋರ್ ಕುಮಾರ್ ಬೋಳಾರ್


SUMADHURA®
DELIVERING HAPPINESS
SOME THINGS
INDICATE
A RICH LEGACY.
AND SOME,
TAKE THAT SAME LEGACY,
FORWARD.
SUMADHURA®
FOUNDATION OF HAPPINESS
It has been a fulfilling journey of over 3 decades. From young couples with dreams in their eyes, to the wise and elderly who have seen it all, to radiant families with members across 3 generations, our spaces have been sources of limitless joy. It is a legacy we take immense pride in, that of having delivered happiness to each and every customer and stakeholder.
THE TIME TO EVOLVE, IS NOW.


VALUES ROOTED IN THE PAST.
A CLEAR VISION FOR THE FUTURE.
SUMADHURA®
FOUNDATION OF HAPPINESS
The time has come to diversify beyond the residential excellence of the last 30 years. Which is why we're expanding - landmark commercial spaces, iconic retail developments, and sprawling industrial parks are all under way. As India evolves, so do we, aiming to offer even greater value, luxury, and returns to our stakeholders.
And this, is just the beginning. The legacy we've built so far, is our foundation for the future. We invite you to be a part of this journey as we move forward while staying true to our core values.
WELCOME TO A NEW SUMADHURA.
FOUNDATION OF HAPPINESS.
SUMADHURA
SCAN OUR NEW BRAND WEBSITE

ಒಂದು ಕಿ.ಮೀ. ವ್ಯಾಪ್ತಿಯಲ್ಲಿ ನಿರ್ಬಂಧ • ಬಹುಮಹಡಿ ವಾಹನ ನಿಲುಗಡೆ ಸಂಕೀರ್ಣಕ್ಕೆ ಚಾಲನೆ

ಗಾಂಧಿನಗರ: ಪಾರ್ಕಿಂಗ್ ನಿಷೇಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಗಮ ಸಂಚಾರ ಹಾಗೂ ವಾಹನ ದಟ್ಟಣೆ ನಿಯಂತ್ರಣಕ್ಕೆ ಗಾಂಧಿನಗರದ ಒಂದು ಕಿ.ಮೀ ವ್ಯಾಪ್ತಿಯ ಪ್ರಮುಖ ರಸ್ತೆಗಳಲ್ಲಿ ವಾಹನ ನಿಲುಗಡೆಯನ್ನು ನಿಷೇಧಿಸಲಾಗಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

'ಬ್ರ್ಯಾಂಡ್ ಬೆಂಗಳೂರು' ಪರಿಕಲ್ಪನೆಯಡಿ ಫ್ರೀಡಂ ಪಾರ್ಕ್ ಸಮೀಪ ಬಹುಮಹಡಿ ವಾಹನ ನಿಲುಗಡೆ ಸಂಕೀರ್ಣದ ಕಾರ್ಯಾಚರಣೆ ಮತ್ತು ನಿರ್ವಹಣೆಯನ್ನು ಶುಕ್ರವಾರ ಉದ್ಘಾಟಿಸಿ ಅವರು ಮಾತನಾಡಿದರು.

ಬೆಂಗಳೂರು ನಗರ ಜಿಲ್ಲಾಧಿಕಾರಿ ಹಾಗೂ ಪೊಲೀಸ್ ಕಮಿಷನರ್ ಅವರು ಗಾಂಧಿನಗರದ ಪ್ರಮುಖ ರಸ್ತೆಗಳಲ್ಲಿ ವಾಹನ ನಿಲುಗಡೆ ನಿರ್ಬಂಧ ಮಾಡಿದ್ದಾರೆ. ಇಲ್ಲಿನ ರಸ್ತೆ ವಿಶಾಲವಾಗಿರಬೇಕು. ಎಲ್ಲ ವ್ಯಾಪಾರಿಗಳಿಗೆ ಲಾಭವಾಗಬೇಕು ಎಂದು ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದರು.

ಈ ಬಹುಮಹಡಿ ವಾಹನ ನಿಲುಗಡೆ ಸಂಕೀರ್ಣದಲ್ಲಿ ಅತ್ಯಾಧುನಿಕ ವ್ಯವಸ್ಥೆ ಹೊಂದಿದ್ದು, ಪ್ರತಿ ಗಂಟೆಗೆ ವಾಹನ ನಿಲುಗಡೆಗೆ ₹20ರಿಂದ ₹30 ನಿಗದಿ ಮಾಡಲಾಗಿದೆ. ಎರಡು ಮೂರು ಕಾರು ಹೊಂದಿರುವವರು ಕೂಡ ಇಲ್ಲಿ ವಾಹನ ನಿಲುಗಡೆ ಮಾಡಲು ಅವಕಾಶ ಕಲ್ಪಿಸಲಾಗಿದೆ ಎಂದು ಹೇಳಿದರು.



ಫ್ರೀಡಂ ಪಾರ್ಕ್ ಸಮೀಪ ಬಿಬಿಎಂಪಿ ನಿರ್ಮಿಸಿರುವ ಬಹುಮಹಡಿ ವಾಹನ ನಿಲುಗಡೆ ಸಂಕೀರ್ಣಕ್ಕೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಶುಕ್ರವಾರ ಚಾಲನೆ ನೀಡಿದರು. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ದಿನೇಶ್ ಗುಂಡೂರಾವ್, ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಪಾಲ್ಗೊಂಡಿದ್ದರು

ವಿಧಾನಸೌಧ, ಹೈಕೋರ್ಟ್, ರೈಲು ನಿಲ್ದಾಣ ಸೇರಿದಂತೆ ಗಾಂಧಿನಗರದ ಸುತ್ತಮುತ್ತಲಿನ ಪ್ರದೇಶಕ್ಕೆ ಹೋಗಲು ಗುತ್ತಿಗೆದಾರರು ಉಚಿತ ಸಂಚಾರ ವ್ಯವಸ್ಥೆ ಮಾಡುವುದಾಗಿ ಹೇಳಿದ್ದಾರೆ.

ಮುಖ್ಯಾಂಶಗಳು

- ಸರ್ಕಾರ ನಿರ್ಮಿಸಿರುವ ದೇಶದ ಮೊದಲ ಸ್ಮಾರ್ಟ್ ಪಾರ್ಕಿಂಗ್ ಸಂಕೀರ್ಣ
- ಎರಡನೇ ವಿಮಾನ ನಿಲ್ದಾಣಕ್ಕೆ ಪ್ರಸ್ತಾವ ಸಲ್ಲಿಕೆ
- ಸ್ಕೈಡೆಕ್‌ಗೆ ಜಾಗ ಹುಡುಕಾಟ ನಡೆದಿದೆ

ಗಾಂಧಿನಗರಕ್ಕೆ ಮಧ್ಯಮ ವರ್ಗದ ಜನ ಹೆಚ್ಚಾಗಿ ಬರುತ್ತಾರೆ. ವಾಹನ ನಿಲುಗಡೆ ಸಮಸ್ಯೆ ಎದುರಾಗುತ್ತಿತ್ತು. ಈಗ ಅದಕ್ಕೆ ಪರಿಹಾರ ನೀಡಲಾಗುತ್ತಿದೆ. ಫ್ರೀಡಂ-ಪಾರ್ಕ್‌ನಲ್ಲಿ ಹೋರಾಟ ಮಾಡಲು ಬರುವವರಿಗೂ ಇದರಿಂದ ಹೆಚ್ಚಿನ ಅನುಕೂಲವಾಗಲಿದೆ ಎಂದರು.

ಈ ಬಹುಮಹಡಿ ವಾಹನ ನಿಲುಗಡೆ ಸಂಕೀರ್ಣ ಮಾದರಿಯಾಗಿದ್ದು, ನಗರದ ಇತರೆ ಕಡೆಗಳಲ್ಲೂ ಜಾರಿ ಮಾಡುವ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ ಎಂದು ಹೇಳಿದರು.

ಎಲ್ಲೆಡೆ ಡಬಲ್ ಡೆಕರ್: ಟ್ರಾಫಿಕ್ ಸಮಸ್ಯೆ ನಿವಾರಣೆಗೆ ಡಬಲ್ ಡೆಕರ್ ಕಾರಿಡಾರ್ ಮೂಲಕ ಮೇಲ್ಸೇತುವೆ ಹಾಗೂ ಅದರ ಮೇಲೆ ನಮ್ಮ ಮೆಟ್ರೋ ಮಾರ್ಗವನ್ನು ನಿರ್ಮಾಣ ಮಾಡಲಾಗುವುದು. ಮುಂದಿನ ನಮ್ಮ ಮೆಟ್ರೊ ಮಾರ್ಗದಲ್ಲಿ ಈ ವ್ಯವಸ್ಥೆ ಇರಲಿದೆ. ಇದರಿಂದ ಭೂಸ್ವಾಧೀನದ ಸಮಸ್ಯೆಯೂ ನಿವಾರಣೆಯಾಗುತ್ತದೆ. ಬಿಬಿಎಂಪಿ ಹಾಗೂ ಬಿಎಂಆರ್‌ಸಿಎಲ್ ಸಹಯೋಗದಲ್ಲಿ ಡಬಲ್ ಡೆಕರ್ ಕಾರಿಡಾರ್ ಕಾಮಗಾರಿಗಳನ್ನು ಮಾಡಲಾಗುವುದು ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

'ಬೆಂಗಳೂರಿನಲ್ಲಿ ಎರಡನೇ ವಿಮಾನ ನಿಲ್ದಾಣ ನಿರ್ಮಾಣದ ಬಗ್ಗೆ ಸಚಿವ ಎಂ.ಬಿ.ಪಾಟೀಲ್ ಅವರ ಹೇಳಿಕೆ ನಿಜ. 2032ರ ವೇಳೆಗೆ ಬೆಂಗಳೂರಿನಲ್ಲಿ ಎರಡನೇ ವಿಮಾನ ನಿಲ್ದಾಣ ಆಗಬೇಕು ಎಂಬ ಪ್ರಸ್ತಾವ ಸಲ್ಲಿಸಲಾಗಿದೆ. ಪಕ್ಕದ ರಾಜ್ಯಗಳು ಈ ರೀತಿ ಸಿದ್ಧತೆ ಮಾಡಿಕೊಳ್ಳುತ್ತಿದ್ದು, ನಾವು ಕೂಡ ಸಿದ್ಧತೆ ಮಾಡಿಕೊಳ್ಳುತ್ತಿದ್ದೇವೆ. ನಮ್ಮ ರಾಜ್ಯದ ಟ್ರಾಫಿಕ್ ಬೇರೆ ರಾಜ್ಯದ ಪಾಲಾಗಬಾರದು ಎಂಬ ಉದ್ದೇಶದಿಂದ ಈ ತಯಾರಿ ಮಾಡಿಕೊಳ್ಳುತ್ತಿದ್ದೇವೆ' ಎಂದು ತಿಳಿಸಿದರು.

'ಸ್ಕೈಡೆಕ್ ನಿರ್ಮಾಣ ವಿಚಾರವಾಗಿ ಕೆಲವು ಜಾಗ ಶಿಫಾರಸು ಮಾಡಲಾಗಿತ್ತು. ಅಷ್ಟೊಂದು ಜಾಗ ಅಲ್ಲಿ ಸಿಗುತ್ತಿಲ್ಲ. ಹೀಗಾಗಿ ಇನ್ನೂ ಹಲವೆಡೆ ಜಾಗ ನೋಡುತ್ತಿದ್ದೇವೆ' ಎಂದು ಹೇಳಿದರು.


ಟ್ವೀಟ್: ವಿಜಯೇಂದ್ರ ಭಾಷಾ ವೈಖರಿಗೆ ಹೈಕೋರ್ಟ್ ಕಿಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಾತನಾಡುವಾಗ ಗೌರವದ ಭಾಷೆ ಬಳಸಬೇಕು. ವಿರೋಧ ಪಕ್ಷದವರು ಎಂದರೆ ಶತ್ರುಗಳಲ್ಲ. ಈಗ ಒಂದು ಪಕ್ಷ ಅಧಿಕಾರದಲ್ಲಿದ್ದರೆ ಮುಂದಿನ ಬಾರಿ ಮತ್ತೊಂದು ಪಕ್ಷದವರು ಅಧಿಕಾರಕ್ಕೆ ಬರಬಹುದು. ಆದರೆ, ಸಾಂವಿಧಾನಿಕ ಹುದ್ದೆಯಲ್ಲಿರುವವರ ಬಗ್ಗೆ ಯಾರೂ ಕೆಟ್ಟದಾಗಿ ಮಾತನಾಡಬಾರದು. ವಿಶೇಷವಾಗಿ ಟ್ವೀಟ್‌ಗಳು ಸ್ವೀಟ್ ಆಗಿರಬೇಕೇ ಹೊರತು ಮತ್ತೊಬ್ಬರ ಮನಸ್ಸಿಗೆ ಹುಳಿ ಹಿಂಡುವಂತಿರಬಾರದು' ಎಂದು ಹೈಕೋರ್ಟ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ.

'ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಕುರಿತು ಸಾಮಾಜಿಕ ಜಾಲತಾಣದಲ್ಲಿ ಅವಹೇಳನಕಾರಿ ಪೋಸ್ಟ್ ಹಂಚಿಕೊಳ್ಳಲಾಗಿದೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ನಮ್ಮ ವಿರುದ್ಧ ದಾಖಲಿಸಲಾಗಿರುವ ಪ್ರಕರಣ ರದ್ದುಗೊಳಿಸಬೇಕು' ಎಂದು ಕೋರಿ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಮತ್ತು ಸಾಮಾಜಿಕ ಜಾಲತಾಣದ ಉಸ್ತುವಾರಿ ಪ್ರಶಾಂತ್ ಮಾಕನೂರು ಕ್ರಿಮಿನಲ್ ಅರ್ಜಿ ಸಲ್ಲಿಸಿದ್ದಾರೆ. ಈ ಅರ್ಜಿಯನ್ನು 'ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಪೀಠದಲ್ಲಿದ್ದ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರು ಶುಕ್ರವಾರ ವಿಚಾರಣೆ ನಡೆಸಿದರು.

ಅರ್ಜಿದಾರರ ಪರ ಹಿರಿಯ ವಕೀಲ ಎಂ.ಅರುಣ್ ಶ್ಯಾಮ್ ಅವರ ವಾದ ಆಲಿಸಿದ ನ್ಯಾಯಪೀಠ, 'ಯಾರೇ ಆಗಲಿ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಮತ್ತು ಸಚಿವರಂತಹ ಸಾಂವಿಧಾನಿಕ ಹುದ್ದೆಯಲ್ಲಿ ಇರುವವರ ಬಗ್ಗೆ ದುರ್ಭಾಷೆ ಬಳಸಬಾರದು. ಗೌರವದ ಹಾಗೂ ಸುಂದರ ಭಾಷೆ ಬಳಸಬೇಕು. ಮಾತಿನಲ್ಲಿ ಪ್ರೀತಿ, ಜವಾಬ್ದಾರಿ, ಸೌಜನ್ಯ ಹಾಗೂ ಸಂಯಮ ಇರಬೇಕು. ಚುನಾವಣೆ ವೇಳೆ ಜನರಿಗೆ ಜ್ವರ ಬಂದಿರುತ್ತದೆ. ಅಂತಹ ಸಂದರ್ಭದಲ್ಲಿ ಏನೋನೋ ಮಾತನಾಡಿ ಜನರನ್ನು ಉದ್ವೇಗಕ್ಕೆ ಗುರಿಪಡಿಸಬಾರದು. ಎಚ್ಚರಿಕೆಯಿಂದ ಮಾತನಾಡಬೇಕು. ನಾಲಗೆ ಮತ್ತು ಮಿದುಳಿನ ನಡುವಿನ ಸೇತುವೆ ಕುಸಿಯ ಬಾರದು' ಎಂದು ಕಿವಿಮಾತು ಹೇಳಿತು.



ಇದೇ ವೇಳೆ 'ತನಿಖೆ ಮುಂದುವರಿಯಲು ಅನುಮತಿ ನೀಡಬೇಕು' ಎಂಬ ರಾಜ್ಯ ಪಬ್ಲಿಕ್ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್ ಅವರ ಕೋರಿಕೆಯನ್ನು ಒಪ್ಪದ ನ್ಯಾಯಪೀಠ, 'ಈಗಾಗಲೇ ಚುನಾವಣೆ ಮುಗಿದಿದೆ. ಎಲ್ಲರ ಮೇಲೆ ತನಿಖೆ ನಡೆಸಬೇಕು ಎಂದಾದರೆ ಹೇಗೆ? ಎಲ್ಲರನ್ನೂ ಕಸ್ಟಡಿಗೆ ಕೇಳುವುದು ಸರಿಯಾದ ದಾರಿಯಲ್ಲ. ಹೀಗೆ ಮಾಡುತ್ತಾ ಹೋದರೆ ನಾಳೆ ಹೊರಗಡೆ ಇರುವವರಿಗಿಂತ ಜೈಲು ಹಾಗೂ ಕಸ್ಟಡಿಯಲ್ಲಿ ಇರುವವರ ಸಂಖ್ಯೆಯೇ ಹೆಚ್ಚಿರುತ್ತದೆ. ಅವರನ್ನು ಪೋಷಿಸುವ ಖರ್ಚನ್ನು ಯಾರು ಕೊಡುತ್ತಾರೆ' ಎಂದು ಪ್ರಶ್ನಿಸಿತು.

'ಹೀನ ಅಪರಾಧ ಕೃತ್ಯಗಳನ್ನು ಎಸಗಿದ್ದವರನ್ನು ಮಾತ್ರವೇ ಕಸ್ಟಡಿಗೆ ಕೇಳುವುದು ಸಮಂಜಸ' ಎಂದು ಹೇಳಿದ ನ್ಯಾಯಪೀಠ ಪ್ರಕರಣದ ಪ್ರತಿವಾದಿಯಾದ ಮಲ್ಲೇಶ್ವರ ಠಾಣಾ ಪೊಲೀಸರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆ ಮುಂದೂಡಿತು.

ಕುದುರೆ ರೇಸ್ ಮೇಲ್ಮನವಿ: ಇಂದು ತೀರ್ಪು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಗಳೂರು ಟರ್ಫ್ ಕ್ಲಬ್'ನಲ್ಲಿ (ರೇಸ್ ಕೋರ್ಸ್-ಬಿಟಿಸಿ) ಕುದುರೆ ಪಂದ್ಯಗಳ ಆಯೋಜನೆಗೆ ಅನುಮತಿ ನೀಡಿ ಏಕಸದಸ್ಯ ನ್ಯಾಯಪೀಠ ನೀಡಿದ್ದ ಮಧ್ಯಂತರ ಆದೇಶವನ್ನು ಪ್ರಶ್ನಿಸಿ ರಾಜ್ಯ ಸರ್ಕಾರ ಸಲ್ಲಿಸಿದ ಮೇಲ್ಮನವಿಗೆ ಸಂಬಂಧಿಸಿದ ತೀರ್ಪನ್ನು ಹೈಕೋರ್ಟ್ ವಿಭಾಗೀಯ ನ್ಯಾಯಪೀಠ ಶನಿವಾರ (ಜೂನ್ 22) ಬೆಳಿಗ್ಗೆ ಪ್ರಕಟಿಸಲಿದೆ.



ಈ ಕುರಿತ ಮೇಲ್ಮನವಿಯ ವಿಚಾರಣೆಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ. ಅಂಜಾರಿಯಾ ಹಾಗೂ ನ್ಯಾಯಮೂರ್ತಿ ಕೆ.ವಿ. ಅರವಿಂದ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಶುಕ್ರವಾರ ಮಧ್ಯಾಹ್ನದ ಕಲಾಪದಿಂದ ಆರಂಭಿಸಿ ರಾತ್ರಿ 7 ಗಂಟೆಯವರೆಗೂ ನಡೆಸಿತು.

ವಿಚಾರಣೆ ವೇಳೆ ರಾಜ್ಯ ಸರ್ಕಾರದ ಪರ ವಾದ ಮಂಡಿಸಿದ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ, 'ಬಿಟಿಸಿ ಆವರಣದಲ್ಲಿ ಬುಕ್ಕಿಗಳು ಕಾನೂನುಬಾಹಿರ ಚಟುವಟಿಕೆ ನಡೆಸುತ್ತಾರೆ. 2024ರ ಜನವರಿ 12ರಂದು ನಡೆಸಲಾದ ದಾಳಿಯಲ್ಲಿ ಅಕ್ರಮ ಚಟುವಟಿಕೆಗಳು ನಡೆಯುತ್ತಿದ್ದುದು ಬೆಳಕಿಗೆ ಬಂದಿದೆ. ಈ ಕುರಿತಂತೆ ಕ್ಲಬ್‌ನ ಅಧ್ಯಕ್ಷರು, ಸಿಇಒ ಮತ್ತು ಕಾರ್ಯದರ್ಶಿ ಸೇರಿದಂತೆ ಒಟ್ಟು 27 ಜನರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲಾಗಿದೆ' ಎಂದರು.

'ಪುನಃ ಪರವಾನಗಿ ನೀಡಿದರೆ ಆವರಣದಲ್ಲಿ ಅಕ್ರಮ ಚಟುವಟಿಕೆಗಳು ತಲೆ ಎತ್ತುತ್ತವೆ. ಇಲ್ಲಿ ಜೂಜಾಡುವವರು ಆಟೊ, ಟ್ಯಾಕ್ಸಿ ಚಾಲಕರಂತಹ ಬಡ ಕುಟುಂಬದವರು. ಇಂಥವರೆಲ್ಲಾ ಇವರ ಮೋಸಕ್ಕೆ ಬಲಿಯಾಗುತ್ತಾರೆ. ಹೀಗಾಗಿ, ಈ ಅಕ್ರಮ ಚಟುವಟಿಕೆಗಳನ್ನು ತಡೆಯಬೇಕಾದ್ದು ಸರ್ಕಾರದ ಆದ್ಯ ಕರ್ತವ್ಯವಾಗಿದೆ' ಎಂದು ಪ್ರತಿಪಾದಿಸಿದರು.

ಸರ್ಕಾರದ ವಾದವನ್ನು ಬಲವಾಗಿ ಅಲ್ಲಗಳೆದ, 'ಬೆಂಗಳೂರು ಟರ್ಫ್ ಕ್ಲಬ್' ಪರ ವಾದ ಮಂಡಿಸಿದ ಹಿರಿಯ ವಕೀಲ ಎಸ್.ಎಸ್.ನಾಗಾನಂದ ಅವರು, 'ಈ ಕ್ಲಬ್ ಕಳೆದ 150 ವರ್ಷಗಳಿಂದ ರೇಸ್ ನಡೆಸುತ್ತಾ ಬಂದಿದೆ. ಆದರೆ, ಕಳೆದ ಮೂರು ತಿಂಗಳಿನಿಂದ ಪಂದ್ಯಾವಳಿ ಸ್ಥಗಿತಗೊಂಡಿವೆ. ಇದು ಅಧಿಕೃತವಾದ ರೇಸ್. ಸರ್ಕಾರ 2010ರಲ್ಲಿ ನಮಗೆ ಕ್ಲಬ್‌ನ ವಿಶಾಲವಾದ ಜಾಗ ಬಿಟ್ಟುಕೊಡುವಂತೆ ಕೇಳಿತ್ತು. ಈ ಕುರಿತಾದ ವ್ಯಾಜ್ಯ ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು ಮತ್ತು ಯಥಾಸ್ಥಿತಿ ಕಾಪಾಡಿಕೊಂಡು ಹೋಗುವಂತಹ ಆದೇಶ ಇದೆ' ಎಂಬ ಅಂಶವನ್ನು ನ್ಯಾಯಪೀಠದ ಗಮನಕ್ಕೆ ತಂದರು.

'ಕ್ಲಬ್‌ನ ಸುದೀರ್ಘ ಇತಿಹಾಸದಲ್ಲೇ ರಾಜ್ಯ ಸರ್ಕಾರ ಈಗ ಮೂರನೇ ಬಾರಿಗೆ ರೇಸ್‌ಗಳನ್ನು ನಿಲ್ಲಿಸಿದೆ. ಇದರಿಂದ ಕ್ಲಬ್‌ನ ಮೇಲೆ ಅವಲಂಬಿತವಾಗಿರುವ ಸುಮಾರು 20 ಸಾವಿರ ಕುಟುಂಬಗಳು ಸಂಕಷ್ಟಕ್ಕೆ ಸಿಲುಕಿವೆ. ಇದರಿಂದ ಸರ್ಕಾರದ ಬೊಕ್ಕಸಕ್ಕೂ ದಿನವೊಂದಕ್ಕೆ ಕೋಟಿ ರೂಪಾಯಿಗಳ ನಷ್ಟ ಉಂಟಾಗುತ್ತಿದೆ. ಇಲ್ಲಿ ಅಕ್ರಮಗಳು ನಡೆಯುವ ಸಾಧ್ಯತೆಗಳೇ ಇಲ್ಲ. ರೇಸ್‌ಕೋರ್ಸ್ ಆಡಳಿತ ಮಂಡಳಿಯಲ್ಲಿ ಸರ್ಕಾರದ ಹಣಕಾಸು ಕಾರ್ಯದರ್ಶಿ, ಬೆಂಗಳೂರು ನಗರ ಪೊಲೀಸ್ ಆಯುಕ್ತರೂ ಸದಸ್ಯರಾಗಿದ್ದಾರೆ. ಸರ್ಕಾರಕ್ಕೆ ಅಷ್ಟೊಂದು ಅನುಮಾನಗಳಿದ್ದರೆ ಪೊಲೀಸ್ ಕಣ್ಗಾವಲು ಇರಿಸಬಹುದು' ಎಂದರು.

ಪ್ರತಿವಾದಿಗಳಾದ 'ದಿ ಕರ್ನಾಟಕ ಟ್ರೈನರ್ಸ್ ಅಸೋಸಿಯೇಷನ್ಸ್' ಪರ ಕೆ.ಬಿ.ಮೋನೇಶ್ ಕುಮಾರ್, 'ಕರ್ನಾಟಕ ರೇಸ್ ಕುದುರೆ ಮಾಲೀಕರ ಸಂಘದ ಅಧ್ಯಕ್ಷ ಎಸ್.ಪದ್ಮನಾಭನ್ ಮತ್ತು ಗಿರೀಶ್ ಬಾಳಿಗ' ಪರ ಹಿರಿಯ ವಕೀಲ ಕೆ.ಎನ್. ಫಣೀಂದ್ರ ಹಾಗೂ 'ಕರ್ನಾಟಕ ಜಾಕಿಗಳ ಸಂಘ'ದ ಕೆ.ಆರ್.ವಸಂತ ಕುಮಾರ್ ಸೇರಿದಂತೆ ಒಟ್ಟು ಎಂಟು ಜನರ ಪರ ಹಿರಿಯ ವಕೀಲ ಡಿ.ಆರ್.ರವಿಶಂಕರ್ ವಾದ ಮಂಡಿಸಿದರು. ವಾದ-ಪ್ರತಿವಾದ ಆಲಿಸಿದ ನ್ಯಾಯಪೀಠ ಆದೇಶ ಕಾಯ್ದಿರಿಸಿತು.

ಏಕಸದಸ್ಯ ನ್ಯಾಯಪೀಠವು ತನ್ನ ಆದೇಶದಲ್ಲಿ, 'ಬಿಟಿಸಿಯು, ಆನ್ ಕೋರ್ಸ್ (ಬೆಂಗಳೂರು) ಮತ್ತು ಆಫ್ ಕೋರ್ಸ್ (ಬೆಂಗಳೂರು ಹೊರತುಪಡಿಸಿದ ಸ್ಥಳಗಳು) ಮೂಲಕ ಪಂದ್ಯಗಳನ್ನು ಹಮ್ಮಿಕೊಳ್ಳಬಹುದಾಗಿದೆ. ಎಲ್ಲಾ ಪಂದ್ಯಗಳೂ, ಸರ್ಕಾರ ಈಗಾಗಲೇ 2024ರ ಮಾರ್ಚ್‌ನಲ್ಲಿ ನೀಡಿರುವ ಪರವಾನಗಿಗೆ ಅನುಗುಣವಾದ ಷರತ್ತು ಮತ್ತು ನಿಯಮಗಳಿಗೆ ಒಳಪಟ್ಟಿರುತ್ತವೆ. ಹಾಗೆಯೇ, ಪ್ರತಿವಾದಿಗಳು ರೇಸಿಂಗ್ ಚಟುವಟಿಕೆಗಳ ಮೇಲೆ ನಿಗಾ ವಹಿಸಲು ಸ್ವಾತಂತ್ರ್ಯ ಹೊಂದಿದ್ದಾರೆ' ಎಂದು ತಿಳಿಸಿತ್ತು.

ಆಭರಣಗಳ ಮಜೂರಿ ಶುಲ್ಕದ ಮೇಲೆ ಶೇ 50 ರಿಯಾಯಿತಿ

ಬೆಂಗಳೂರು: ದೇಶದ ಪ್ರಸಿದ್ಧ ಆಭರಣ ಬ್ರ್ಯಾಂಡ್ ಆಗಿರುವ ಜೋಯಾಲುಕ್ಕಾಸ್‌ನಿಂದ ಆಭರಣಗಳ ಮಜೂರಿ ಶುಲ್ಕದ ಮೇಲೆ ಶೇ 50ರಷ್ಟು ರಿಯಾಯಿತಿ ಪ್ರಕಟಿಸಲಾಗಿದೆ.

ಈ ವಿಶೇಷ ಕೊಡುಗೆಯು ಚಿನ್ನ, ವಜ್ರ, ಅಮೂಲ್ಯ ಹರಳು ಮತ್ತು ಬೆಳ್ಳಿ ಆಭರಣಗಳ ಮೇಲೆ ದೊರೆಯಲಿದೆ. ದೇಶದ ಎಲ್ಲಾ ಮಳಿಗೆಗಳಲ್ಲಿ ಜುಲೈ 14ರವರೆಗೆ ಈ ಇನ್‌ಕ್ರೆಡಿಬಲ್ ಜ್ಯುವೆಲ್ಲರಿ ಮಾರಾಟ ನಡೆಯಲಿದೆ ಎಂದು ಕಂಪನಿ ತಿಳಿಸಿದೆ.

ಗ್ರಾಹಕರಿಗೆ ಆಭರಣದ ಖರೀದಿಯೊಂದಿಗೆ ಉಚಿತ ಆಜೀವ ನಿರ್ವಹಣೆ, ಒಂದು ವರ್ಷದ ಉಚಿತ ವಿಮೆ ಮತ್ತು ಮರು ಖರೀದಿಯ ಖಾತರಿ ದೊರೆಯಲಿದೆ. ಆಭರಣ ಪ್ರಿಯರು ಸಮೀಪದ ಜೋಯಾಲುಕ್ಕಾಸ್ ಮಳಿಗೆಗಳಿಗೆ ತೆರಳಿ ಇದರ ಪ್ರಯೋಜನ ಪಡೆಯಬಹುದಾಗಿದೆ ಎಂದು ತಿಳಿಸಿದೆ.

'ಗ್ರಾಹಕರಿಗೆ ಸರಿಸಾಟಿಯಿಲ್ಲದ ಆಭರಣ ಖರೀದಿಯ ಅನುಭವ ನೀಡಲು ಕಂಪನಿ ಬದ್ಧವಾಗಿದೆ' ಎಂದು ಜೋಯಾಲುಕ್ಕಾಸ್ ಸಮೂಹದ ಸಿಇಒ ಜೋಯ್ ಆಲುಕ್ಕಾಸ್ ಹೇಳಿದ್ದಾರೆ.



ಪ್ರತಿಭಾ ಪುರಸ್ಕಾರ

ನಗರದ ಸುಧಾ ಕೋ-ಆಪರೇಟಿವ್ ಬ್ಯಾಂಕ್‌ನಿಂದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ನಡೆಯಿತು. ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತಮ ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ತಲಾ ₹7,500, ಪಿಯುಸಿಯಲ್ಲಿ ಉತ್ತಮ ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ತಲಾ ₹10,000 ನಗದು, ಅಭಿನಂದನಾ ಪತ್ರ ನೀಡಿ ಗೌರವಿಸಲಾಯಿತು. ಬ್ಯಾಂಕ್ ಅಧ್ಯಕ್ಷ ಎಂ.ತಿಮ್ಮೇಗೌಡ, ಉಪಾಧ್ಯಕ್ಷ ವಾಸನ್ ಟಿ., ಆಡಳಿತ ಮಂಡಳಿ ಸದಸ್ಯರು, ಪ್ರಧಾನ ವ್ಯವಸ್ಥಾಪಕರು ಭಾಗವಹಿಸಿದ್ದರು

ವಿಶ್ವ ಸಂವಾದ ಕೇಂದ್ರದ ಪ್ರಶಸ್ತಿ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವಸಂವಾದ ಕೇಂದ್ರದ 2024 ನೇ ಸಾಲಿನ ಮಾಧ್ಯಮ ಪ್ರಶಸ್ತಿ ಪ್ರಕಟಿಸಲಾಗಿದ್ದು, ತಿ.ತಾ.ಶರ್ಮ ಮಾಧ್ಯಮ ಪ್ರಶಸ್ತಿಗೆ 'ವಿಜಯ ಕರ್ನಾಟಕ' ದಿನ ಪತ್ರಿಕೆಯ ಸಂಪಾದಕ ಸುದರ್ಶನ ಚನ್ನಂಗಿಹಳ್ಳಿ ಆಯ್ಕೆಯಾಗಿದ್ದಾರೆ.

ಚಂದ್ರಶೇಖರ ಭಂಡಾರಿ ಮಾಧ್ಯಮ ಪ್ರಶಸ್ತಿ- ಅಜಿತ್ ಹನುಮಕ್ಕನವರ್ (ಸುವರ್ಣ ನ್ಯೂಸ್), ಬೆ.ಸು.ನಾ.ಮಲ್ಯ ಪ್ರಶಸ್ತಿ- ಶೋಭಾ.ಎಚ್.ಜಿ (ಪತ್ರಕರ್ತೆ), ಹೊ.ವೆ.ಶೇಷಾದ್ರಿ ಅಂಕಣಕಾರ ಪ್ರಶಸ್ತಿ- ಪ್ರೊ.ಪ್ರೇಮಶೇಖರ್ (ಅಂಕಣಕಾರ) ಮತ್ತು ವಿಎಸ್‌ಕೆ ಡಿಜಿಟಲ್ ಮಾಧ್ಯಮ ಪ್ರಶಸ್ತಿ-ಡಾ.ಪೂರ್ವಿ ಜಯರಾಜ್ (ಯೂಟ್ಯೂಬರ್) ಆಯ್ಕೆಯಾಗಿದ್ದಾರೆ.

ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಇದೇ 30 ರಂದು ಬಸವನಗುಡಿಯ ಬಿಎಂಎಸ್ ಎಂಜಿನಿಯರಿಂಗ್ ಕಾಲೇಜಿನ ಸಭಾಂಗಣದಲ್ಲಿ ಬೆಳಿಗ್ಗೆ 10.30 ಕ್ಕೆ ನಡೆಯಲಿದೆ. ಕಾರ್ಯಕ್ರಮದಲ್ಲಿ 'ಆರ್ಗನೈಸರ್' ಪತ್ರಿಕೆ ಸಂಪಾದಕ ಪ್ರಫುಲ್ಲ ಕೇತ್ಕರ್ ಮತ್ತು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ದಕ್ಷಿಣ ಮಧ್ಯ ಕ್ಷೇತ್ರೀಯ ಸಂಘ ಚಾಲಕ ಡಾ. ವಾಮನ ಶೆಣೈ ಭಾಗವಹಿಸಲಿದ್ದಾರೆ.

ಭೂಮಿಕಾ

ಮಹಿಳೆಯ ಆಪ್ತ ಸಂಗಾತಿ



ಸೇಲ್‌ನಲ್ಲಿ ಸೀರೆ ಸಿರಿ

ಹಬ್ಬಗಳ ಸಾಲು ಸಾಲಿಗೆ ಮುನ್ನ ಬರುವ ಈ ಆಷಾಢ ಸೇಲ್ ಹೆಂಗಳೆಯರು ಸೀರೆ ಸಂಗ್ರಹಕ್ಕೂ, ಉಡುಗೊರೆಯಾಗಿ ಕೊಡಲೂ ಹೇಳಿ ಮಾಡಿಸಿದ ಅವಕಾಶವಾಗಿದೆ. ಯಾವ ಸೀರೆಗೆ ಎಷ್ಟು ಆದ್ಯತೆ ಕೊಡಬೇಕು ಎಂಬ ಮಾಹಿತಿ ಇಲ್ಲಿದೆ...

ಸೌಮ್ಯ ರಾಜಗುರು

ಈ ಸಲ, ಆಶಾಢದ ಸೇಲ್‌ನಲ್ಲಿ ಬನಾರಸಿ ತೊಗೊಬೇಕು, ಕಳೆದ ಸಲ ಪಟೋಲಾ ತೊಗೊಂಡಿದ್ದೆ. ಸಾಧ್ಯವಾದರೆ ಒಂದು ಇಕತ್ ಸಹ.. ಹೀಗೆ ಮೇ ತಿಂಗಳಿನಿಂದಲೇ ಆಷಾಢದ ಸೇಲ್‌ನಲ್ಲಿ ತೊಗೊಬೇಕಿರುವ ಸೀರೆಗಳ ಪಟ್ಟಿ ಶುರುವಾಗುತ್ತದೆ.

ಈ ಸೇಲ್ ಸಂಸ್ಕೃತಿ ಶುರುವಾಗಿದ್ದೇ ಈ ಸಹಸ್ರಮಾನದ ಈಚೆಯಿಂದ. ಅದಕ್ಕೆ ಮೊದಲೆಲ್ಲ ಆಷಾಢ ಮಾಸದಲ್ಲಿ ಮಳೆಯದ್ದೇ ಸಂಭ್ರಮ ಇರುತ್ತಿತ್ತು. ಆಷಾಢದಲ್ಲಿ ಏನೇನೂ ಕೊಡುಕೊಳ್ಳುವ ಸಂಭ್ರಮ ಇರುತ್ತಿರಲಿಲ್ಲ. ಈ ತಿಂಗಳು ಕೊಟ್ಟಿದ್ದು ಮರಳುವುದಿಲ್ಲ ಎಂಬ ನಂಬಿಕೆ ಬೇರೆ ಇತ್ತು. ಬಹುಶಃ ಅದು ಕೊಡೆಗೆ ಸಂಬಂಧಪಟ್ಟ ಮಾತಿರಬೇಕು. 'ಕೊಡೆ' ಪದವೇ ಏನನ್ನೂ ಕೊಡೆ ಎಂಬುದಾಗಿ ಬದಲಾಗಿರಬಹುದು.

ಈಗ ವಿಷಯ ಅದಲ್ಲ. ಆಷಾಢ ಮಾಸ ಬಂದರೇನೆ ಸೀರೆಗಳನ್ನ ಕೊಳ್ಳಲು ಎಂದು ಬದಲಾಗಿದೆ. ಆಷಾಢದ ಸೇಲ್ ಬರುವ ಮೊದಲೇ ನಿಮ್ಮ ಅಗತ್ಯಗಳ ಬಗ್ಗೆ ಸ್ಪಷ್ಟ ನಿಲುವು ಇದ್ದರೆ, ನಿಮ್ಮ ಒಲವುಗಳ ಬಗ್ಗೆ ಪುಟ್ಟದೊಂದು ಪಟ್ಟಿ ಇದ್ದರೆ, ಈ ಸೇಲ್‌ನಲ್ಲಿಯೂ ಖರ್ಚುವೆಚ್ಚಗಳನ್ನು ಸರಿದೂಗಿಸಬಹುದು.

ಸೀರೆಗಳನ್ನ ಸೇಲ್‌ನಲ್ಲಿ ಕೊಳ್ಳಬಹುದೆ? ದರ ಏರಿಕೆ ಮಾಡಿ, ಮತ್ತೆ ತಗ್ಗಿಸಿ ಕೊಡುತ್ತಾರೆಯೇ ಎಂಬ ಅನುಮಾನ ಬಹುತೇಕರಿಗೆ ಇದ್ದೇ ಇರುತ್ತದೆ. ಈ ಋತುವಿನಲ್ಲಿ ಮಗ್ಗಗಳಲ್ಲಿ ವಿನ್ಯಾಸಗಳನ್ನು ಬದಲಿಸಲಾಗುತ್ತದೆ. ಟ್ರೆಂಡ್ ಬದಲಿಯಾಗುವಾಗ ಈ ಸ್ಟಾಕ್ ಖಾಲಿ ಮಾಡಲೆಂದೇ ಈ ಸೇಲ್ ಇರಿಸಲಾಗುತ್ತದೆ.

ಇನ್ನೊಂದು ಲೆಕ್ಕಾಚಾರ, ಈ ಹಿಂದೆಯೆಲ್ಲ ಆಷಾಢ ಮಾಸದಲ್ಲಿ ಯಾವ ಶುಭಕಾರ್ಯಗಳನ್ನೂ ಮಾಡುತ್ತಿರಲಿಲ್ಲ. ಆಗ ಮಾರುಕಟ್ಟೆಗಳೆಲ್ಲವೂ ತಣ್ಣಗಿರುತ್ತಿದ್ದವು. ಇದೇ ಮಾಸದಲ್ಲಿ ಚಿನ್ನದ ಬೆಲೆಯೂ ಇಳಿಕೆಯಾಗುತ್ತಿತ್ತು. ಇದೇ ಸಮಯವನ್ನು ವಸ್ತ್ರಮಳಿಗೆಯವರು ಮಾರಾಟಕ್ಕೆ ಬಳಸಿಕೊಂಡರು. ಶೇ 50 ರ ಮಾರಾಟದ ಟ್ರೆಂಡ್ ಸೃಷ್ಟಿಸಿದರು.

ಮಾರಾಟವಾಗದೇ ಉಳಿದ ಸೀರೆಗಳ ಸಂಗ್ರಹವನ್ನೆಲ್ಲ ಶೇ 50ರ ರಿಯಾಯ್ತಿ ನೀಡಿ, ಹಳೆಯ ಸಂಗ್ರಹವನ್ನೆಲ್ಲ ಖಾಲಿ ಮಾಡುವ ತಂತ್ರಗಾರಿಕೆ ಜೊತೆಗೆ ವ್ಯಾಪಾರವಿಲ್ಲದ ತಿಂಗಳಿನಲ್ಲಿ ಹಣಕಾಸಿನ ಕೊಡುಕೊಳ್ಳುವ ವ್ಯವಹಾರವಾಗುವಂತೆ ನೋಡಿಕೊಂಡರು. ಆದರೆ ಈಗ ಕೊಳ್ಳುವವರು ಪ್ರತಿಯೊಂದಕ್ಕೂ ಆಷಾಢದ ಸೇಲ್ ಕಾಯುವಂತಾಗಿದೆ.

ಈ ಸೇಲ್‌ನಲ್ಲಿ ಬಟ್ಟೆ ಕೊಳ್ಳುವ ಮೊದಲು ಈ ವಿಷಯಗಳನ್ನು ಗಮನದಲ್ಲಿರಿಸಿಕೊಳ್ಳಿ.



ಹೇಗಿದ್ದೀರಿ ನೀವು? ಹೇಗಿರಬೇಕು ಸೀರೆ?

ನೀವು ಸಪೂರ ಮತ್ತು ಎತ್ತರ ಮೈಕಟ್ಟಿನವರಾಗಿದ್ದರೆ ಸಾಕಷ್ಟು ಅಗಲದ ಅಂಚಿರುವ ಸೀರೆಗಳನ್ನು ಆಯ್ಕೆ ಮಾಡಿಕೊಳ್ಳಿ ಸ್ಥೂಲಕಾಯ ಅಥವಾ ದುಂಡುದುಂಡಕ್ಕೆ ಇದ್ದರೆ, ಉದ್ದುದ್ದ ಗೆರೆಗಳಿರುವ, ಸಣ್ಣ ಅಂಚಿನ, ಪುಟ್ಟ ಹೂಗಳಿರುವ ವಿನ್ಯಾಸದ ಸೀರೆಗಳನ್ನು ಆಯ್ಕೆ ಮಾಡಿಕೊಳ್ಳಿ. ನಿಮಗಿಷ್ಟ ಆಗುವ ಸೀರೆ ಕೊಳ್ಳುವುದಕ್ಕಿಂತಲೂ, ನಿಮಗೆ ಚಂದ ಕಾಣುವ ಸೀರೆಯ ಬದಲು, ಉಟ್ಟಾಗ ನೀವು ಚಂದ ಕಾಣುವಂಥ ಸೀರೆಯನ್ನು ಆಯ್ಕೆ ಮಾಡಿಕೊಳ್ಳಿ. ಪ್ರತಿಸಲ ಸೇಲ್ ಇದ್ದಾಗಲೂ ಭಾರತೀಯವ ವಸ್ತ್ರವೈಭವ ಸಾರುವ ಸಂಗ್ರಹದಲ್ಲಿ ಒಂದೊಂದನ್ನು ಆಯ್ಕೆ ಮಾಡುತ್ತ, ಸೇರ್ಪಡೆ ಮಾಡುತ್ತ ಬನ್ನಿ. ಸೀರೆಯಸಿರಿ ಹೆಚ್ಚಾಗುವುದೇ ಈ ಕಾಲದಲ್ಲಿ.



ಯಾವ ಸೀರೆ ಕೊಳ್ಳಬೇಕಿದೆ? ಯಾಕೆ ಕೊಳ್ಳಬೇಕಿದೆ?

ಯಾವ ಸಮಾರಂಭಕ್ಕೆ ಸೀರೆ ಕೊಳ್ಳಬೇಕು ಎಂಬುದನ್ನು ನಿರ್ಧರಿಸಿ. ಬಹುತೇಕ ಜನರು ಶ್ರಾವಣಮಾಸದಲ್ಲಿ ಬರುವ ಮಂಗಳಗೌರಿ, ವರಮಹಾಲಕ್ಷ್ಮಿಗಾಗಿ ಸೀರೆಗಳನ್ನು ಕೊಳ್ಳುತ್ತಾರೆ. ಕೆಂಪು, ಹಸಿರು ಹಾಗೂ ಹಳದಿ ಬಣ್ಣದ ಸೀರೆಗಳು ಹೆಚ್ಚು ಮಾರಾಟವಾಗುತ್ತವೆ.

ಹಿರಿಯರ ಪೂಜೆಗಾಗಿ ಬಿಳಿ ಮತ್ತು ಶ್ವೇತವರ್ಣದ ವಿಶೇಷ ಸೀರೆಗಳನ್ನೂ ಹೆಚ್ಚುಕೊಳ್ಳುತ್ತಾರೆ.

ನಿಮ್ಮ ಬಜೆಟ್ ನಿರ್ಧರಿಸಿ. ಆ ಸೀರೆಯಲ್ಲಿ ಒಂದು ಗ್ರ್ಯಾಂಡ್ ಆಗಿರುವ ಸೀರೆ ಕೊಳ್ಳಬೇಕೋ, ಅದೇ ಬಜೆಟ್‌ನಲ್ಲಿ ಕೆಲವು ಸರಳ ಸೀರೆಗಳನ್ನು ಕೊಳ್ಳಬೇಕೊ ಎಂಬುದನ್ನು ನಿರ್ಧರಿಸಿ ಈ ಸೇಲ್‌ನಲ್ಲಿ ಬರುವ ಸಂಗ್ರಹ ಮತ್ತೆ ಮತ್ತೆ ಪುನರಾವರ್ತನೆ ಆಗದು. ಏನಾದರೂ ಇಷ್ಟವಾದಲ್ಲಿ ಮತ್ತೊಮ್ಮೆ ಕೊಂಡರಾಯಿತು ಎಂಬ ತೀರ್ಮಾನಕ್ಕೆ ಬರುವ ಮುನ್ನ ಯೋಚಿಸಿ.

ಆಷಾಢದ ನಂತರ ಹಬ್ಬಗಳ ಸಾಲೇ ಬರುತ್ತದೆ. ಎಲ್ಲ ಹಬ್ಬಕ್ಕೂ ಈಗಲೇ ಕೊಳ್ಳಬೇಕೆ ಎಂಬ ಪ್ರಶ್ನೆಯೂ ನಿಮ್ಮೆದುರಿಗಿರುತ್ತದೆ. ಹಬ್ಬಕ್ಕೆ ಬರುವ ಹೊಸ ಸಂಗ್ರಹ ಕೊಳ್ಳಬೇಕೆ ಅಥವಾ ಈ ಸಂಗ್ರಹದಲ್ಲಿಯೂ ತೃಪ್ತಿಪಡಬೇಕೆ ಎಂಬುದು ನಿಮ್ಮ ವಿವೇಚನೆಗೇ ಬಿಟ್ಟಿದ್ದು..

ಮನೆಯಲ್ಲಿ ಸಮಾರಂಭಗಳಿದ್ದರೆ ಕಂಜೀವರಂ, ಬನಾರಸಿ, ಈಕತ್, ಪಟೋಲಾ, ಢಾಕಾ ಸಿಲ್ಕ್ ಸೀರೆಗಳತ್ತ ಹೆಚ್ಚು ಗಮನಕೊಡಿ. ದಕ್ಷಿಣ ಭಾರತೀಯ ಮಹಿಳೆಯರು ಹೆಚ್ಚಾಗಿ ಈ ಸೇಲ್‌ನಲ್ಲಿ ಮಂಗಳಗಿರಿ, ವೆಂಕಟಗಿರಿ, ಗದ್ವಾಲ್, ಕೊಯಮತ್ತೂರು, ಧರ್ಮಾವರಂ, ಕಂಜೀವರಂ ಸೀರೆಗಳನ್ನೇ ಕೊಳ್ಳುತ್ತಾರಂತೆ.

ಉತ್ತರ ಭಾರತದ ಬನಾರಸ್, ಟಸ್ಸರ್, ಮಾಹೇಶ್ವರಿ, ಢಕ್ಕೈ, ಜಾಮ್ದಾನಿ, ಬಾಂಧನಿ, ಸೀರೆಗಳನ್ನೂ ಪರಿಗಣಿಸಬಹುದಾಗಿದೆ. ಈ ಸೀರೆಗಳಲ್ಲಿ ಜರಿಗಳಿರಬೇಕೆ, ರೇಷಿಮೆ ನೂಲಿನದ್ದಿರಬೇಕೆ ಎಂಬ ನಿರ್ಧಾರ ನಿಮ್ಮ ನಿಮ್ಮ ಅನುಕೂಲಕ್ಕೆ ಬಿಟ್ಟಿದ್ದು. ಜರಿ ಮಾಸುವ ಭಯವಿದ್ದಲ್ಲಿ, ಜರಿ ಚುಚ್ಚುವ ಆತಂಕವಿದ್ದಲ್ಲಿ, ಜರಿಯಿಂದ ಕಿರಿಕಿರಿಯಾಗುವಂತಿದ್ದಲ್ಲಿ ಸಣ್ಣ ಅಂಚಿರುವ ಸೀರೆಗಳಿಗೆ ಹೆಚ್ಚು ಮಾನ್ಯತೆ ನೀಡಿ.



ಉಡುಪಿಗೊಪ್ಪುವ ವಾಚ್ ಇರಲಿ

ಫ್ಯಾಷನ್

ಪವಿತ್ರಾ ಭಟ್

ಹಿಂದೆಲ್ಲ ಸಮಯ ನೋಡಲೇಂದೇ ವಾಚ್ ಧರಿಸುತ್ತಿದ್ದರು. ಆದರೆ ಈಗ ವಾಚ್ ಧರಿಸುವುದೇ ಒಂದು ಟ್ರೆಂಡ್ ಆಗಿದೆ. ಮನೆಯಿಂದ ಹೊರ ಹೊರಡುವ ಮುನ್ನ ಡ್ರೆಸ್ಸಿಗೆ ಒಪ್ಪುವ ಹಾಗೆ ಟ್ರೆಂಡಿ ವಾಚ್ ಧರಿಸುವುದು ಫ್ಯಾಷನ್ ದುನಿಯಾದಲ್ಲಿ ಸರ್ವೇಸಾಮಾನ್ಯ ಎನ್ನುವಂತಾಗಿದೆ.

ಮಾರುಕಟ್ಟೆಯಲ್ಲೂ ತರಹೇವಾರಿ ವಾಚ್‌ಗಳು ಲಗ್ಗೆಯಿಟ್ಟಿವೆ. ಹತ್ತಾರು ಕಂಪನಿಗಳು ವಿವಿಧ ರೀತಿಯ ಡಿಸೈನ್‌ಗಳ ವಾಚ್‌ಗಳನ್ನು ತಯಾರಿಸಿ ಫ್ಯಾಷನ್ ಪ್ರಿಯರ ಗಮನ ಸೆಳೆಯುತ್ತಿವೆ.

ಬ್ರೆಸ್‌ಲೇಟ್ ವಾಚ್

ಕೈಗೆ ಧರಿಸುವ ಬಳೆ, ಬ್ರೆಸ್ಲೇಟ್‌ಗಳಂತೆ ಕಾಣುವ ವಾಚ್‌ಗಳು ಪುಟ್ಟ ಡೈಯಲ್‌ಗಳನ್ನು ಹೊಂದಿರುತ್ತವೆ. ಪುಟ್ಟ ಪುಟ್ಟ ಮಣಿಗಳನ್ನು ಪೋಣಿಸದಂತಿರುವ ಚೈನ್‌ನ ವಾಚ್ ಹೆಂಗಳೆಯರಿಗೆ ಅಚ್ಚುಮೆಚ್ಚು. ಇವು ಸಾಂಪ್ರದಾಯಿಕ ಲುಕ್ ನೀಡುತ್ತವೆ. ಸೀರೆ, ಕುರ್ತಾಗಳಿಗೆ ಬ್ರೆಸ್‌ಲೇಟ್ ವಾಚ್‌ಗಳು ಒಪ್ಪುತ್ತವೆ. ಪಾರ್ಟಿ, ಸಮಾರಂಭಗಳಿಗೆ ಬ್ರೆಸ್‌ಲೇಟ್ ವಾಚ್ ಹೇಳಿ ಮಾಡಿಸಿದಂತವು.

ಬೆಲ್ಟ್ ವಾಚ್

ಮೊದಲಿನಿಂದಲೂ ಬೆಲ್ಟ್ ವಾಚ್‌ಗಳು ಚಾಲ್ತಿಯಲ್ಲಿವೆ. ಈಗಂತೂ ಒಂದೇ ಡೈಯಲ್‌ಗೆ ಬೇರೆ ಬೇರೆ ಬಣ್ಣ, ಡಿಸೈನ್ ಮಾಡಿರುವ ಬೆಲ್ಟ್‌ಗಳು ಸಿಗುತ್ತವೆ. ಬೇಕಾದ ರೀತಿಯ ಬೆಲ್ಟ್‌ಗಳು ಬದಲಿಸಿಕೊಳ್ಳಬಹುದು. ಲೆದರ್, ನೈಲಾನ್, ಬಟ್ಟೆ, ಪ್ಲಾಸ್ಟಿಕ್ ಬೆಲ್ಟ್‌ಗಳನ್ನೂ ಒಂದೇ ಡೈಯಲ್‌ಗೆ ಹಾಕೊಳ್ಳಬಹುದು ಜೀನ್ಸ್, ಫ್ರಾಕ್‌ನಂತಹ ಡ್ರೆಸ್‌ಗಳಿಗೆ ಬೆಲ್ಟ್ ವಾಚ್ ಬೆಸ್ಟ್.

ಸ್ಮಾರ್ಟ್ ವಾಚ್

ಈಗಂತೂ ಎಲ್ಲಾ ವಯಸ್ಸಿನವರಿಗೂ ಸ್ಮಾರ್ಟ್ ವಾಚ್ ಅಚ್ಚುಮೆಚ್ಚು. ನಮ್ಮ ಪ್ರತಿಯೊಂದು ಚಲನವಲನಗಳನ್ನೂ ದಾಖಲಿಸಿಕೊಳ್ಳುವ ಅವಕಾಶ ಇದರಲ್ಲಿ ಇರುತ್ತದೆ. ಜತೆಗೆ ಮೊಬೈಲ್ ಹಿಡಿದುಕೊಳ್ಳದೇ ಕರೆ ಮಾಡಬಹುದು, ಹಾಡುಗಳನ್ನು ಕೇಳಬಹುದು, ಅಷ್ಟೇ ಅಲ್ಲದೆ ಆರೋಗ್ಯದ ಮುನ್ನೆಚ್ಚರಿಕೆಯನ್ನೂ ಪಡೆಯಬಹುದು. ಸ್ಮಾರ್ಟ್ ವಾಚ್‌ಗಳೂ ಕೂಡ ಬೆಲ್ಟ್, ಚೈನ್ ಹೀಗೆ ವಿವಿಧ ವಿನ್ಯಾಸದಲ್ಲಿ, ವಿವಿಧ ಬಣ್ಣಗಳಲ್ಲಿ ದೊರೆಯುತ್ತದೆ.

ರಾಕಿ ವಾಚ್



ಹೊಸತರದ್ದೇನಾದರೂ ಬೇಕು ಎನ್ನುವವರಿಗೆ ರಾಕಿ ವಾಚ್ ಉತ್ತಮ ಆಯ್ಕೆ. ಸಿಂಪಲ್ ದಾರಗಳು, ಹೂವುಗಳಿಂದ ಕೂಡಿದ ಬೆಲ್ಟ್‌ಗಳು ಪುಟ್ಟ ಡೈಯಲ್ ವಾಚ್‌ನ ಲುಕ್ ಹೆಚ್ಚಿಸುತ್ತವೆ. ಕಾಲೇಜು ಹುಡುಗಿಯರಿಂದ ಹಿಡಿದು ಉದ್ಯೋಗಕ್ಕೆ ತೆರಳುವ ಮಹಿಳೆಯರಿಗೆ ಈ ವಾಚ್ ಇಷ್ಟವಾಗುತ್ತದೆ.

ಕಪಲ್ ವಾಚ್‌ಗಳು

ಸಾಮಾನ್ಯವಾಗಿ ಪ್ರೇಮಿಗಳು ಅಥವಾ ದಂಪತಿ ಒಂದೇ ರೀತಿಯ ವಾಚ್ ಧರಿಸಲು ಇಷ್ಟಪಡುತ್ತಾರೆ. ಅಂಥವರಿಗೆ ಈ ಕಪಲ್ ವಾಚ್‌ಗಳು ಉತ್ತಮ ಆಯ್ಕೆ. ಚೌಕ, ವೃತ್ತಾಕಾರ ಸೇರಿ ವಿವಿಧ ವಿನ್ಯಾಸದಲ್ಲಿ ಈ ವಾಚ್‌ಗಳು ದೊರೆಯುತ್ತವೆ. ಡೈಯಲ್‌ನಲ್ಲಿ ರೋಮನ್, ಇಂಗ್ಲೀಷ್ ಅಂಕೆಗಳನ್ನು ಹೊಂದಿರುತ್ತವೆ.

ಸ್ಪೋರ್ಟ್ಸ್ ವಾಚ್‌ಗಳು

ನೀವೇನಾದಾರೂ ಕ್ರೀಡೆಗಳಲ್ಲಿ ತೊಡಗಿದ್ದರೆ, ಚಾರಣ ಮಾಡುವುದಾದರೆ ಸ್ಪೋರ್ಟ್ಸ್ ವಾಚ್‌ಗಳು ಬೆಸ್ಟ್. ಇವು ಉತ್ತಮ ಗುಣಮಟ್ಟದ ವಾಚ್‌ಗಳಾಗಿದ್ದು, ಸೂಕ್ಷ್ಮವಾಗಿ ನೋಡಿಕೊಳ್ಳಬೇಕು ಎನ್ನುವ ಗೋಜಿರುವುದಿಲ್ಲ. ಕ್ಯಾಸಿಯೊ, ಡ್ರೆಸ್ ಬೆರಿ ಸೇರಿದಂತೆ ಹಲವು ಬ್ರಾಂಡ್‌ಗಳ ಸ್ಪೋರ್ಟ್ಸ್ ವಾಚ್‌ಗಳು ಮಾರುಕಟ್ಟೆ, ಆನ್‌ಲೈನ್ ಸ್ಟೋರ್‌ಗಳಲ್ಲಿ ಲಭ್ಯವಿದೆ.

ಅಂತರಂಗ



ಅಕ್ಷರ ದಾಮ್ಲೆ

ಅಸೂಯೆ ಯಾಕೆ?

ಪಕ್ಕದ ಮನೆಯ ಹೆಂಗಸಿಗೆ ದೇವರು ಎಲ್ಲಾ ಕೊಟ್ಟಿದ್ದಾರೆ. ಆದರೂ ಬೇರೆಯವರ ಬಗ್ಗೆ ಯಾವತ್ತೂ ಅಸೂಯೆ. ಯಾಕೆ ಹೀಗೆ?

ನಮ್ಮ ಸಮಾಜದಲ್ಲಿ ಎಲ್ಲಾ ವರ್ಗದ ಜನರಿದ್ದಾರೆ. ಪ್ರತಿಯೊಬ್ಬರಿಗೂ ಅವರವರದ್ದೇ ಆದಂತಹ ಜೀವನ ಶೈಲಿ ಇರುತ್ತದೆ. ಹಾಗೆಯೇ ತಮ್ಮದೇ ಆದಂತಹ ಸಮಸ್ಯೆಗಳೂ ಇರುತ್ತವೆ. ಆದರೆ, ಅನೇಕರಿಗೆ ಇರುವ ತುಡಿತ ಏನೆಂದರೆ, ತಾನು ಎಲ್ಲರಿಗಿಂತಲೂ ಶ್ರೇಷ್ಠರಾಗಿರಬೇಕು ಎಂಬುದು. ಈ ಸ್ಪರ್ಧೆಯ ಕಾರಣದಿಂದಾಗಿ ಎಷ್ಟೋ ಬಾರಿ ತಾನು ಎತ್ತರಕ್ಕೇರಬೇಕು ಎನ್ನುವ ಹಂಬಲದ ಜೊತೆಗೆ ಇತರರು ಕೆಳಕ್ಕೆ ಬೀಳಬೇಕು ಅಥವಾ ಅವರುಗಳು ಎತ್ತರಕ್ಕೆ ಏರುವುದನ್ನು ತಡೆಯಬೇಕು ಎನ್ನುವ ಮನೋಭಾವವೂ ಬಂದುಬಿಡುತ್ತದೆ. ಹಾಗಾಗಿ ತಮ್ಮ ಪಕ್ಕದಲ್ಲಿರುವವರು ಉತ್ತಮರಾದರೆ ನಮ್ಮ ಮನದಲ್ಲಿ ಅವರ ಬಗ್ಗೆ ಅಸೂಯೆ ಮೂಡುತ್ತದೆ. ಅಸಹನೆ ಮೂಡುತ್ತದೆ. ಹಾಗಾಗಿ ಅವರ ಕುರಿತು ಕೆಟ್ಟದ್ದನ್ನು ಮಾತನಾಡುವುದು, ಅಥವಾ ಅವರಿಗೆ ಕೆಡುಕನ್ನು ಬಯಸುವುದು ಹೀಗೆ ಅನೇಕ ಋಣಾತ್ಮಕ ಚಟುವಟಿಕೆಗಳಲ್ಲಿ ನಮ್ಮನ್ನು ನಾವು ತೊಡಗಿಸಿಕೊಳ್ಳುತ್ತೇವೆ.

ಆದರೆ ಇಂತಹ ವ್ಯಕ್ತಿಗಳಿಗೆ ಅರ್ಥವಾಗದ ಕೆಲವು ವಿಚಾರಗಳು ಏನೆಂದರೆ, ನಾವು ಎಷ್ಟು ಶ್ರೇಷ್ಠರೆಂದು ಅಂದುಕೊಳ್ಳುತ್ತೇವೋ, ಅಷ್ಟೇ ಅಥವಾ ಅದನ್ನೂ ಮೀರಿಸುವ ಅನೇಕರಿರುತ್ತಾರೆ. ಅದು ಒಂದು ರೀತಿ, ಬೆಟ್ಟಗಳ ಸಾಲುಗಳ ಹಾಗೆ. ಒಂದು ಎತ್ತರವಾದ ಬೆಟ್ಟವನ್ನು ಹತ್ತಿದಾಗ ಮತ್ತೊಂದು ದೊಡ್ಡ ಬೆಟ್ಟ ಕಾಣಿಸುತ್ತದೆ. ಅದನ್ನು ಹತ್ತಿದಾಗ ಮಗದೊಂದು ಕಾಣಿಸುತ್ತದೆ. ಹಾಗಾಗಿ ನಮ್ಮ ಜೀವನದಲ್ಲಿ ನಮಗೆ ಏನೆಲ್ಲಾ ಒಳ್ಳೆಯ ಕೆಲಸಗಳನ್ನು ಮಾಡುವುದಕ್ಕೆ ಸಾಧ್ಯವಿದೆಯೋ, ಅಷ್ಟನ್ನು ಮಾಡಿಕೊಂಡು ಹೋದರೆ ಅದರಿಂದ ಸಿಗುವ ಸಂತುಷ್ಟಿಯೇ ಬೇರೆ. ಇನ್ನೊಂದು ಮುಖ್ಯವಾದ ವಿಚಾರ ಏನೆಂದರೆ, ನಾವು ನಮ್ಮ ಆಸುಪಾಸಿನಲ್ಲಿರುವವರನ್ನು ಮೇಲೇರದಂತೆ ತಡೆಯಬಹುದೇ ವಿನಃ ಎಲ್ಲರನ್ನೂ ತಡೆಯಲು ಸಾಧ್ಯವಿಲ್ಲವಲ್ಲಾ? ದೂರದಲ್ಲಿರುವ ಯಾರೋ ಒಬ್ಬರು ನಿಮಗಿಂತಲೂ ಮೇಲೆ ಏರುತ್ತಿರಬಹುದು ಅಥವಾ ಈಗಾಗಲೇ ಏರಿರಬಹುದು. ಹಾಗಿದ್ದ ಮೇಲೆ, ನಿಮ್ಮ ಪಕ್ಕದವರೇ ಏರಿದರೆ ಏನು ಸಮಸ್ಯೆ? ಬದಲಾಗಿ ಅದರಿಂದ ನಮಗೆ ಲಾಭವೇ ಜಾಸ್ತಿ. ಆದರೆ ಅದನ್ನು ನಾವು ಅರ್ಥಮಾಡಿಕೊಳ್ಳುವುದಿಲ್ಲ. ನಾವು ಸದೃಢವಾಗಿ ಬೆಳೆಯಬೇಕಾದರೆ, ನಮ್ಮ ಆಸುಪಾಸಿನಲ್ಲಿರುವವರೂ ಬೆಳೆಯಬೇಕು. ಆವಾಗಲೇ ಒಂದು ಸಮಾಜವಾಗಿ ನಮಗೆ ಬೆಳೆಯುವುದಕ್ಕೆ ಸಾಧ್ಯ. ಇನ್ನೊಬ್ಬರ ಕುರಿತು ಅಸೂಯೆ ಪಡುವ ಬದಲು ಅವರ ಏಳಿಗೆಯನ್ನು ಹರ್ಷಿಸಿದರೆ ಅದು ನಮ್ಮ ಏಳಿಗೆಗೂ ಧನಾತ್ಮಕ ಶಕ್ತಿಯನ್ನು ಕೊಡುತ್ತದೆ. ಅವೆಲ್ಲದಕ್ಕಿಂತಲೂ ಮಿಗಿಲಾಗಿ ಇತರರ ಬಗ್ಗೆ ಚಿಂತಿಸುವ ಬದಲು ನಾವೆಲ್ಲಿದ್ದೇವೆ ಅಂತ ಗಮನ ಹರಿಸಿದರೆ, ಇನ್ನೂ ಉತ್ತಮರಾಗಬಹುದೇನೋ!

ಅದನ್ನೇ ಡಿ.ವಿ.ಜಿ ಯವರು ತಮ್ಮ ಮಂಕುತಿಮ್ಮನ ಕಗ್ಗದಲ್ಲಿ ಹೀಗೆ ಹೇಳಿದ್ದಾರೆ:

ಅವರೆಷ್ಟು ಧನವಂತರ್, ಇವರಷ್ಟು ಬಲವಂತರ್।
ಅವರೆಷ್ಟು ಯಶವಂತರ್ ಎನ್ನುವ ಕರುಬಿನಲಿ ||
ಭವಿಕ, ನಿನಗೆಷ್ಟಿಹುದೋ ಮರೆತು ನೀಂ ಕೊರಗುವುದು!
ಶಿವನಿಗೆ ಕೃತಜ್ಞತೆಯೇ? ಮಂಕುತಿಮ್ಮ!

ಹದಿಹರೆಯದ ಮತ್ತು ದಾಂಪತ್ಯದ ಲೈಂಗಿಕ ಸಮಸ್ಯೆ, ಮಾನಸಿಕ ಸಮಸ್ಯೆ ಕುರಿತು ಪ್ರಶ್ನೆಗಳನ್ನು ನಮಗೆ ಕಳುಹಿಸಿ. ನಿಮ್ಮ ಪ್ರಶ್ನೆಗಳಿಗೆ ಮನಃಶಾಸ್ತ್ರಜ್ಞ ಅಕ್ಷರದಾಮ್ಲೆ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನುbhoomika@prajavani.co.inಗೆ ಕಳುಹಿಸಬಹುದು.

ಸಂಜೆ ಸ್ನ್ಯಾಕ್




ಕೆ.ವಿ.ರಾಜಲಕ್ಷ್ಮಿ

ಗೋರಿಕಾಯಿ ಉಂಡೆ

ಬೇಕಾಗುವ ಸಾಮಗ್ರಿ: ಸಣ್ಣಗೆ ಹೆಚ್ಚಿ ಬೇಯಿಸಿದ ಎಳೆ ಗೋರಿಕಾಯಿ 1 ಕಪ್, ಕಡಲೆಬೇಳೆ ಮುಕ್ಕಾಲು ಕಪ್, ಹೆಸರುಬೇಳೆ ಕಾಲು ಕಪ್, ಒಣಮೆಣಸಿನಕಾಯಿ 5-6, ರುಚಿಗೆ ತಕ್ಕಷ್ಟು ಉಪ್ಪು.

ಮಾಡುವ ವಿಧಾನ: ಬೇಳೆಗಳನ್ನು ಒಂದುಗಂಟೆ ನೀರಲ್ಲಿ ನೆನೆಸಿ ಒಣಮೆಣಸಿನಕಾಯಿ, ಉಪ್ಪು ಸೇರಿಸಿ ರುಬ್ಬಿಕೊಳ್ಳಿ. ನಂತರ ಗೋರಿಕಾಯಿ ಸೇರಿಸಿ ಚೆನ್ನಾಗಿ ಕಲೆಸಿ. ಈ ಮಿಶ್ರಣವನ್ನು ಸಣ್ಣ ಸಣ್ಣ ಉಂಡೆಗಳನ್ನಾಗಿ ಕಟ್ಟಿ ಇಡ್ಲಿಪಾತ್ರೆಯಲ್ಲಿ ಹತ್ತು ನಿಮಿಷ ಬೇಯಿಸಿ.

ಕಾಯಿ ವಡೆ



ಬೇಕಾಗುವ ಸಾಮಗ್ರಿ: ಹೆಸರು ಬೇಳೆ 1 ಕಪ್, ಕಡಲೆ ಬೇಳೆ 1/4 ಕಪ್, ತೆಂಗಿನ ತುರಿ 1/2 ಕಪ್,ಒಣ ಮೆಣಸಿನಕಾಯಿ 2-4, ಶುಂಠಿ ಸಣ್ಣ ತುಂಡು, ಚಿಟಿಕಿ ಇಂಗು, ರುಚಿಗೆ ತಕ್ಕಷ್ಟು ಉಪ್ಪು.

ಮಾಡುವ ವಿಧಾನ: ಹೆಸರುಬೇಳೆ, ಕಡಲೆ ಬೇಳೆಯನ್ನು ಅರ್ಧ ಗಂಟೆ ನೀರಿನಲ್ಲಿ ನೆನೆಸಿ, ನೀರು ಬಸಿದು, ಉಳಿದ ಪದಾರ್ಥಗಳೊಂದಿಗೆ ಸೇರಿಸಿ ಗಟ್ಟಿಯಾಗಿ ರುಬ್ಬಿ. ನಂತರ ವಡೆಯಾಕಾರದಲ್ಲಿ ತಟ್ಟಿ, ಹಬೆಯಲ್ಲಿ ಹತ್ತುನಿಮಿಷ ಬೇಯಿಸಿ.

ಮುಂಗಾರಿಗೆ ಬಿಸಿಬಿಸಿ ಕಷಾಯ...

ರಸಾಸ್ವಾದ

ಕೃಷ್ಣಿ ಶಿರೂರ

ಮುಂಗಾರು ಮಳೆ ಅದಾಗಲೇ ಅಡಿಯಿಟ್ಟಿದೆ. ಬಿರುಬೇಸಿಗೆ ಕಳಚಿಕೊಂಡು ಮುಂಗಾರು ಅಡಿಯಿಡುವ ಸಂಧಿ ಸಮಯದಲ್ಲಿ ಮಂದಿಯ ಆರೋಗ್ಯದಲ್ಲಿ ಕೊಂಚ ಏರುಪೇರಾಗುವುದು ಸಾಮಾನ್ಯ. ಬದಲಾಗುವ ಋತುಮಾನದಲ್ಲಿ ನಮ್ಮ ದೇಹ ಒಗ್ಗಿಕೊಳ್ಳುವಾಗ ಶೀತ, ನೆಗಡಿ, ಕಫ, ಕೆಮ್ಮು, ಜ್ವರ ಕಾಡುವುದು ಸಹಜ ಕೂಡ. ಚಿಕ್ಕ ಮಕ್ಕಳು, ವಯೋವೃದ್ಧರಲ್ಲಿ ಈ ಯಾತನೆ ತುಸು ಹೆಚ್ಚು. ಇನ್ನು ಶೀತ, ಕಫ ಪ್ರಕೃತಿಯುಳ್ಳವರಿಗೆ ಈ ಸಂಧಿಸಮಯ ಹೈರಾಣಾಗಿಸಬಹುದು. ದೇಹದಲ್ಲಿ ರೋಗನಿರೋಧಕ ಶಕ್ತಿ ಕಡಿಮೆ ಇರುವವರಲ್ಲಂತೂ ಮುಂಗಾರು ಸಮಯದ ವೈರಾಣು ಜ್ವರಬಾಧೆ ಕಾಡದೇ ಇರದು. ಈ ಎಲ್ಲ ಅನಾರೋಗ್ಯ ಸಮಸ್ಯೆಗಳು ಗಂಭೀರವಲ್ಲದಿದ್ದರೂ ಅವು ಉಂಟು ಮಾಡುವ ಕಿರಿಕಿರಿಯಿಂದ ದೂರವಿಡಲು ಮನೆಮದ್ದು ನಮ್ಮಕೈಯಲ್ಲಿದೆ. ಅಡುಗೆ ಮನೆಯ ಒಗ್ಗರಣೆ ಡಬ್ಬಿ, ಹಿತ್ತಿಲಲ್ಲಿ ಬೆಳೆಯುವ ಕೆಲವು ಔಷಧಿ ಸಸ್ಯಗಳೇ ಇಲ್ಲಿ ಸಹಾಯಕ್ಕೆ ಬರಲಿವೆ. ನಮ್ಮ ಹಿರಿಯರಿಂದ ಬಳುವಳಿಯಾಗಿ ಬಂದಿರುವ 'ಕಷಾಯ'ವೇ ಇಂದಿನ 'ಗ್ರೀನ್ ಟೀ' ಎಂಬ ಹೈಟೆಕ್ ಹೆಸರಿನೊಂದಿಗೆ ಅಪ್‌ಗ್ರೇಡ್ ಆಗಿ ಮಾರುಕಟ್ಟೆಯಲ್ಲಿ ದೊಡ್ಡ ಜಾಗವನ್ನೇ ಆಕ್ರಮಿಸಿಕೊಂಡಿವೆ. ಕಷಾಯ ಆರೋಗ್ಯಕ್ಕೆ ಒಳ್ಳೆಯದೆಂದು ನಿತ್ಯ ಕುಡಿದರೆ ಕಷ್ಟವೇ. ವಾರಕ್ಕೆ ಎರಡು ಅಥವಾ ಮೂರು ಬಾರಿ, ಕಾಲು ಕಪ್ ಕುಡಿದರೆ ಉತ್ತಮ ಎಂಬುದು ಆಯುಷ್ ವೈದ್ಯರು ನೀಡುವ ಸಲಹೆ. ಹಾಗಾದರೆ, ಯಾವ ಕಷಾಯ ಯಾವ ಅನಾರೋಗ್ಯ ಸಮಸ್ಯೆಗೆ ಪರಿಹಾರ ನೀಡಲಿದೆ ಎಂದು ನೋಡೋಣ.



ಕಾಳುಮೆಣಸಿನ ಕಷಾಯ

ಬೇಕಾಗುವ ಸಾಮಗ್ರಿ: ಕಾಳುಮೆಣಸು (ಕರಿ ಅಥವಾ ಬಿಳಿ) 1ಚಮಚ, ಜೀರಿಗೆ 1 ಚಮಚ, ಕೊತ್ತಂಬರಿ ಬೀಜ 1 ಚಮಚ, ಮೆಂತೆ ಕಾಲು ಚಮಚ, ಬೆಲ್ಲ ದೊಡ್ಡ ಚಮಚ.

ಮಾಡುವ ವಿಧಾನ: ಒಂದು ಲೋಟ ನೀರಿಗೆ ಕಾಳುಮೆಣಸು, ಜೀರಿಗೆ, ಕೊತ್ತಂಬರಿ ಬೀಜ, ಮೆಂತೆ ಸ್ವಲ್ಪ ಜಜ್ಜಿ ಹಾಕಿ ಕುದಿಸಬೇಕು. ಅರ್ಧ ಲೋಟಕ್ಕೆ ಇಳಿದ ನಂತರ ಬೆಲ್ಲ ಸೇರಿಸಿ ಸ್ವಲ್ಪ ಕುದಿಸಿ, ಇಳಿಸಿ ನಂತರ ಸೋಸಿ ಬಿಸಿಯಿರುವಾಗಲೇ ಕುಡಿಯಬೇಕು. ಬೇಕಾದರೆ ಬಿಸಿ ಹಾಲು ಬೆರೆಸಿ ಕುಡಿಯಬಹುದು.

ಉಪಯೋಗ: ಶೀತ, ಗಂಟಲುಕೆರೆತ, ಕೆಮ್ಮು, ಜ್ವರ, ತಲೆಭಾರ ಸಮಸ್ಯೆಗೆ ಪರಿಹಾರ ನೀಡಲಿದೆ.

ಅಮೃತಬಳ್ಳಿ ಕಷಾಯ



ಬೇಕಾಗುವ ಸಾಮಗ್ರಿ: ಅಮೃತಬಳ್ಳಿ ಎಲೆ 4 (ಕಾಂಡವನ್ನೂ ಬಳಸಬಹುದು)

ಮಾಡುವ ವಿಧಾನ: ಒಂದು ಲೋಟ ನೀರಿಗೆ ಅಮೃತಬಳ್ಳಿ ಎಲೆ ಅಥವಾ ಕಾಂಡವನ್ನು ಹಾಕಿ ಕುದಿಸಬೇಕು. ಒಂದು ಲೋಟ ನೀರು ಕಾಲು ಲೋಟಕ್ಕೆ ಬಂದಾಗ ಸೋಸಿ ಕುಡಿಯಬೇಕು. ಕುಡಿಯುವಾಗ ಕಹಿ ಅನಿಸಿದರೆ ಬೆಲ್ಲ ಸೇರಿಸಿ ಕುಡಿಯಬಹುದು.

ಉಪಯೋಗ: ವೈರಾಣು ಜ್ವರ ಬಾಧೆಯನ್ನು ತಗ್ಗಿಸಲಿದೆ. ದೇಹದಲ್ಲಿ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಲಿದೆ.

ದೊಡ್ಡಪತ್ರೆ ಕಷಾಯ

ಬೇಕಾಗುವ ಸಾಮಗ್ರಿ: ದೊಡ್ಡಪತ್ರೆ 4, ತುಳಸಿ ದಳ 2, ಶುಂಠಿ(ಅರ್ಧ ಇಂಚು), ಅರಿಸಿನ ಪುಡಿ (ಒಂದು ಚಮಚ)

ಮಾಡುವ ವಿಧಾನ: ಒಂದು ಲೋಟ ನೀರಿಗೆ ದೊಡ್ಡಪತ್ರೆ, ತುಳಸಿ ದಳ, ಶುಂಠಿ, ಅರಿಸಿನ ಪುಡಿಯನ್ನು ಹಾಕಿ ಕುದಿಯಲು ಬಿಡಿ. ಒಂದು ಲೋಟ ನೀರು ಕಾಲು ಲೋಟಕ್ಕೆ ಬರುವಷ್ಟು ಕುದಿಸಿದ ನಂತರ ಸೋಸಿ ಬಿಸಿಬಿಸಿಯಾಗಿ ಕುಡಿಯಬೇಕು.



ಉಪಯೋಗ: ಮಕ್ಕಳಿಗೆ, ದೊಡ್ಡವರಿಗೆ ಕಫ ಕಟ್ಟಿಕೊಂಡಲ್ಲಿ ಈ ಕಷಾಯ ಪರಿಹಾರ ನೀಡಲಿದೆ.

ಶುಂಠಿ–ತುಳಸಿ ಕಷಾಯ

ಬೇಕಾಗುವ ಸಾಮಗ್ರಿ: ಶುಂಠಿ (ಒಂದು ಇಂಚು), ತುಳಸಿ 5 ದಳ, ಲಿಂಬು (ಅರ್ಧ), ಜೇನುತುಪ್ಪ (2ಚಮಚ).

ಮಾಡುವ ವಿಧಾನ: ಒಂದು ಲೋಟ ನೀರಿಗೆ ಶುಂಠಿ, ತುಳಸಿ ಹಾಕಿ ಕುದಿಸಿ, ಕಾಲು ಲೋಟಕ್ಕೆ ಇಳಿಸಬೇಕು. ಸೋಸಿದ ನಂತರ ಲಿಂಬು ರಸ, ಜೇನು ತುಪ್ಪ ಸೇರಿಸಿ ಚೆನ್ನಾಗಿ ಕದಡಿ ಬಿಸಿಯಿರುವಾಗಲೇ ಕುಡಿಯಬೇಕು.

ಉಪಯೋಗ: ಶೀತ, ಗಂಟಲುಕೆರೆತ, ನೆಗಡಿ ಕಫ ಸಮಸ್ಯೆಗೆ ಪರಿಹಾರ ನೀಡುವುದು.



ಹಾಸನ ಜಿಲ್ಲೆಯಲ್ಲಿ ಹಲವೆಡೆ ಅಧಿಕಾರಿಗಳ ಶೋಧ: ಜೆಡಿಎಸ್ ಮುಖಂಡರ ವಿಚಾರಣೆ

ಪೆನ್‌ಡ್ರೈವ್ ಹಂಚಿಕೆ: ತನಿಖೆ ಚುರುಕು

ಪ್ರಜಾವಾಣಿ ವಾರ್ತೆ

ಹಾಸನ: ಮಾಜಿ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ಲೈಂಗಿಕ ದೌರ್ಜನ್ಯ, ಅಶ್ಲೀಲ ವಿಡಿಯೊ ಪ್ರಕರಣದ ತನಿಖೆ ನಡೆಸುತ್ತಿರುವ ಎಸ್‌ಐಟಿ ಅಧಿಕಾರಿಗಳು ಪೆನ್‌ಡ್ರೈವ್ ಹಂಚಿಕೆ ಮಾಡಿದವರ ಬೆನ್ನು ಹತ್ತಿದ್ದಾರೆ. ಪ್ರಜ್ವಲ್ ಬಂಧನದ ನಂತರ ಪ್ರಕರಣಕ್ಕೆ ಸಂಬಂಧಿಸಿದ ಇನ್ನೊಂದು ಆಯಾಮದ ತನಿಖೆಯನ್ನು ಚುರುಕುಗೊಳಿಸಿದ್ದಾರೆ.

ಲೋಕಸಭೆ ಚುನಾವಣೆ ಮುಗಿದ ನಂತರ ರಾಜಕೀಯ ಸಮೀಕರಣ ಬದಲಾಗಿದ್ದು, ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ಕೇಂದ್ರದಲ್ಲಿ ಸಚಿವರಾಗಿದ್ದಾರೆ. ಇದರ ಬೆನ್ನಲ್ಲೇ ಏಕಪಕ್ಷೀಯ ತನಿಖೆ ನಡೆಸದಂತೆ ಎಸ್‌ಐಟಿಗೆ ಸೂಚನೆ ಹೋಗಿದೆ ಎನ್ನುವ ಮಾಹಿತಿ ಲಭ್ಯವಾಗಿದೆ. ಅದಕ್ಕೆ ಅನುಗುಣವಾಗಿ ಎಸ್‌ಐಟಿ ಅಧಿಕಾರಿಗಳು, ಪೆನ್‌ಡ್ರೈವ್ ಹಂಚಿಕೆ ಪ್ರಕರಣದ ತನಿಖೆ ತೀವ್ರಗೊಳಿಸಿದ್ದಾರೆ.

ಪ್ರಜ್ವಲ್ ರೇವಣ್ಣ ವಿಡಿಯೊಗಳ ಬಗ್ಗೆ ಮೊದಲೇ ಹಲವರಿಗೆ ಗೊತ್ತಿತ್ತು. ಆದರೆ, ಅದನ್ನು ಪೆನ್‌ಡ್ರೈವ್ ಮೂಲಕ ಹಂಚಿಕೆ ಮಾಡಿದ ನಂತರವಷ್ಟೇ ಪ್ರಕರಣ ಬೆಳಕಿಗೆ ಬಂದಿತ್ತು. ಈ ಹಿನ್ನೆಲೆ ಯಲ್ಲಿ ಪ್ರಜ್ವಲ್‌ಗೆ ಆಪ್ತರಾಗಿರುವ ಜೆಡಿಎಸ್ ಮುಖಂಡರನ್ನೂ ಎಸ್‌ಐಟಿ ಅಧಿಕಾರಿಗಳು ವಿಚಾರಣೆಗೆ ಒಳಪಡಿಸಿದ್ದಾರೆ.

ಕೆಲ ದಿನಗಳಿಂದ ಜಿಲ್ಲೆಯಲ್ಲಿ ಠಿಕಾಣಿ ಹೂಡಿರುವ ಅಧಿಕಾರಿಗಳ ಒಂದು ತಂಡ, 10ಕ್ಕೂ ಅಧಿಕ ಜನರ ಮನೆಗಳ ಮೇಲೆ ದಾಳಿ ನಡೆಸಿದೆ. ಪೆನ್‌ಡ್ರೈವ್ ಜೊತೆಗೆ ವಾಟ್ಸ್‌ಆ್ಯಪ್ ಮೂಲಕವೂ ವಿಡಿಯೊ ಹಂಚಿಕೆ ಮಾಡಲಾಗಿದೆ. ಹಾಗಾಗಿ ಯಾವ ಮೊಬೈಲ್‌ಗಳಿಂದ ವಿಡಿಯೊಗಳನ್ನು ಹಂಚಿಕೊಳ್ಳಲಾಗಿದೆ ಎಂಬುದನ್ನು ಪತ್ತೆ ಮಾಡುತ್ತಿರುವ ಅಧಿಕಾರಿಗಳು, ಮೊಬೈಲ್ ಫೋನ್‌ಗಳನ್ನು ವಶಕ್ಕೆ ಪಡೆದು, ಅವುಗಳಲ್ಲಿ ದತ್ತಾಂಶ ಪರಿಶೀಲಿಸುತ್ತಿದ್ದಾರೆ.

ಪೆನ್‌ಡ್ರೈವ್ ಹಂಚಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಐವರ ವಿರುದ್ಧ ನಗರದ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಬಹುತೇಕ ಆರೋಪಿಗಳನ್ನು ಈಗಾಗಲೇ ಬಂಧಿಸಲಾಗಿದೆ. ಇದೀಗ ಈ ಆರೋಪಿಗಳ ಹೊರತಾಗಿ ಬೇರೆ ಯಾರಾದರೂ ಪೆನ್‌ಡ್ರೈವ್ ಹಾಗೂ ವಿಡಿಯೊಗಳ ಹಂಚಿಕೆಯಲ್ಲಿ ಭಾಗಿಯಾಗಿದ್ದಾರೆಯೇ ಎನ್ನುವುದನ್ನು ತಂಡ ಪತ್ತೆ ಮಾಡುತ್ತಿದೆ ಎಂದು ತಿಳಿದು ಬಂದಿದೆ. 'ಜೆಡಿಎಸ್ ಪಕ್ಷದ ಹಲವು ಮುಖಂಡರ ವಿಚಾರಣೆಯನ್ನು ಈಗಾಗಲೇ ನಡೆಸಿ, ಮೊಬೈಲ್ ಫೋನ್ ವಶಕ್ಕೆ ಪಡೆಯಲಾಗಿದೆ. ಇನ್ನಷ್ಟು ಜನರ ಬಳಿಯೂ ವಿಚಾರಣೆ ನಡೆಸಲು ನಿರ್ಧರಿಸಲಾಗಿದೆ. ಪೆನ್‌ಡ್ರೈವ್ ಹಂಚಿಕೆ ಪ್ರಕರಣ ಬಗೆದಷ್ಟು ವಿಸ್ತಾರವಾಗುತ್ತಲೇ ಇದೆ. ಇದರ ಮೂಲವನ್ನು ಪತ್ತೆ ಮಾಡುವುದೇ ಸವಾಲಿನ ಕೆಲಸ ಎನ್ನುವಂತಾಗಿದೆ' ಎಂದು ಎಸ್‌ಐಟಿ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.



ಹಾಸನದ ಆರ್‌.ಸಿ.ರಸ್ತೆಯ ಸಂಸದರ ಸರ್ಕಾರಿ ನಿವಾಸಕ್ಕೆ ಶುಕ್ರವಾರ ಪ್ರಜ್ವಲ್ ರೇವಣ್ಣ ಅವರನ್ನು ಕರೆತಂದು ಸ್ಥಳ ಮಹಜರು ನಡೆಸಲಾಯಿತು

ಸಂಸದರ ಸರ್ಕಾರಿ ನಿವಾಸದಲ್ಲಿ ಸ್ಥಳ ಮಹಜರು

ಲೈಂಗಿಕ ದೌರ್ಜನ್ಯ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರನ್ನು ನಗರದ ಆರ್‌.ಸಿ. ರಸ್ತೆಯ ಸಂಸದರ ಸರ್ಕಾರಿ ನಿವಾಸಕ್ಕೆ ಕರೆತಂದಿದ್ದ ಎಸ್‌ಐಟಿ ಅಧಿಕಾರಿಗಳು, ಶುಕ್ರವಾರ ಸತತ ನಾಲ್ಕು ಗಂಟೆ ಸ್ಥಳ ಮಹಜರು ನಡೆಸಿದರು.

ಇದೇ ನಿವಾಸದಲ್ಲಿ ತಮ್ಮ ಮೇಲೆ ಲೈಂಗಿಕ ದೌರ್ಜನ್ಯ ನಡೆಸಲಾಗಿದೆ ಎಂದು ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯೆಯೊಬ್ಬರು ದೂರು ನೀಡಿದ್ದು, ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸ್ಥಳ ಮಹಜರು ನಡೆಸಲಾಗಿದೆ. ಬೆಳಿಗ್ಗೆ 11.30ಕ್ಕೆ ಬಂದಿದ್ದ ಅಧಿಕಾರಿಗಳ ತಂಡ, ಸಂಜೆ 4ಗಂಟೆಗೆ ಪ್ರಜ್ವಲ್ ಅವರನ್ನು ಕರೆದುಕೊಂಡು ಬೆಂಗಳೂರಿಗೆ ತೆರಳಿತು.

ಸದ್ಯ ನ್ಯಾಯಾಂಗ ಬಂಧನದಲ್ಲಿದ್ದ ಪ್ರಜ್ವಲ್ ಅವರನ್ನು ಬಾಡಿ ವಾರೆಂಟ್ ಮೇಲೆ ವಶಕ್ಕೆ ಪಡೆದು ಕರೆತರಲಾಗಿದ್ದು, ಎಫ್‌ಎಸ್‌ಎಲ್ ತಜ್ಞರೂ ಬಂದಿದ್ದರು. ಈ ವೇಳೆ ಸಿಬ್ಬಂದಿ ಪ್ರಿಂಟರ್ ಹಾಗೂ ಇತರ ಸಾಮಗ್ರಿಗಳನ್ನು ನಿವಾಸದ ಒಳಗೆ ತೆಗೆದುಕೊಂಡು ಹೋಗಿದ್ದರು. ಮುಂಜಾಗ್ರತಾ ಕ್ರಮವಾಗಿ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು.

ಕೆಲ ದಿನಗಳ ಹಿಂದೆ ಹೊಳೆನರಸೀಪುರದ ಚೆನ್ನಾಂಬಿಕಾ ನಿವಾಸಕ್ಕೆ ಪ್ರಜ್ವಲ್ ಅವರನ್ನು ಕರೆತಂದಿದ್ದ ಎಸ್‌ಐಟಿ ಅಧಿಕಾರಿಗಳು, ಸ್ಥಳ ಮಹಜರು ನಡೆಸಿದ್ದರು. ಅಲ್ಲಿಂದ ನೇರವಾಗಿ ಬೆಂಗಳೂರಿಗೆ ತೆರಳಿದ್ದರು.

ಮದ್ಯದ ದರಕ್ಕೆ ಲಗಾಮು ನಿಯಮಕ್ಕೆ ತಿದ್ದುಪಡಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಜುಲೈ 1ರಿಂದಲೇ ತಿದ್ದುಪಡಿಗಳು ಜಾರಿಗೆ
- ಖರೀದಿದಾರರಿಗೆ ಆಗುತ್ತಿರುವ ನಷ್ಟ ತಪ್ಪಿಸಲು ಕ್ರಮ

ಬೆಂಗಳೂರು: ಮದ್ಯದ ದರಕ್ಕೆ ಲಗಾಮು ಹಾಕುವುದಕ್ಕಾಗಿ ಮದ್ಯ ಉತ್ಪಾದಕರು ಇತರ ರಾಜ್ಯಗಳಿಗೆ ನೀಡುತ್ತಿರುವ ಕನಿಷ್ಠ ಘೋಷಿತ ದರದಲ್ಲೇ ಕರ್ನಾಟಕಕ್ಕೂ ಮದ್ಯ ಪೂರೈಸುವುದನ್ನು ಕಡ್ಡಾಯಗೊಳಿಸಲು ರಾಜ್ಯ ಸರ್ಕಾರ ಮುಂದಾಗಿದೆ.

ಈ ಉದ್ದೇಶದಿಂದ ಕರ್ನಾಟಕ ಅಬಕಾರಿ (ಅಬಕಾರಿ ಸುಂಕಗಳು ಮತ್ತು ಶುಲ್ಕಗಳು) ನಿಯಮಗಳು–1968ಕ್ಕೆ ಮತ್ತೊಂದು ತಿದ್ದುಪಡಿ ತರಲು ಹಣಕಾಸು ಇಲಾಖೆ ಶುಕ್ರವಾರ ಕರಡು ಅಧಿಸೂಚನೆ ಪ್ರಕಟಿಸಿದೆ. ಜುಲೈ 1ರಿಂದಲೇ ಈ ತಿದ್ದುಪಡಿಗಳು ಜಾರಿಗೆ ಬರಲಿವೆ.

ಮದ್ಯ ತಯಾರಕರು ಮತ್ತು ಪೂರೈಕೆದಾರರು ನಿಗದಿಪಡಿಸುವ ಘೋಷಿತ ಬೆಲೆಗೆ ಅಬಕಾರಿ ತೆರಿಗೆ ಹಾಗೂ ಹೆಚ್ಚುವರಿ ಅಬಕಾರಿ ತೆರಿಗೆಗಳನ್ನು ಸೇರಿಸಿದ ಬಳಿಕ ಮಾರಾಟ ದರವನ್ನು ನಿರ್ಧರಿಸಲಾಗುತ್ತದೆ. ಬಹುತೇಕ ಮದ್ಯ ತಯಾರಿಕಾ ಕಂಪನಿಗಳು, ಪೂರೈಕೆದಾರರು ಇತರ ರಾಜ್ಯಗಳಿಗೆ ಕಡಿಮೆ ಘೋಷಿತ ದರಕ್ಕೆ ಮದ್ಯ ಪೂರೈಸುತ್ತಿದ್ದು, ಕರ್ನಾಟಕಕ್ಕೆ ಹೆಚ್ಚಿನ ಘೋಷಿತ ದರ ವಿಧಿಸುತ್ತಿವೆ. ಇದರಿಂದ ರಾಜ್ಯದಲ್ಲಿ ಮದ್ಯ ಖರೀದಿದಾರರಿಗೆ ಆಗುತ್ತಿರುವ ನಷ್ಟ ತಪ್ಪಿಸಲು ಅಬಕಾರಿ ನಿಯಮಗಳಿಗೆ ತಿದ್ದುಪಡಿ ತರಲಾಗುತ್ತಿದೆ ಎಂದು ಅಬಕಾರಿ ಇಲಾಖೆ ಮೂಲಗಳು ತಿಳಿಸಿವೆ.

ಹೊಸ ನಿಯಮಗಳ ಪ್ರಕಾರ, ಎಲ್ಲ ಮದ್ಯ ತಯಾರಕರು, ಬ್ರೀವರಿ, ವೈನರಿ ಮಾಲೀಕರು ಮತ್ತು ಮದ್ಯ ಪೂರೈಕೆದಾರರು ಪ್ರತಿಯೊಂದು ಘೋಷಿತ ಬ್ರ್ಯಾಂಡ್ ಮದ್ಯದ ಘೋಷಿತ ದರದ ಕುರಿತು ಪ್ರಮಾಣಪತ್ರ ಸಲ್ಲಿಸಬೇಕು. ಉತ್ಪಾದನಾ ವೆಚ್ಚದ ಮಾಹಿತಿಯನ್ನೂ, ವೆಚ್ಚ ಪರಿಶೋಧಕರ ಪ್ರಮಾಣೀಕರಣದೊಂದಿಗೆ ಸಲ್ಲಿಸಬೇಕು.

ರಾಜ್ಯಕ್ಕೆ ನೀಡುವ ಮದ್ಯದ ಘೋಷಿತ ಬೆಲೆಯು ಇತರ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಅಥವಾ ಸೇನಾ ಕ್ಯಾಂಟೀನ್ ಸ್ಟೋರ್ಸ್ ಇಲಾಖೆಗೆ ನೀಡುವ ಕನಿಷ್ಠ ಘೋಷಿತ ಬೆಲೆಗಿಂತ ಕಡಿಮೆ ಇರಬೇಕು ಅಥವಾ ಸಮನಾಗಿರಬೇಕು. ಇದರಲ್ಲಿ ಯಾವುದು ಕಡಿಮೆಯೋ ಅದನ್ನೇ ವಿಧಿಸಬೇಕು ಎಂಬ ತಿದ್ದುಪಡಿಯೂ ಇದೆ.

'ತಿದ್ದುಪಡಿ ಜಾರಿಯಾದ ಬಳಿಕ ಮದ್ಯದ ಘೋಷಿತ ಬೆಲೆಯೂ ಇಳಿಕೆಯಾಗಲಿದೆ. ಇದರಿಂದ ಬಹುತೇಕ ಬ್ರ್ಯಾಂಡ್‌ಗಳ ಮದ್ಯದ ದರಗಳು ಮತ್ತಷ್ಟು ಇಳಿಕೆಯಾಗಲಿವೆ' ಎಂದು ಅಬಕಾರಿ ಇಲಾಖೆ ಮೂಲಗಳು ಹೇಳಿವೆ.

ನೀಟ್, ಸಿಇಟಿಗೆ ಉಚಿತ ಕೋಚಿಂಗ್

ಪ್ರಜಾವಾಣಿ ವಾರ್ತೆ



ಮಧು ಬಂಗಾರಪ್ಪ

ಶಿವಮೊಗ್ಗ: ನೀಟ್, ಸಿಇಟಿ, ಜೆಇಇ ಸೇರಿದಂತೆ ವೃತ್ತಿಪರ ಶಿಕ್ಷಣ ಕೋರ್ಸ್‌ಗಳ ಪ್ರವೇಶ ಪರೀಕ್ಷೆ ಎದುರಿಸುವ ವಿದ್ಯಾರ್ಥಿಗಳಿಗೆ ಈ ವರ್ಷದಿಂದ ಸರ್ಕಾರದಿಂದಲೇ ಉಚಿತ ಕೋಚಿಂಗ್ ಆರಂಭಿಸಲಾಗುವುದು ಎಂದು ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವ ಮಧು ಬಂಗಾರಪ್ಪ ತಿಳಿಸಿದರು.

ಖಾಸಗಿಯಾಗಿ ಲಕ್ಷಾಂತರ ರೂಪಾಯಿ ಕೊಟ್ಟು ಕೋಚಿಂಗ್ ಪಡೆಯಲು ಸಾಧ್ಯವಾಗದ ಆರ್ಥಿಕವಾಗಿ ಹಿಂದುಳಿದ ಮಕ್ಕಳನ್ನು ಗಮನದಲ್ಲಿಟ್ಟುಕೊಂಡು ಈ ಕ್ರಮ ಕೈಗೊಳ್ಳಲಾಗಿದೆ. ಎಲ್ಲ ಕಾಲೇಜುಗಳಲ್ಲಿ ತಜ್ಞರಿಂದ ಕೋಚಿಂಗ್ ಆರಂಭಿಸಲಾಗುತ್ತಿದ್ದು, ಆಸಕ್ತ ವಿದ್ಯಾರ್ಥಿಗಳು ಇದರ ಉಪಯೋಗ ಪಡೆದುಕೊಳ್ಳಬಹುದು ಎಂದರು.

ರಾಜ್ಯದಲ್ಲಿ ಸುಮಾರು 1,900 ಅನುದಾನಿತ ಶಾಲೆಗಳನ್ನು ಸರ್ಕಾರ ಗುರುತಿಸಿದೆ. ಸಂಬಂಧಿಸಿದವರಿಗೆ ನೋಟಿಸ್ ಕೂಡ ನೀಡಿದೆ. ಕಾನೂನು ಉಲ್ಲಂಘಿಸಿದವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು. ಅನುದಾನಿತ ಶಾಲೆಗಳ ನೇಮಕಾತಿ ಸಂಬಂಧ ಈಗಿರುವ ನಿರ್ಬಂಧ ಸಡಿಲಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಮಧು ಬಂಗಾರಪ್ಪ ತಿಳಿಸಿದರು.

ಲೈಂಗಿಕ ದೌರ್ಜನ್ಯ: ಸೂರಜ್ ಮೇಲೂ ಆರೋಪ

ಒಂದನೇ ಪುಟದಿಂದ...

'ನಾನು ಹೊರಗಡೆ ಹೇಳಬಾರದು ಎಂದರೆ, ₹5 ಕೋಟಿ ಕೊಡಿಸು. ಇಲ್ಲದಿದ್ದರೆ, ಆಸ್ಪತ್ರೆಗೆ ದಾಖಲಾಗಿ ಸುಳ್ಳು (ಮೆಡಿಕೋ ಲೀಗಲ್) ವರದಿ ಮಾಡಿಸಿ, ಪ್ರಕರಣ ದಾಖಲಿಸುತ್ತೇನೆ ಎಂದು ಬೆದರಿಕೆ ಹಾಕಿದ್ದ' ಎಂದು ದೂರಿದ್ದಾರೆ.

'ಈ ಬಗ್ಗೆ ಸೂರಜ್ ಅವರನ್ನು ವಿಚಾರಿಸಿದ್ದು, ಅವರು ಆರೋಪ ನಿರಾಕರಿಸಿದ್ದರು. ಜೂನ್ 18ರಂದು ಮತ್ತೆ ಹಾಸನದ ಹಿಮ್ಸ್ ಆಸ್ಪತ್ರೆ ಬಳಿ ಕರೆಸಿಕೊಂಡ ವ್ಯಕ್ತಿ, ₹5 ಕೋಟಿ ಕೊಡಲಾಗದಿದ್ದರೆ, ₹3 ಕೋಟಿಯಾದರೂ ಕೊಡಿಸು. ಕೇಸ್ ಮಾಡಲು ದೊಡ್ಡಮಟ್ಟದಲ್ಲಿ ₹1 ಕೋಟಿ ಅಡ್ವಾನ್ಸ್ ಕೊಡಿಸಲು ಸಿದ್ಧರಿದ್ದಾರೆ. ಕೊನೆಯ ಪಕ್ಷ ₹2.5 ಕೋಟಿಯಾದರೂ ಕೊಡಿಸು ಎಂದು ಬೇಡಿಕೆ ಇಟ್ಟಿದ್ದ. ಆ ವ್ಯಕ್ತಿಯ ಭಾವ ಕೂಡ ಕರೆ ಮಾಡಿ, ₹2 ಕೋಟಿಯಾದರೂ ಕೊಡಿಸು ಎಂದು ಬೇಡಿಕೆ ಇಟ್ಟಿದ್ದ' ಎಂದು ತಿಳಿಸಿದ್ದಾರೆ.

'ಜೂನ್ 19ರಂದು ಮತ್ತೆ ಕರೆ ಮಾಡಿದ ಆ ವ್ಯಕ್ತಿ, ಇದುವರೆಗೆ ದುಡ್ಡು ಕೊಡಿಸಿಲ್ಲ. ದುಡ್ಡು ಕೊಡದಿದ್ದರೆ, ಸೂರಜ್ ಹಾಗೂ ನಿನ್ನ ವಿರುದ್ಧ ದೂರು ಕೊಡುತ್ತೇನೆ. ಬೆಂಗಳೂರಿಗೆ ಹೋಗಿ ಪತ್ರಿಕಾಗೋಷ್ಠಿ ಮಾಡುತ್ತೇನೆ ಎಂದು ಹೆದರಿಸಿದ್ದ' ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಇಂದು 3 ಜಿಲ್ಲೆಗಳಿಗೆ 'ರೆಡ್ ಅಲರ್ಟ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧೆಡೆ ಶನಿವಾರವೂ ಭಾರಿ ಮಳೆಯಾಗುವ ಸಾಧ್ಯತೆಯಿದ್ದು, ಹವಾಮಾನ ಇಲಾಖೆಯು ಮೂರು ಜಿಲ್ಲೆಗಳಿಗೆ 'ರೆಡ್ ಅಲರ್ಟ್' ಹಾಗೂ ಐದು ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ಘೋಷಿಸಿದೆ.

ಉತ್ತರ ಕನ್ನಡ, ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗೆ 'ರೆಡ್ ಅಲರ್ಟ್' ನೀಡಲಾಗಿದೆ. ಈ ಜಿಲ್ಲೆಗಳಲ್ಲಿ ಗುಡುಗು ಸಹಿತ ಧಾರಾಕಾರ ಮಳೆಯಾಗುವ ಸಂಭವವಿದೆ. ಬೆಳಗಾವಿ, ಧಾರವಾಡ, ಹಾವೇರಿ, ಶಿವಮೊಗ್ಗ ಹಾಗೂ ಚಿಕ್ಕಮಗಳೂರು ಜಿಲ್ಲೆಗೆ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ. ಈ ಜಿಲ್ಲೆಗಳಲ್ಲಿ ಗುಡುಗು ಸಹಿತ ಭಾರಿ ಮಳೆಯಾಗುವ ಸಾಧ್ಯತೆಯಿದೆ. 'ಅಲರ್ಟ್' ನೀಡಲಾದ ಜಿಲ್ಲೆಗಳಲ್ಲಿ 30ರಿಂದ 40 ಕಿ.ಮೀ. ವೇಗದಲ್ಲಿ ಗಾಳಿ ಬೀಸುವ ಸಂಭವವಿದೆ. ಉಳಿದ ಜಿಲ್ಲೆಗಳಲ್ಲಿ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ ಎಂದು ಇಲಾಖೆ ತಿಳಿಸಿದೆ. ಚಂಡಮಾರುತದ ಹವಾಮಾನವು ಕರಾವಳಿ ಉದ್ದಕ್ಕೂ ಮೇಲುಗೈ ಸಾಧಿಸುವ ಸಾಧ್ಯತೆಯಿದೆ. ಗಂಟೆಗೆ 35 ಕಿ.ಮೀ.ಯಿಂದ 55 ಕಿ.ಮೀ. ವೇಗದಲ್ಲಿ ಗಾಳಿ ಬೀಸುವ ಸಂಭವವಿದೆ. ಸಮುದ್ರದಲ್ಲಿ ಭಾರಿ ಅಲೆಗಳು ಕಾಣಿಸಿಕೊಳ್ಳಬಹುದು. ಆದ್ದರಿಂದ ಮೀನುಗಾರರು ಸಮುದ್ರಕ್ಕೆ ಇಳಿಯಬಾರದು ಎಂದು ಇಲಾಖೆ ಹೇಳಿದೆ.

ಬೆಂಗಳೂರಿನಲ್ಲಿ ಮೋಡ ಕವಿದ ವಾತಾವರಣ ಇರಲಿದೆ. ಗುಡುಗು ಸಹಿತ ಸಾಧಾರಣ ಮಳೆಯಾಗುವ ಸಾಧ್ಯತೆಯಿದ್ದು, ಕೆಲವೊಮ್ಮೆ ಮೇಲ್ಮೈ ಗಾಳಿಯು ಪ್ರಬಲವಾಗುವ ಸಂಭವವಿದೆ ಎಂದು ಇಲಾಖೆ ತಿಳಿಸಿದೆ.

ಭಾನುವಾರವೂ ಕರಾವಳಿಯ ಮೂರು ಜಿಲ್ಲೆಗಳಿಗೆ 'ರೆಡ್ ಅಲರ್ಟ್' ನೀಡಲಾಗಿದೆ. ಇದೇ 25ರವರೆಗೆ ಒಳನಾಡಿನ ಕರಾವಳಿ ಮತ್ತು ಪಕ್ಕದ ಜಿಲ್ಲೆಗಳಲ್ಲಿ ಬಲವಾದ ಗಾಳಿಯೊಂದಿಗೆ ಧಾರಾಕಾರ ಮಳೆಯಾಗುವ ಸಾಧ್ಯತೆ ಇದೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ.

ಕದ್ರಾದಲ್ಲಿ 11 ಸೆಂ.ಮೀ. ಮಳೆ

ಶುಕ್ರವಾರ ಬೆಳಿಗ್ಗೆ 8.30ಕ್ಕೆ ಅನ್ವಯಿಸಿದಂತೆ ಹಿಂದಿನ 24 ಗಂಟೆಗಳ ಅವಧಿಯಲ್ಲಿ ಕರಾವಳಿಯ ಬಹುತೇಕ ಕಡೆ ಹಾಗೂ ಒಳನಾಡಿನ ಕೆಲವೆಡೆ ಮಳೆಯಾಗಿದೆ. ಉತ್ತರ ಕನ್ನಡದ ಕದ್ರಾದಲ್ಲಿ 11 ಸೆಂ.ಮೀ., ಬೆಳಗಾವಿಯ ಲೋಂಡಾದಲ್ಲಿ 10 ಸೆಂ.ಮೀ., ಉತ್ತರ ಕನ್ನಡದ ಯಲ್ಲಾಪುರದಲ್ಲಿ 8 ಸೆಂ.ಮೀ., ಶಿರಾಲಿಯಲ್ಲಿ 5 ಸೆಂ.ಮೀ. ಮಳೆಯಾಗಿದೆ. ಉಳಿದೆಡೆ ಇದಕ್ಕಿಂತ ಕಡಿಮೆ ಪ್ರಮಾಣದಲ್ಲಿ ಮಳೆ ಸುರಿದಿದೆ.

ಕೊಡಗು: ಜಿಲ್ಲೆಯಲ್ಲಿ ಭಾರಿ ಮಳೆ ಎಚ್ಚರಿಕೆ

ಮಡಿಕೇರಿ: ಕೊಡಗು ಜಿಲ್ಲೆ ಸೇರಿದಂತೆ ದಕ್ಷಿಣ ಒಳನಾಡಿನಲ್ಲಿ ಭಾರಿ ಮಳೆ ಬೀಳುವ ಮುನ್ಸೂಚನೆ ನೀಡಿರುವ ಹವಾಮಾನ ಇಲಾಖೆ ರೆಡ್ ಅಲರ್ಟ್ ಘೋಷಿಸಿದೆ.

ದಕ್ಷಿಣ ಒಳನಾಡಿನ ಬಹುತೇಕ ಕಡೆ ಜೂನ್ 22ರಂದು ಭಾರಿ ಮಳೆ ಬೀಳುವ ಸಾಧ್ಯತೆ ಇದೆ. 23ರಿಂದ 25ರವರೆಗೆ 'ಅತ್ಯಂತ ಭಾರಿ ಮಳೆ' ಗರಿಷ್ಠ 20 ಸೆಂ.ಮೀ.ನಷ್ಟು ಸುರಿಯುವ ನಿರೀಕ್ಷೆ ಇದ್ದು, ಮುನ್ನೆಚ್ಚರಿಕೆ ವಹಿಸಬೇಕು ಎಂದು ಸಲಹೆ ನೀಡಿದೆ.

ಮಡಿಕೇರಿ ನಗರದಲ್ಲಿ ಶುಕ್ರವಾರ ದಟ್ಟ ಮೋಡ ಕವಿದ ವಾತಾವರಣವಿತ್ತು. ಸಾಧಾರಣ ಮಳೆಯಾಯಿತು.



ಕಾರಹುಣ್ಣಿಮೆ ಕಾರಹುಣ್ಣಿಮೆ ಹಬ್ಬದ ಅಂಗವಾಗಿ ಕಲಬುರಗಿ ಸಮೀಪದ ಕುಸನೂರ ಗ್ರಾಮದಲ್ಲಿ ಶುಕ್ರವಾರ ಎತ್ತುಗಳನ್ನು ಓಡಿಸಲಾಯಿತು –ಪ್ರಜಾವಾಣಿ ಚಿತ್ರ/ ತಾಜುದ್ದೀನ್ ಆಜಾದ್

ಗೆಜೆಟೆಡ್ ಪ್ರೊಬೇಷನರಿ: 2017–18ನೇ ಸಾಲಿನ ಅಭ್ಯರ್ಥಿಗಳಿಗಿಲ್ಲ ವಯೋಮಿತಿ ನಿರ್ಬಂಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2017–18ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿ ಗ್ರೂಪ್ 'ಎ' ಮತ್ತು ಗ್ರೂಪ್ 'ಬಿ' ಹುದ್ದೆಗಳ ಭರ್ತಿಗೆ ಅರ್ಜಿ ಸಲ್ಲಿಸಿದ್ದ ಎಲ್ಲ ಅಭ್ಯರ್ಥಿಗಳಿಗೂ ಇದೇ ಫೆಬ್ರುವರಿಯಲ್ಲಿ ಅಧಿಸೂಚನೆ ಹೊರಡಿಸಿದ್ದ 384 ಹುದ್ದೆಗಳ ನೇಮಕಾತಿಗೆ ವಯೋಮಿತಿಯ ನಿರ್ಬಂಧವಿಲ್ಲದೆ ಅರ್ಜಿ ಸಲ್ಲಿಸಲು ಅವಕಾಶ ನೀಡಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಆದೇಶ ಹೊರಡಿಸಿದೆ.

ಕೋವಿಡ್ ಮತ್ತು ಇತರ ಕಾರಣಗಳಿಂದ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿಗೆ 2021ನೇ ಸಾಲಿನಿಂದ ಪರೀಕ್ಷೆಗಳನ್ನು ನಡೆಸಿಲ್ಲ. ಹೀಗಾಗಿ, ನೇಮಕಾತಿಗೆ ನಿಗದಿಪಡಿಸಿರುವ ಗರಿಷ್ಠ ವಯೋಮಿತಿ ಮೀರಿ ಉದ್ಯೋಗ ವಂಚಿತರಾಗುವುದರಿಂದ, ವಯೋಮಿತಿ ಸಡಿಲಿಸಿ ಪರೀಕ್ಷೆ ಬರೆಯಲು ಅವಕಾಶ ನೀಡಬೇಕು ಎಂದು ಹುದ್ದೆ ಆಕಾಂಕ್ಷಿಗಳು ಸರ್ಕಾರಕ್ಕೆ ಮನವಿ ಸಲ್ಲಿಸಿದ್ದರು.

ಈ ಕುರಿತು ಸಂಪುಟ ಸಭೆಯ ತೀರ್ಮಾನದಂತೆ, ಅರ್ಹ ಎಲ್ಲ ಅಭ್ಯರ್ಥಿಗಳಿಗೆ ಮೂರು ವರ್ಷ ವಯೋಮಿತಿ ಸಡಿಲಿಸಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಆದೇಶ ಹೊರಡಿಸಿತ್ತು. ಆದರೆ, ಈ ಸಡಿಲಿಕೆ ಕೆಲವರಿಗಷ್ಟೇ ಅನುಕೂಲವಾಗಿದೆ. ಬಹುತೇಕರು ವಯೋಮಿತಿ ದಾಟಿದ್ದಾರೆ ಎಂದು ಹುದ್ದೆ ಆಕಾಂಕ್ಷಿಗಳು ಮುಖ್ಯಮಂತ್ರಿಗೆ ಮತ್ತೆ ಮನವಿ ಮಾಡಿದ್ದರು.

ವಯೋಮಿತಿ ಸಡಿಲಿಕೆ ಅವಕಾಶ ಒಂದು ಬಾರಿಗೆ ಮಾತ್ರ ಸೀಮಿತವಾಗಿದ್ದು, 2017-18ನೇ ಸಾಲಿನ ನೇಮಕಾತಿಗೆ ಅರ್ಜಿ ಸಲ್ಲಿಸಿದ್ದ ಅಭ್ಯರ್ಥಿಗಳಿಗೆ ಈ ಬಾರಿ ಅರ್ಜಿ ಸಲ್ಲಿಸಲು ಹೊಸದಾಗಿ 15 ದಿನಗಳ ಅವಕಾಶ ನೀಡುವಂತೆ ಕರ್ನಾಟಕ ಲೋಕಸೇವಾ ಆಯೋಗಕ್ಕೆ ಸೂಚಿಸಲಾಗಿದೆ.

ಚಾರಣಕ್ಕೆ ನಿರ್ಬಂಧ

ಮೂಡಿಗೆರೆ (ಚಿಕ್ಕಮಗಳೂರು): ತಾಲ್ಲೂಕಿನ ಊರುಬಗೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎತ್ತಿನಭುಜ ಪ್ರವಾಸಿ ತಾಣಕ್ಕೆ ಚಾರಣ ನಡೆಸುವುದನ್ನು ನಿರ್ಬಂಧಿಸಲಾಗಿದೆ.

ಈ ಸಂಬಂಧ ಅರಣ್ಯ ಇಲಾಖೆ ಶುಕ್ರವಾರ ಪ್ರಕಟಣೆ ಹೊರಡಿಸಿದ್ದು, ಚಾರಣಿಗರಿಗೆ ಅಗತ್ಯ ಸವಲತ್ತು ಒದಗಿಸುವ ಪೂರಕ ಕಾಮಗಾರಿ ನಡೆಯುತ್ತಿರುವುದರಿಂದ ಮುಂದಿನ ಆದೇಶದವರೆಗೂ ಎತ್ತಿನಭುಜ ಪ್ರವಾಸಿ ತಾಣಕ್ಕೆ ಚಾರಣ ಹೋಗುವುದನ್ನು ನಿರ್ಬಂಧಿಸಲಾಗಿದೆ ಎಂದು ತಿಳಿಸಿದೆ.

ಗಣಿಗಾರಿಕೆ: ವರದಿ ನೀಡಲು ಸೂಚನೆ

ಪ್ರಜಾವಾಣಿ ವಾರ್ತೆ

ಬಳ್ಳಾರಿ: 'ಸಂಡೂರಿನ ಅರಣ್ಯ ಪ್ರದೇಶದಲ್ಲಿ ಹೊಸದಾಗಿ ಗಣಿಗಾರಿಕೆಗೆ ಅವಕಾಶ ನೀಡದಂತೆ ಅರಣ್ಯ ಸಚಿವ ಈಶ್ವರ ಖಂಡ್ರೆ ಅವರಿಗೆ ಜನಸಂಗ್ರಾಮ ಪರಿಷತ್' ಮನವಿ ಸಲ್ಲಿಸಿದೆ. ಇದಕ್ಕೆ ಸ್ಪಂದಿಸಿರುವ ಸಚಿವರು, ವರದಿ ನೀಡುವಂತೆ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗೆ (ಪಿಸಿಸಿಎಫ್) ಪತ್ರ ಬರೆದಿದ್ದಾರೆ.ಬೆಂಗಳೂರಿನಲ್ಲಿ ಗುರುವಾರ ಸಚಿವ ಖಂಡ್ರೆ ಅವರನ್ನು ಭೇಟಿಯಾದ ಸಂಘಟನೆಯ ಸದಸ್ಯರು 'ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕಿನಲ್ಲಿ ಅಕ್ರಮ ಗಣಿಗಾರಿಕೆಯಿಂದ ಅರಣ್ಯ ಪ್ರದೇಶದಲ್ಲಿ ಸಾವಿರಾರು ಟ್ರಕ್‌ಗಳ ಸಂಚಾರಿಸುತ್ತಿವೆ. ಇದರಿಂದ ದೂಳು ಪರಿಸರ, ವನ್ಯಜೀವಿ, ಅರಣ್ಯನಾಶವಾಗುತ್ತಿದೆ. ಈ ಭಾಗದ ಅರಣ್ಯ ಪ್ರದೇಶದಲ್ಲಿ ಹೊಸದಾಗಿ ಗಣಿಗಾರಿಕೆಗೆ ಶಿಫಾರಸು ಮಾಡಬಾರದು' ಎಂದು ಕೋರಿದ್ದರು.

ಸಂಕ್ಷಿಪ್ತ ಸುದ್ದಿ

'600ಕ್ಕೂ ಹೆಚ್ಚು ಹುದ್ದೆ ಭರ್ತಿ'

ಮಾಗಡಿ: 'ಕೃಷಿ ಇಲಾಖೆಯಲ್ಲಿ ಹಲವು ವರ್ಷಗಳಿಂದ ಭರ್ತಿಯಾಗದೆ ಖಾಲಿ ಉಳಿದಿರುವ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನೊಳಗೊಂಡ 600ಕ್ಕೂ ಹೆಚ್ಚು ಹುದ್ದೆಗಳನ್ನು ಹಂತ ಹಂತವಾಗಿ ಶೀಘ್ರ ಭರ್ತಿ ಮಾಡಲಾಗುವುದು' ಎಂದು ಕೃಷಿ ಸಚಿವ ಚಲುವರಾಯ ಸ್ವಾಮಿ ಹೇಳಿದರು.

ಕೃಷಿ ಇಲಾಖೆ ಆವರಣದಲ್ಲಿ ಶುಕ್ರವಾರ ಕಟ್ಟಡ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು,'ಸುಮಾರು ಹದಿನೈದು ವರ್ಷಗಳಿಂದ ಇಲಾಖೆಯಲ್ಲಿರುವ ಖಾಲಿ ಹುದ್ದೆಗಳನ್ನು ಭರ್ತಿ ಮಾಡಿಲ್ಲ. ನಮ್ಮ ಸರ್ಕಾರ ನೇಮಕಾತಿಗೆ ಅನುಮೋದನೆ ಪಡೆಯುವ ಪ್ರಕ್ರಿಯೆ ನಡೆಯುತ್ತಿದೆ' ಎಂದರು.

ಭಟ್ಕಳ: ಶಂಕಿತ ಉಗ್ರನಿಗೆ ನೋಟಿಸ್

ಭಟ್ಕಳ (ಉತ್ತರ ಕನ್ನಡ): ಪುಣೆಯಲ್ಲಿ ನಡೆಸಿದ ಭಯೋತ್ಪಾದನೆ ಚಟುವಟಿಕೆಗೆ ಸಂಬಂಧಿಸಿದಂತೆ ವಿಚಾರಣೆಗೆ ಹಾಜರು ಆಗುವಂತೆ ಭಟ್ಕಳದ ಅಬ್ದುಲ್ ಕಾದಿರ್ ಸುಲ್ತಾನ ಅಲಿಯಾಸ್ ಮೌಲಾನಾ ಸುಲ್ತಾನ ಎಂಬಾತನಿಗೆ ಮಹಾರಾಷ್ಟ್ರದ ಭಯೋತ್ಪಾದನ ನಿಗ್ರಹ ದಳ (ಎಟಿಎಸ್) ನೋಟಿಸ್ ಜಾರಿ ಮಾಡಿದೆ.

'2008ರಲ್ಲಿ ಪುಣೆಯಲ್ಲಿ ನಡೆದ ಬಾಂಬ್ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ಅಬ್ದುಲ್ ಕಾದಿರ್‌ಗಾಗಿ ಹುಡುಕಾಟ ನಡೆದಿದೆ. ಅದಕ್ಕಾಗಿ ಸುಲ್ತಾನ ವಾಸವಿರುವ ಮನೆ, ಭಟ್ಕಳ ತಹಶೀಲ್ದಾರ್ ಕಚೇರಿ ಹಾಗೂ ಪುರಸಭೆಯ ನೋಟಿಸ್ ಫಲಕಕ್ಕೆ ಎಟಿಎಸ್ ಅಧಿಕಾರಿಗಳು ನೋಟಿಸ್ ಅಂಟಿಸಿದ್ದಾರೆ' ಎಂದು ಮೂಲಗಳು ತಿಳಿಸಿವೆ.



ಬಿರುಕು ಅಟಲ್ ಸೇತು ಎಂದು ಹೆಸರಿಸಿರುವ ಮುಂಬೈ ಟ್ರಾನ್ಸ್ ಹಾರ್ಬರ್ ಲಿಂಕ್ (ಎಂಟಿಎಚ್‌ಎಲ್) ಸಂಪರ್ಕ ಮಾರ್ಗದಲ್ಲಿ, ನವೀ ಮುಂಬೈ ದಿಕ್ಕಿನಲ್ಲಿ ಮೂರು ಕಡೆ ಬಿರುಕು ಕಾಣಿಸಿಕೊಂಡಿವೆ. ಆದರೆ, ಇದು, ಅಲ್ಪಸ್ವರೂಪದ್ದು ಎಂದು ಮುಂಬೈ ಮೆಟ್ರೊಪಾಲಿಟನ್ ನಗರಾಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳು ತಿಳಿಸಿದ್ದಾರೆ

ಒಂದು ಹುದ್ದೆಗೆ ₹25 ಲಕ್ಷದವರೆಗೆ ಲಂಚ: ಅನರ್ಹರ ನೇಮಕ ಆರೋಪ

ದಂಡು ಮಂಡಳಿ ಅಕ್ರಮ: ಸಿಬಿಐ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೆಕ್ಯಾನಿಕ್, ಸಹಾಯಕ ನೈರ್ಮಲ್ಯ ನಿರೀಕ್ಷಕ, ಸ್ವಚ್ಛತಾ ಸಿಬ್ಬಂದಿ, ಕೂಲಿ, ತೋಟಗಾರಿಕಾ ಸಿಬ್ಬಂದಿ ಮತ್ತು ಪರಿಚಾರಕರ ನೇಮಕಾತಿಯಲ್ಲಿ ಹಣ ಪಡೆದು, ಅಕ್ರಮ ಎಸಗಿರುವ ಆರೋಪದ ಮೇಲೆ ಬೆಳಗಾವಿ ದಂಡು ಮಂಡಳಿಯ 19 ಮಂದಿ ವಿರುದ್ಧ ಸಿಬಿಐ ಎಫ್‌ಐಆರ್ ದಾಖಲಿಸಿದೆ.

2022–23ರಲ್ಲಿ 31 ಹುದ್ದೆಗಳ ಭರ್ತಿಗೆ ನಡೆದ ಪ್ರಕ್ರಿಯೆಯಲ್ಲಿ ₹15 ಲಕ್ಷದಿಂದ ₹25 ಲಕ್ಷಗಳವರೆಗೆ ಲಂಚ ಪಡೆದು ಅನರ್ಹರನ್ನು ನೇಮಕ ಮಾಡಿಕೊಂಡ ಆರೋಪದ ಕುರಿತು ಸಿಬಿಐ ಪ್ರಾಥಮಿಕ ವಿಚಾರಣೆ ನಡೆಸಿತ್ತು. ಆರೋಪಗಳನ್ನು ಮೇಲ್ನೋಟಕ್ಕೆ ಸಾಬೀತುಪಡಿಸುವಂತಹ ಸಾಕ್ಷ್ಯಗಳು ಪ್ರಾಥಮಿಕ ವಿಚಾರಣೆ ವೇಳೆ ಲಭಿಸಿದ್ದವು. ಮೇ 25ರಂದು ಎಫ್‌ಐಆರ್ ದಾಖಲಿಸಿರುವ ಸಿಬಿಐನ ಬೆಂಗಳೂರು ಭ್ರಷ್ಟಾಚಾರ ನಿಗ್ರಹ ಘಟಕ ತನಿಖೆ ಆರಂಭಿಸಿದೆ.

ಬೆಳಗಾವಿ ದಂಡು ಮಂಡಳಿಯ ಕಚೇರಿ ಅಧೀಕ್ಷಕ ಮಹಾಲಿಂಗೇಶ್ವರ್ ವೈ. ತಾಳುಕರ್, ಕಂಪ್ಯೂಟರ್ ಪ್ರೋಗ್ರಾಮರ್ ಬಸವರಾಜ್ ಎಸ್. ಗುಡೋದಗಿ, ಡೇಟಾ ಎಂಟ್ರಿ ಆಪರೇಟರ್ ಪ್ರಕಾಶ್ ಸಿ. ಗೌಂಡಡ್ಕರ್, ದಂಡು ಮಂಡಳಿಯ ಮರಾಠಿ ಮಾಧ್ಯಮ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕ ಪರಶುರಾಮ್ ಎಸ್. ಬಿರ್ಜೆ, ಸಹಾಯಕ ಶಿಕ್ಷಕ ಉದಯ್ ಎಸ್. ಪಾಟೀಲ್, ವಿವಿಧ ಹುದ್ದೆಗಳಿಗೆ ಆಯ್ಕೆಯಾಗಿದ್ದ 14 ಅಭ್ಯರ್ಥಿಗಳು ಮತ್ತು ಇತರರ ವಿರುದ್ಧ ಎಫ್‌ಐಆರ್ ದಾಖಲು ಮಾಡಲಾಗಿದೆ.

31 ಹುದ್ದೆಗಳ ಭರ್ತಿಗೆ 2022–23ರಲ್ಲಿ ನಡೆದ ನೇಮಕಾತಿಯಲ್ಲಿ ಅಕ್ರಮ ನಡೆದಿದೆ ಎಂದು ಆರೋಪಿಸಿ ಬೆಳಗಾವಿ ದಂಡು ಮಂಡಳಿಯ ನಾಮನಿರ್ದೇಶಿತ ಸದಸ್ಯ ಸುಧೀರ್ ಕೆ. ತುಪೇಕರ್ 2023ರ ಆಗಸ್ಟ್‌ನಲ್ಲಿ ಸಿಬಿಐಗೆ ದೂರು ನೀಡಿದ್ದರು. ಸಿಬಿಐ ಬೆಂಗಳೂರು ಎಸಿಬಿಯ ಪೊಲೀಸ್ ಇನ್‌ಸ್ಪೆಕ್ಟರ್ ಸೌಭಿಕ್ ಕುಮಾರ್ ಭಕತ್ ಪ್ರಾಥಮಿಕ ವಿಚಾರಣೆ ನಡೆಸಿ ವರದಿ ಸಲ್ಲಿಸಿದ್ದರು.

'ದಂಡು ಮಂಡಳಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿದ್ದ ದಿವಂಗತ ಆನಂದ್ ಕೆ. ನೇಮಕಾತಿ ಪ್ರಕ್ರಿಯೆಯ ನಿಯಂತ್ರಣ ಹೊಂದಿದ್ದರು. ಅವರು ಇತರ ಆರೋಪಿಗಳ ಜತೆ ಸೇರಿ ಸಂಚು ನಡೆಸಿ ₹15 ಲಕ್ಷದಿಂದ ₹25 ಲಕ್ಷದವರೆಗೆ ಲಂಚ ಪಡೆದು ಅನರ್ಹ ಅಭ್ಯರ್ಥಿಗಳನ್ನು ನೇಮಕ ಮಾಡಿಕೊಳ್ಳಲಾಗಿದೆ' ಎಂಬ ಉಲ್ಲೇಖ ಎಫ್‌ಐಆರ್‌ನಲ್ಲಿದೆ.

'ಹಿಂದಿ ಭಾಷೆಯಲ್ಲಿ ಮಾತ್ರ ಪ್ರಶ್ನೆ ಪತ್ರಿಕೆಯನ್ನು ಸಿದ್ಧಪಡಿಸಲಾಗಿತ್ತು. ಆದರೆ, ಬಹುತೇಕ ಅಭ್ಯರ್ಥಿಗಳಿಗೆ ಹಿಂದಿ ಭಾಷೆಯ ಪತ್ರಿಕೆಯನ್ನು ಓದಲು ಬರುತ್ತಿರಲಿಲ್ಲ. ಸ್ವಚ್ಛತಾ ಸಿಬ್ಬಂದಿ ಹುದ್ದೆಗೆ ನೇಮಕಗೊಂಡಿರುವ ಜ್ಯೋತಿಬಾ ಎಂ. ಕಮಾಕರ್ ಎಂಬವರಿಗೆ ಪ್ರಶ್ನೆ ಪತ್ರಿಕೆ ನೀಡಿದಾಗ ಅವರಿಗೆ ಓದಲೂ ಬಾರದಿರುವುದು ಕಂಡುಬಂದಿದೆ' ಎಂದು ಸಿಬಿಐ ಅಧಿಕಾರಿಗಳು ತಿಳಿಸಿದ್ದಾರೆ.

ಅರ್ಹ ಅಭ್ಯರ್ಥಿಗಳ ಅರ್ಜಿಗಳನ್ನು ತಿರಸ್ಕರಿಸಲಾಗಿತ್ತು ಅಥವಾ ಅನರ್ಹಗೊಳಿಸಲಾಗಿತ್ತು. ದೇಶದ ವಿವಿಧೆಡೆಯಿಂದ ಅಭ್ಯರ್ಥಿಗಳು ಅರ್ಜಿ ಸಲ್ಲಿಸಿ, ಪರೀಕ್ಷೆಗೆ ಹಾಜರಾಗಿದ್ದರೂ, ಬೆಳಗಾವಿ ಮತ್ತು ಸುತ್ತಮುತ್ತಲಿನ ಅಭ್ಯರ್ಥಿಗಳನ್ನು ಮಾತ್ರವೇ ಆಯ್ಕೆ ಮಾಡಿರುವುದು ಪತ್ತೆಯಾಗಿದೆ ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಿದ್ದಾರೆ.

ಸೆ.15ರವರೆಗೆ ವಿಸ್ತರಣೆ: ರಾಮಲಿಂಗಾರೆಡ್ಡಿ

ಪ್ರಜಾವಾಣಿ ವಾರ್ತೆ

ಎಚ್‌ಎಸ್‌ಆರ್‌ಪಿ ಗಡುವು

ಬೆಂಗಳೂರು: ಹಳೆ ವಾಹನಗಳಿಗೆ 'ಅತಿ ಸುರಕ್ಷಿತ ನೋಂದಣಿ ಫಲಕ' (ಎಚ್‌ಎಸ್‌ಆರ್‌ಪಿ) ಅಳವಡಿಸಿಕೊಳ್ಳುವ ಅವಧಿಯನ್ನು ಸೆಪ್ಟೆಂಬರ್ 15ರವರೆಗೆ ವಿಸ್ತರಿಸಲಾಗಿದೆ ಎಂದು ರಾಮಲಿಂಗಾರೆಡ್ಡಿ ತಿಳಿಸಿದರು.

ನಗರದಲ್ಲಿ ಸಾರ್ವಜನಿಕ ಸೇವಾ ವಾಹನಗಳಿಗೆ 'ವೆಹಿಕಲ್ ಟ್ರ್ಯಾಕಿಂಗ್ ಡಿವೈಸ್' ಮತ್ತು ಎಮರ್ಜೆನ್ಸಿ ಪ್ಯಾನಿಕ್ ಬಟನ್ ಅಳವಡಿಕೆ ಯೋಜನೆಯನ್ನು ನಿರ್ವಹಿಸುವ 'ಕಮಾಂಡ್ ಆ್ಯಂಡ್ ಕಂಟ್ರೋಲ್ ಸೆಂಟರ್' ಅನ್ನು ಉದ್ಘಾಟಿಸಿದ ಬಳಿಕ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

ಅದರ ನಂತರ ವಿಸ್ತರಣೆ ಮಾಡಲಾಗುವುದಿಲ್ಲ. ಕೇಂದ್ರ ಸರ್ಕಾರ ಮಾಡಿರುವ ತೀರ್ಮಾನ ಇದಾಗಿದ್ದು, ನಾವು ಅನುಷ್ಠಾನಗೊಳಿಸುತ್ತಿದ್ದೇವೆ. ವಾಣಿಜ್ಯ ವಾಹನಗಳು ಸದೃಢ ಪ್ರಮಾಣಪತ್ರ (ಎಫ್‌ಸಿ) ಪಡೆಯಲು ಪ್ರತಿ ವರ್ಷ ಬರಬೇಕಾಗುತ್ತದೆ. ಆಗ ಎಚ್‌ಎಸ್‌ಆರ್‌ಪಿ ಅಳವಡಿಸಿಕೊಳ್ಳದಿದ್ದರೆ ಕ್ರಮ ಕೈಗೊಳ್ಳಲಾಗುತ್ತದೆ. ಖಾಸಗಿ ಪ್ರಯಾಣಿಕ ವಾಹನಗಳ ಮಾಲೀಕರು ಅವರೇ ಅಳವಡಿಸಿಕೊಳ್ಳಬೇಕು. ಒಟ್ಟಾರೆ ಶೇ 25ರಷ್ಟು ವಾಹನಗಳ ಮಾಲೀಕರು ಮಾತ್ರ ಎಚ್‌ಎಸ್‌ಆರ್‌ಪಿ ಅಳವಡಿಸಿಕೊಂಡಿದ್ದಾರೆ' ಎಂದರು.

'ನಾಲ್ಕು ಸಾರಿಗೆ ನಿಗಮಗಳಿಂದ ಬಸ್ ಪ್ರಯಾಣ ದರ ಹೆಚ್ಚಳ ಪ್ರಸ್ತಾವ ಬಂದಮೇಲೆ ಆ ಬಗ್ಗೆ ನಿರ್ಧಾರ ಕೈಗೊಳ್ಳಲಾಗುತ್ತದೆ. ಬಿಎಂಟಿಸಿ ಬಸ್ ಪ್ರಯಾಣ ದರ 2014ರಲ್ಲಿ ಹೆಚ್ಚಿಸಲಾಗಿತ್ತು. ಕೆಎಸ್‌ಆರ್‌ಟಿಸಿ ಸೇರಿದಂತೆ ಉಳಿದ ಮೂರು ನಿಗಮಗಳ ಬಸ್ ಪ್ರಯಾಣ ದರ 2020ರಲ್ಲಿ ಏರಿಸಲಾಗಿತ್ತು. ಆ ವರ್ಷಗಳಿಗೆ ಹೋಲಿಸಿದರೆ ಡೀಸೆಲ್ ದರ, ಸಿಬ್ಬಂದಿ ವೇತನ ಸೇರಿದಂತೆ ನಿರ್ವಹಣೆ ವೆಚ್ಚವೆಲ್ಲ ಹೆಚ್ಚಾಗಿದೆ. ನಾಲ್ಕೂ ನಿಗಮಗಳು ಈವರೆಗೆ ದರ ಏರಿಕೆ ಬಗ್ಗೆ ಯಾವುದೇ ಪ್ರಸ್ತಾವ ಸಲ್ಲಿಸಿಲ್ಲ. ಅಲ್ಲಿಂದ ಪ್ರಸ್ತಾವ ಬಂದರೆ, ಅದನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುತ್ತದೆ ಎಂದರು.

₹70 ಲಕ್ಷ ಮೂಲ ಪತ್ತೆಗೆ ಐ.ಟಿ ತನಿಖೆ?

ಒಂದನೇ ಪುಟದಿಂದ...

'ಆ ₹20 ಲಕ್ಷ ಸೇರಿ ಒಟ್ಟು ₹30 ಲಕ್ಷವನ್ನು ಜೂನ್ 18ರಂದು ಪೊಲೀಸರು ಜಪ್ತಿ ಮಾಡಿದ್ದರು. ಪ್ರದೋಷ್ ಮನೆಯಲ್ಲೂ ಅಪಾರ ಪ್ರಮಾಣದ ನಗದು ಪತ್ತೆಯಾಗಿತ್ತು. ಪ್ರಕರಣದಿಂದ ಪಾರಾಗಲು, ಮಾಜಿ ಕಾರ್ಪೊರೇಟರ್ ಸಹ ಆಗಿರುವ ತಮ್ಮ ಸ್ನೇಹಿತ ಮೋಹನ್ ರಾಜ್ ಎಂಬವರಿಂದ ದರ್ಶನ್ ₹40 ಲಕ್ಷ ಸಾಲ ಪಡೆದಿದ್ದರು. ಆ ಪೈಕಿ ದರ್ಶನ್ ಅವರ ರಾಜರಾಜೇಶ್ವರಿನಗರದ ನಿವಾಸದಿಂದ ₹37.40 ಲಕ್ಷವನ್ನು ವಶಕ್ಕೆ ಪಡೆಯಲಾಗಿದೆ. ಅಲ್ಲದೇ ದರ್ಶನ್ ಪತ್ನಿ ವಿಜಯಲಕ್ಷ್ಮಿ ಅವರಿಗೆ ಪತಿ ನೀಡಿದ್ದ ₹3 ಲಕ್ಷ ಜಪ್ತಿ ಮಾಡಲಾಗಿದೆ. ಈ ಹಣದ ಮೂಲ ಪತ್ತೆಗೆ ಅಧಿಕಾರಿಗಳು ಮುಂದಾಗಿದ್ದಾರೆ' ಎಂದು ಮೂಲಗಳು ತಿಳಿಸಿವೆ.

'ದರ್ಶನ್ ಅವರು ತಮ್ಮ ನಿವಾಸದಲ್ಲಿದ್ದ ಬ್ಯಾಗ್‌ನಲ್ಲಿ ಹಣ ಇಟ್ಟಿದ್ದರು. ಸ್ಥಳ ಮಹಜರು ವೇಳೆ ಅದನ್ನು ಜಪ್ತಿ ಮಾಡಿಕೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

ಮೋಹನ್‌ರಾಜ್ ನಾಪತ್ತೆ: ದರ್ಶನ್‌ಗೆ ಹಣ ನೀಡಿದ್ದರು ಎನ್ನಲಾಗಿರುವ ಮೋಹನ್‌ರಾಜ್ ನಾಪತ್ತೆ ಆಗಿದ್ದಾರೆ. ಅವರ ಮೊಬೈಲ್ ಸ್ವಿಚ್ಡ್ ಆಫ್ ಆಗಿದೆ. ಮೊಬೈಲ್ ಲೊಕೇಶನ್ ಪತ್ತೆ ಹಚ್ಚಲಾಗುತ್ತಿದೆ. ವಿಚಾರಣೆಗೆ ಬರುವಂತೆ ನೋಟಿಸ್ ಜಾರಿ ಮಾಡಲಾಗಿದೆ ಎಂದು ಮೂಲಗಳು ಹೇಳಿವೆ.

ದರ್ಶನ್ ಅವರಿಗೆ ಮೋಹನ್‌ರಾಜ್ ಯಾವ ಸ್ಥಳದಲ್ಲಿ, ಹೇಗೆ ಹಣ ತಲುಪಿಸಿದ್ದರು ಎಂಬುದನ್ನು ಪತ್ತೆ ಮಾಡಲಾಗುತ್ತಿದೆ. ದರ್ಶನ್ ಅವರೇ ಕರೆ ಮಾಡಿ ಹಣ ಕೇಳಿದ್ದರೆ ಅಥವಾ ಬೇರೆ ಯಾರಾದರೂ ಹಣ ಕೊಡುವಂತೆ ಹೇಳಿದ್ದರೆ ಎಂಬುದರ ಕುರಿತು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಬಾಯ್ಬಿಡುತ್ತಿಲ್ಲ ದರ್ಶನ್?: 'ದರ್ಶನ್ ಅವರು 10 ದಿನಗಳಿಂದ ಪೊಲೀಸ್ ಕಸ್ಟಡಿಯಲ್ಲಿ ಇದ್ದರೂ ತನಿಖೆಗೆ ಸಹಕಾರ ನೀಡುತ್ತಿಲ್ಲ' ಎಂಬುದು ಗೊತ್ತಾಗಿದೆ.

'ತಮ್ಮ ಹೆಸರನ್ನು ಎಲ್ಲಿಯೂ ಬಾಯ್ಬಿಡದಂತೆ ಪ್ರದೋಷ್‌ಗೆ ₹30 ಲಕ್ಷ ನೀಡಿದ್ದೆ' ಎಂದು ದರ್ಶನ್ ಅವರು ಸ್ವಇಚ್ಛಾ ಹೇಳಿಕೆ ನೀಡಿದ್ದರು. ದರ್ಶನ್ ಅವರು, ಹಣ, ಇತರೆ ಆರೋಪಿಗಳು ಹಾಗೂ ಅಭಿಮಾನಿ ಬಳಗವನ್ನು ಬಳಸಿಕೊಂಡು ಈ ಕೃತ್ಯದಲ್ಲಿ ಭಾಗಿ ಆಗಿರುವುದು ತನಿಖೆಯಿಂದ ದೃಢಪಟ್ಟಿದೆ. ಕೃತ್ಯದ ನಂತರ ದರ್ಶನ್ ಅವರು ರಾಜಕಾರಣಿಗಳು, ಚಿತ್ರರಂಗದ ಗಣ್ಯರು ಹಾಗೂ ಪ್ರಭಾವಿಗಳನ್ನು ಸಂಪರ್ಕಿಸಿದ್ದರು. ಅದಕ್ಕೂ ಸಾಕ್ಷ್ಯಗಳು ಲಭಿಸಿವೆ. ಎಲ್ಲ ಸಾಕ್ಷ್ಯಗಳನ್ನು ಅವರ ಎದುರಿಗಿಟ್ಟು ವಿಚಾರಣೆ ನಡೆಸಲಾಗುತ್ತಿದೆ. ಆದರೂ, ಅವರು ಬಾಯ್ಬಿಡುತ್ತಿಲ್ಲ. ಮತ್ತೆ ಕಸ್ಟಡಿಗೆ ಪಡೆದುಕೊಂಡಿರುವ ದರ್ಶನ್, ಧನರಾಜ್, ವಿನಯ್ ಹಾಗೂ ಪ್ರದೋಷ್ ಅವರನ್ನು ವಿಚಾರಣೆ ನಡೆಸಲಾಗುತ್ತಿದೆ. ನ್ಯಾಯಾಲಯದ ಸೂಚನೆ ಮೇರೆಗೆ ಚಿತ್ರೀಕರಣ ಮಾಡಲಾಗುತ್ತಿದೆ' ಎಂದು ಮೂಲಗಳು ಹೇಳಿವೆ.



❦ ಸುಭಾಷಿತ ❦

ವಿನಯವು ಸಕಲ ಸದ್ಗುಣಗಳ ಮೂಲ.

–ಕನ್‌ಫ್ಯೂಷಿಯಸ್

ವಿಷಯುಕ್ತ ಮದ್ಯ ಕುಡಿದು ಸಾವು ಸರ್ಕಾರದ್ದೇ ಸಂಪೂರ್ಣ ಹೊಣೆ

ತಮಿಳುನಾಡಿನ ಉತ್ತರ ಭಾಗದ ಕಲ್ಲಕುರಿಚ್ಚಿ ಎಂಬಲ್ಲಿ ವಿಷಯುಕ್ತ ಮದ್ಯ ಕುಡಿದು ಎರಡು ದಿನಗಳಲ್ಲಿ 47 ಮಂದಿ ಮೃತಪಟ್ಟಿದ್ದಾರೆ. ರಾಜ್ಯದಲ್ಲಿ ಇತ್ತೀಚಿನ ವರ್ಷಗಳಲ್ಲಿ ನಡೆದ ಅತ್ಯಂತ ದೊಡ್ಡ ದುರಂತ ಇದು. ಕಳೆದ ವರ್ಷವೂ ತಮಿಳುನಾಡಿನಲ್ಲಿ ವಿಷಯುಕ್ತ ಮದ್ಯದ ಎರಡು ದುರಂತಗಳು ನಡೆದಿದ್ದವು. ಅವುಗಳಲ್ಲಿ 17 ಜನರು ಮೃತಪಟ್ಟಿದ್ದರು. ಆದರೆ, ಅದಕ್ಕೂ ಹಿಂದಿನ 15 ವರ್ಷಗಳಲ್ಲಿ ಮದ್ಯಕ್ಕೆ ಸಂಬಂಧಿಸಿ ದುರಂತಗಳು ಘಟಿಸಿರಲಿಲ್ಲ. ಅಕ್ರಮವಾಗಿ ಮದ್ಯ ತಯಾರಿಸುವಿಕೆ, ಕಳ್ಳಬಟ್ಟಿಯಂತಹ ಪಿಡುಗನ್ನು ನಿಯಂತ್ರಿಸುವಲ್ಲಿ ಅಲ್ಲಿನ ಸರ್ಕಾರ ಯಶಸ್ವಿಯಾಗಿತ್ತು ಎಂದೇ ಭಾವಿಸಲಾಗಿತ್ತು. ಅಕ್ರಮ ಮದ್ಯ ತಯಾರಿಸಲು ಬಳಸಲಾಗುವ ಮೆಥನಾಲ್ ಪೂರೈಕೆ ಮತ್ತು ವಿತರಣೆಯನ್ನು ನಿಯಂತ್ರಿಸಲು ಕಾಯ್ದೆಗೆ ತಿದ್ದುಪಡಿಯನ್ನೂ ತರಲಾಗಿತ್ತು. ಆದರೆ, ಅಕ್ರಮ ಮದ್ಯ ತಯಾರಿ ಮತ್ತು ಪೂರೈಕೆಯ ಸಮಸ್ಯೆ ಇನ್ನೂ ಇದೆ ಎಂಬುದರತ್ತ ಕಲ್ಲಕುರಿಚ್ಚಿ ಪ್ರಕರಣವು ಬೆಳಕು ಚೆಲ್ಲಿದೆ. ಬಹುಶಃ, ಇಷ್ಟು ವರ್ಷಗಳಲ್ಲಿ ಸಾವು ನೋವು ಸಂಭವಿಸಿಲ್ಲದ ಕಾರಣ ಈ ಕುರಿತು ಯಾರೂ ಗಮನಹರಿಸಿರಲಿಲ್ಲ.

ವಿಷಯುಕ್ತ ಮದ್ಯ ಕುಡಿದು ಜನರು ಸಾಯುತ್ತಿದ್ದಾರೆ ಎಂದರೆ ಆಡಳಿತದ ವೈಫಲ್ಯವೇ ಅದಕ್ಕೆ ಕಾರಣ. ರಾಜ್ಯ ಸರ್ಕಾರವನ್ನೇ ಅದಕ್ಕೆ ಹೊಣೆ ಮಾಡಬೇಕಾಗುತ್ತದೆ. ಮದ್ಯವನ್ನು ಸಂಪೂರ್ಣವಾಗಿ ನಿಷೇಧಿಸುವುದು ಕಷ್ಟಸಾಧ್ಯ. ಆದರೆ, ಆರೋಗ್ಯಕರವಾದ ಮದ್ಯ ನೀತಿಯೊಂದನ್ನು ಜಾರಿಗೊಳಿಸುವುದು ಅಸಾಧ್ಯವೇನಲ್ಲ. ತಮಿಳುನಾಡು ರಾಜ್ಯ ಮಾರುಕಟ್ಟೆ ನಿಗಮ ನಿಯಮಿತವು (ಟಾಸ್‌ಮ್ಯಾಕ್) ಚಿಲ್ಲರೆ ಮದ್ಯ ಮಾರಾಟ ಮಳಿಗೆಗಳನ್ನು ನಿರ್ವಹಿಸುತ್ತಿದೆ. ಆದರೆ, ಅಗ್ಗದ ದರದಲ್ಲಿ ಹೆಚ್ಚು ಮತ್ತು ತರುವಂತಹ ಮದ್ಯವು ದೊರೆತಾಗ ಜನರು ಅದರತ್ತ ಆಕರ್ಷಿತರಾಗುತ್ತಾರೆ. ಪೊಲೀಸ್ ಇಲಾಖೆ, ಅಬಕಾರಿ ಇಲಾಖೆ ಮತ್ತು ಜಿಲ್ಲಾಡಳಿತವು ಜಾಗ್ರತವಾಗಿದ್ದರೆ ಇದನ್ನು ತಡೆಯುವುದು ಕಷ್ಟವೇನಲ್ಲ. ಮೆಥನಾಲ್ ಪೂರೈಕೆಯನ್ನು ನಿಯಂತ್ರಣದಲ್ಲಿ ಇರಿಸುವುದು ಕೂಡ ಅಸಾಧ್ಯವಲ್ಲ. ವಿಷಯುಕ್ತ ಮದ್ಯ ತಯಾರಿಸುವವರು, ಅದನ್ನು ಸಾಗಿಸುವವರು, ಅದನ್ನು ಮಾರುವವರದ್ದು ಒಂದು ಜಾಲವಾದರೆ, ಅವರನ್ನು ರಕ್ಷಿಸುವುದಕ್ಕೂ ಪೊಲೀಸರು ಮತ್ತು ಇತರ ಅಧಿಕಾರಿಗಳು ಇರುವ ಒಂದು ಜಾಲ ಇದೆ. ಸ್ಥಳೀಯ ಮಟ್ಟದಲ್ಲಿ ಇವರಿಗೆ ರಾಜಕೀಯ ರಕ್ಷಣೆಯೂ ಇದೆ. ಇಂತಹ ರಕ್ಷಣೆ ಇಲ್ಲದೆ ಈ ರೀತಿಯ ಅಕ್ರಮ ಚಟುವಟಿಕೆ ನಡೆಸಲು ಸಾಧ್ಯವಿಲ್ಲ. ಕಲ್ಲಕುರಿಚ್ಚಿ ಜಿಲ್ಲಾಧಿಕಾರಿಯನ್ನು ವರ್ಗಾಯಿಸಲಾಗಿದೆ. ಕೆಲವು ಪೊಲೀಸ್ ಅಧಿಕಾರಿಗಳನ್ನು ಅಮಾನತು ಮಾಡಲಾಗಿದೆ ಇಲ್ಲವೇ ವರ್ಗಾಯಿಸಲಾಗಿದೆ. ಆದರೆ, ಅನಾಹುತ ನಡೆದ ಬಳಿಕ ಇಂತಹ ಕ್ರಮಗಳನ್ನು ಕೈಗೊಳ್ಳುವುದರಿಂದ ಯಾವುದೇ ಪ್ರಯೋಜನ ಇಲ್ಲ.



ಈ ದುರಂತಕ್ಕೆ ಕಾರಣರಾದ ಪ್ರತಿಯೊಬ್ಬರಿಗೂ ತಕ್ಕ ಶಿಕ್ಷೆ ಆಗುವಂತೆ ನೋಡಿಕೊಳ್ಳಬೇಕು

ಅಕ್ರಮ ಮದ್ಯ ತಯಾರಿಕೆ ಮತ್ತು ಮಾರಾಟ ಜಾಲವನ್ನು ಪತ್ತೆ ಮಾಡಿ, ತಡೆಯುವಲ್ಲಿ ಜಿಲ್ಲಾಡಳಿತ, ಪೊಲೀಸ್ ಇಲಾಖೆ, ಅಬಕಾರಿ ಇಲಾಖೆಯು ವಿಫಲವಾಗಿವೆ. ಮೆಥನಾಲ್ ಪೂರೈಕೆಯ ಮೇಲೆ ನಿಗಾ ಇರಿಸುವಲ್ಲಿಯೂ ಇಲಾಖೆಗಳು ವಿಫಲವಾಗಿವೆ. ಮದ್ಯದ ದರವನ್ನು ಟಾಸ್‌ಮ್ಯಾಕ್ ಹೆಚ್ಚಳ ಮಾಡಿದೆ. ಇದರಿಂದಾಗಿಯೂ ಜನರು ಅಗ್ಗದ ಮದ್ಯ ಪೂರೈಸುವವರಿಂದ ಮದ್ಯ ಖರೀದಿ ಮಾಡಿದ್ದಾರೆ. ಪ್ರಕರಣದಲ್ಲಿ ಕೆಲವರನ್ನು ಬಂಧಿಸಲಾಗಿದೆ. ಈ ದುರಂತಕ್ಕೆ ಕಾರಣರಾದ ಪ್ರತಿಯೊಬ್ಬರಿಗೂ ತಕ್ಕ ಶಿಕ್ಷೆ ಆಗುವಂತೆ ನೋಡಿಕೊಳ್ಳಬೇಕು. ತಮಿಳುನಾಡಿನ ಬೇರೆ ಭಾಗಗಳಲ್ಲಿಯೂ ಅಕ್ರಮ ಮದ್ಯ ತಯಾರಿ ಜಾಲಗಳು ಇವೆ ಎಂಬುದರಲ್ಲಿ ಅನುಮಾನವೇನೂ ಇಲ್ಲ. ಅವುಗಳನ್ನು ಮುಚ್ಚಿಸುವ ದಿಸೆಯಲ್ಲಿ ಕೆಲಸ ಆಗಬೇಕು. ಅಕ್ರಮ ಮದ್ಯ ಕುಡಿದು ಸಂತ್ರಸ್ತರಾಗುವವರಲ್ಲಿ ಸಮಾಜದ ದುರ್ಬಲ ವರ್ಗದವರೇ ಇರುತ್ತಾರೆ. ಕಲ್ಲಕುರಿಚ್ಚಿಯಲ್ಲಿಯೂ ಹಲವು ಕುಟುಂಬಗಳು ಅನಾಥವಾಗಿವೆ. ಈ ಕುಟುಂಬಗಳು ಅನುಭವಿಸುವ ನೋವು ಮತ್ತು ಸಂಕಷ್ಟಗಳನ್ನು ಯಾವುದೇ ರೀತಿಯ ಪರಿಹಾರದಿಂದಲೂ ನಿವಾರಿಸಲು ಸಾಧ್ಯವಿಲ್ಲ.

ದಿನದ ಟ್ವೀಟ್


ಅರಿವು ಮೂಡಿಸುವ ಮಾದರಿ



ನಮ್ಮ ಶಾಲೆಯ (ಬೆಳಗಾವಿ ತಾಲ್ಲೂಕಿನ ಭೂತರಾಮನಹಟ್ಟಿ ಸರ್ಕಾರಿ ಮಾದರಿ ಕನ್ನಡ ಹಿರಿಯ ಪ್ರಾಥಮಿಕ ಶಾಲೆ) 'ಸಂಸತ್ ಚುನಾವಣೆ'ಯನ್ನು ಇವಿಎಂ ಮೂಲಕ ನಡೆಸಲಾಯಿತು. ಚುನಾವಣೆಗೆ ಮುನ್ನ ಅಣಕು ಮತದಾನ ನಡೆಯಿತು. ಮಕ್ಕಳಿಗೆ ಇದೊಂದು ಅದ್ಭುತ ಅನುಭವ.

ಬಸವ ಸುಂಗರಿ

ಕಿಡಿನುಡಿ



ಗ್ಯಾರಂಟಿ ನೀಡುವುದಾಗಿ ಹೇಳಿ ರಾಜ್ಯ ಸರ್ಕಾರ ಅಧಿಕಾರಕ್ಕೆ ಬಂದಿದೆ. ಗ್ಯಾರಂಟಿ ಸ್ಥಗಿತಗೊಳಿಸಬೇಕೆಂದು ನಾವು ಹೇಳುವುದಿಲ್ಲ. ಗ್ಯಾರಂಟಿ ಯೋಜನೆಗಳು ಬಡವರಿಗಾಗಿ ಇವೆ. ಅವುಗಳನ್ನು ಮುಂದುವರಿಸಬೇಕು. ಅದರ ಜೊತೆಗೆ ಸಂಪನ್ಮೂಲ ಕ್ರೋಡೀಕರಿಸಿ ರಾಜ್ಯದ ಅಭಿವೃದ್ಧಿಯನ್ನೂ ಮಾಡಬೇಕು. ಆದರೆ, ಈಗ ಅಭಿವೃದ್ಧಿಯೇ ಶೂನ್ಯವಾಗಿದೆ.

ಬಸವರಾಜ ಬೊಮ್ಮಾಯಿ, ಸಂಸದ, ಬಿಜೆಪಿ ಮುಖಂಡ

25 ವರ್ಷಗಳ ಹಿಂದೆ

ಮಂಗಳವಾರ, 22-6-1999

• ಕುಸಿದ ದರ: ಬೀದಿಯಲ್ಲಿ ಚೆಲ್ಲಾಡಿದ ಹಸಿಮೆಣಸಿನಕಾಯಿ

ಹಾಸನ, ಜೂನ್ 21– ಹಸಿಮೆಣಸಿನಕಾಯಿ ಬೆಲೆ ತೀವ್ರವಾಗಿ ಕುಸಿದ ಕಾರಣ, ನೂರಾರು ರೈತರು ತಾವು ಕಷ್ಟಪಟ್ಟು ಬೆಳೆದಿದ್ದ ಬೆಳೆಯನ್ನು ರಸ್ತೆ ಹಾಗೂ ಸಂತೆ ಮೈದಾನದಲ್ಲೆಲ್ಲಾ ಚೆಲ್ಲಿ, ಬಸ್ ಪ್ರಯಾಣಕ್ಕೂ ಹಣವಿಲ್ಲದೆ ಬರಿಗೈಯಲ್ಲಿ ತೆರಳಿದ ಪ್ರಸಂಗ ಇಂದು ಇಲ್ಲಿ ನಡೆಯಿತು.

ಹಾಸನದಲ್ಲಿ ಪ್ರತಿ ಸೋಮವಾರ ನಡೆಯುವ ಹಸಿಮೆಣಸಿನಕಾಯಿ ಸಂತೆಗೆ ಸಕಲೇಶಪುರ, ಬೇಲೂರು, ಆಲೂರು, ಅರೇಹಳ್ಳಿ, ಮಗ್ಗೆ, ಚಿಕ್ಕೋಡು, ಮಲ್ಲಿಪಟ್ಟಣ, ಯಸಳೂರು, ಶನಿವಾರ ಸಂತೆ, ಅರಕಲಗೂಡು ಹಾಗೂ ಕೊಡಗು ಜಿಲ್ಲೆಯ ಸೋಮವಾರಪೇಟೆಯಿಂದಲೂ ರೈತರು ಮಾಲು ತಂದಿದ್ದರು.

ನಿನ್ನೆ ರಾತ್ರಿ ದೊಡ್ಡ ಗೋಣಿಚೀಲದಲ್ಲಿ ತುಂಬಿದ್ದ ಮೆಣಸಿನಕಾಯಿಗೆ 125 ರೂಪಾಯಿವರೆಗೂ ಇದ್ದ ಧಾರಣೆ ಬೆಳಿಗ್ಗೆ ಹೊತ್ತಿಗೆ ಯಥೇಚ್ಛವಾದ ಮಾಲು ಸಂತೆಗೆ ಬಂದುದರಿಂದ ಹಠಾತ್ತಾಗಿ ಚೀಲಕ್ಕೆ 10 ರೂಪಾಯಿಗೆ ಕುಸಿಯಿತು. ಬೆಳಿಗ್ಗೆ ಆರಂಭದಲ್ಲಿ ಚೀಲಕ್ಕೆ 70 ರೂಪಾಯಿಯಂತೆ ಖರೀದಿಸಿದ್ದ ವರ್ತಕರು, ಮಾಲು ರಾಶಿ ರಾಶಿ ಬರುವುದನ್ನು ಕಂಡು ಚೀಲಕ್ಕೆ 10 ರೂಪಾಯಿ ದರ ನಿಗದಿ ಮಾಡಿದರು. ಇದರಿಂದ ಆಕ್ರೋಶಗೊಂಡ ರೈತರು ತಾವು ತಂದಿದ್ದ ಮೆಣಸಿನಕಾಯಿಯನ್ನು ಚೆಲ್ಲಾಡಿದರು.

50 ವರ್ಷಗಳ ಹಿಂದೆ

ಶನಿವಾರ, 22-6-1974

• ಹೆಚ್ಚು ಪ್ರಮಾಣದ ಬಳಕೆದಾರರಿಗೆ ಶೇ 60ರಷ್ಟು ವಿದ್ಯುತ್ ಖೋತಾ

ಬೆಂಗಳೂರು, ಜೂನ್ 21– ಶರಾವತಿ ವಿದ್ಯುತ್ ಕೇಂದ್ರಕ್ಕೆ ನೀರು ಒದಗಿಸುವ ಲಿಂಗನಮಕ್ಕಿ ಜಲಾಶಯ ಪ್ರದೇಶದಲ್ಲಿ ಇನ್ನೂ ಮುಂಗಾರು ಮಳೆ ಆರಂಭವಾಗಿಲ್ಲದ ಕಾರಣ, ಹೆಚ್ಚು ಪ್ರಮಾಣದ ವಿದ್ಯುತ್ ಬಳಕೆದಾರರ ಮೇಲೆ ವಿಧಿಸಲಾಗಿರುವ ಶೇಕಡ 20ರಷ್ಟು ಖೋತಾವನ್ನು ಜೂನ್ 24ರಂದು ಸೋಮವಾರ ಬೆಳಿಗ್ಗೆ 6 ಗಂಟೆಯಿಂದ ಶೇಕಡ 60ರಷ್ಟಕ್ಕೇರಿಸಲು ರಾಜ್ಯ ಸರ್ಕಾರ 'ಅತ್ಯಂತ ವಿಷಾದದಿಂದ' ನಿರ್ಧರಿಸಿದೆ.

ಮುಂಗಾರು ಮಳೆ ಆರಂಭವಾಗಿಲ್ಲದಿರುವುದೇ ಅಲ್ಲದೆ, ಸದ್ಯದಲ್ಲೇ ಅದು ಬರುವ ಸೂಚನೆಯೂ ಇಲ್ಲ. 'ತೀವ್ರ ಪರಿಸ್ಥಿತಿ' ಕುರಿತು ವಿದ್ಯುತ್ ಮಂಡಳಿ ಅಧಿಕಾರಿಗಳೊಡನೆ ಸಮಾಲೋಚನೆ ನಡೆಸಿದ ವಿದ್ಯುತ್ ಸಚಿವ ಎಚ್.ಎಂ. ಚನ್ನಬಸಪ್ಪ ಅವರು ಸಂಜೆ ಅವಸರದಲ್ಲಿ ಪತ್ರಿಕಾಗೋಷ್ಠಿ ನಡೆಸಿ 'ಅನಿವಾರ್ಯವಾದ' ನಿರ್ಧಾರವನ್ನು ಪ್ರಕಟಿಸಿದರು.

• ಜಾತಿ ಆಧಾರಿತ ನಾಮಫಲಕಗಳ ವಿರುದ್ಧ ರಾಜ್ಯ ಸರ್ಕಾರದ ಕ್ರಮ

ಬೆಂಗಳೂರು, ಜೂನ್ 21– ಹೋಟೆಲ್, ರೆಸ್ಟೋರೆಂಟ್‌ಗಳು ಮತ್ತಿತರ ಸಾರ್ವಜನಿಕ ಉಪಾಹಾರ ಗೃಹಗಳಿಗೆ ಜಾತಿ, ಕೋಮು ಆಧಾರಿತ ನಾಮಫಲಕ ಹಾಕುವುದನ್ನು ನಿಲ್ಲಿಸುವ ಹಾಗೂ ಈಗ ಇರುವ ಅಂಥ ನಾಮಫಲಕಗಳನ್ನು ತೆಗೆಯುವ ಕ್ರಮಕ್ಕೆ ಸರ್ಕಾರ ಮುಂದಾಗಿದೆ.

ರಾಜ್ಯದ ಎಲ್ಲ ಪಂಚಾಯಿತಿಗಳು ತಮ್ಮ ಕಾರ್ಯಕ್ಷೇತ್ರದಲ್ಲಿರುವ ಅಂಥ ಹೋಟೆಲುಗಳ ಜಾತಿ ಆಧಾರಿತ ನಾಮಫಲಕಗಳನ್ನು ತೆಗೆದು ಹಾಕುವಂತೆ, ಆ ಹೋಟೆಲುಗಳ ಮಾಲೀಕರ ಮನ ಒಲಿಸಲು ಪಂಚಾಯಿತಿಗಳಿಗೆ ತಿಳಿಸಬೇಕೆಂದು ಸರ್ಕಾರ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಆದೇಶ ನೀಡಿದೆ.


• ಅಸ್ತಿತ್ವದಲ್ಲೇ ಇಲ್ಲದಿದ್ದರೂ ಸಹಾಯಧನ ಪಡೆಯುತ್ತಿರುವ ಹರಿಜನ ವಿದ್ಯಾರ್ಥಿ ಹಾಸ್ಟೆಲ್ಲುಗಳು

ಬೆಂಗಳೂರು, ಜೂನ್ 21– ಬೆಂಗಳೂರು ಡಿವಿಜನ್‌ನಲ್ಲಿರುವ 71 ಹರಿಜನ, ಗಿರಿಜನ ಮತ್ತು ದುರ್ಬಲ ವರ್ಗದ ವಿದ್ಯಾರ್ಥಿಗಳ ಹಾಸ್ಟೆಲ್‌ಗಳ ಪೈಕಿ ಐದು ಹಾಸ್ಟೆಲ್‌ಗಳು ಅಸ್ತಿತ್ವದಲ್ಲಿಯೇ ಇಲ್ಲ ಹಾಗೂ 25 ಹಾಸ್ಟೆಲ್‌ಗಳು ರಿಜಿಸ್ಟರ್ ಆಗಿಲ್ಲ ಎಂದು ಸರ್ಕಾರ ನಡೆಸಿದ ತನಿಖೆಯಿಂದ ವ್ಯಕ್ತವಾಗಿದೆ.

ಕಲ್ಬುರ್ಗಿ ಡಿವಿಜನ್‌ನಲ್ಲಿ ಎರಡು ಹಾಸ್ಟೆಲ್‌ಗಳು ಸಮರ್ಪಕ ರೀತಿಯಲ್ಲಿವೆ. ಮೈಸೂರು ಮತ್ತು ಬೆಳಗಾವಿ ಡಿವಿಜನ್‌ಗಳಲ್ಲಿರುವ ಒಟ್ಟು 56 ಹಾಸ್ಟೆಲ್‌ಗಳ ನಿರ್ವಹಣೆ ಕುರಿತ ತನಿಖೆ ಇನ್ನೂ ಅಪೂರ್ಣ ಸ್ಥಿತಿಯಲ್ಲಿದೆ.

ರಚನಾತ್ಮಕವಾದ ಜಗಳದಿಂದ ಸಂಬಂಧ ಸುಧಾರಣೆ ಸಾಧ್ಯ ಎನ್ನುತ್ತದೆ ಅಧ್ಯಯನ

ದಾಂಪತ್ಯ ಮತ್ತು ಕಲಹದ ಸಾಂಗತ್ಯ!



ವಿಶ್ಲೇಷಣೆ

ಡಾ. ಕೆ.ಎಸ್.ಪವಿತ್ರ

ಖಿನ್ನತೆಯಿಂದ ಬಳಲುತ್ತಿದ್ದ ಮಹಿಳೆಯೊಬ್ಬರು ಹಿರಿಯ ಮನೋವೈದ್ಯರ ಬಳಿ ಚಿಕಿತ್ಸೆಗೆಂದು ಬಂದಿದ್ದರು. ಜೊತೆಗೆ ಬಂದಿದ್ದ ಆಕೆಯ ಪತಿ ಹೇಳಿದ್ದು- 'ಡಾಕ್ಟ್ರೇ, 25 ವರ್ಷಗಳ ದಾಂಪತ್ಯ ಜೀವನದಲ್ಲಿ ನಮ್ಮಿಬ್ಬರ ಮಧ್ಯೆ ಒಂದೇ ಒಂದು ಬಾರಿಯೂ ಜಗಳ ನಡೆದಿಲ್ಲ. ಹೀಗಿರುವಾಗ, ಇವಳಿಗೆ ಈ ರೀತಿ ಖಿನ್ನತೆ ಬರೋದಿಕ್ಕೆ ಹೇಗೆ ಸಾಧ್ಯ? ಅದಕ್ಕೆ ಕಾರಣವಾದರೂ ಏನು?'

ಆಗ ಆ ಮನೋವೈದ್ಯರು ನಕ್ಕು 'ನೀವಿಬ್ಬರೂ ಮನೆಗೆ ಹೋಗಿ ಚೆನ್ನಾಗಿ ಜಗಳವಾಡಿ. ನನ್ನ ಚಿಕಿತ್ಸೆಯು ನಿಮ್ಮ ಖಿನ್ನತೆಯನ್ನು ತಾತ್ಕಾಲಿಕವಾಗಿ ಸರಿ ಮಾಡಬಹುದು. ಆದರೆ ಅದು ಮರುಕಳಿಸಬಾರದೆಂದರೆ ನೀವಿಬ್ಬರೂ ನಿಮ್ಮ ನಿಮ್ಮ ಅಭಿಪ್ರಾಯಗಳನ್ನು ಮುಕ್ತವಾಗಿ ವ್ಯಕ್ತಪಡಿಸಬೇಕು. ನಿಮ್ಮ ನಡುವೆ ಭಿನ್ನಾಭಿಪ್ರಾಯಗಳೇನಾದರೂ ಇದ್ದರೆ ಇಬ್ಬರೂ ಅವುಗಳನ್ನು ಹೊರಗೆ ಹಾಕುವ ಮೂಲಕ ಪರಿಹರಿಸಿಕೊಳ್ಳಬೇಕು. ಹೀಗಾಗಿ, ಮೊದಲು ಸರಿಯಾಗಿ (ರಚನಾತ್ಮಕವಾಗಿ) ಜಗಳವಾಡುವುದನ್ನು ಕಲಿಯಿರಿ' ಎಂದರು! ಮನೋವೈದ್ಯರು 'ಜಗಳವಾಡದೆ ಸೌಹಾರ್ದದಿಂದ ಇರಿ' ಎನ್ನುವ ಬದಲು 'ಸರಿಯಾಗಿ ಜಗಳವಾಡಿ' ಎಂದದ್ದು ಅಚ್ಚರಿಯ ಸಂಗತಿಯಲ್ಲವೇ?

ಎಲ್ಲ ಬಗೆಯ ಸಂಬಂಧಗಳಲ್ಲೂ ಕಲಹ ಉಂಟಾಗುವುದು ಸಾಮಾನ್ಯ ಸಂಗತಿಯಾದರೂ 'ದಾಂಪತ್ಯ ಕಲಹ' ಮಾತ್ರ ವಿಶೇಷವಾಗಿ ಗುರುತಿಸಿಕೊಳ್ಳುತ್ತದೆ. 'ಹೆಂಡತಿಯ ಕೈಯಲ್ಲಿ ಬುದ್ಧಿವಂತ ಅನ್ನಿಸಿಕೊಂಡ ಗಂಡ ಇಲ್ಲ' ಎಂದು ಜಗತ್ತು ಹೇಳಿದರೆ, 'ನಾನು ಮಾಡಿದ ಕೆಲಸ ಇವರೊಬ್ಬರಿಗೆ ಮಾತ್ರ ಸರಿಹೋಗದು, ಉಳಿದ ಎಲ್ಲರೂ ನನ್ನನ್ನು ಹೊಗಳುತ್ತಾರೆ' ಎಂದು ಎಷ್ಟೋ ಮಹಿಳೆಯರು ಅಲವತ್ತುಕೊಳ್ಳುತ್ತಾರೆ.

ಅಮೆರಿಕದ ಡಾ. ಜಾನ್ ಗೊಟ್‌ಮನ್ ಮತ್ತು ಡಾ. ಜೂಲಿ ಸ್ವಾರ್ಟ್ಸ್ ಗೊಟ್‌ಮನ್ ಎಂಬ ವಿಜ್ಞಾನಿಗಳು ಸೇರಿ ನಡೆಸುವ, 'ಗೊಟ್‌ಮನ್ ವಿಧಾನ' ಎಂದೇ ಕರೆಯಲಾಗುವ 'ದಾಂಪತ್ಯ ಚಿಕಿತ್ಸೆ'ಯು ಗಮನಾರ್ಹವಾದುದು. ಈ ಮೂಲಕ 52 ವರ್ಷಗಳಿಂದ 'ಪ್ರೀತಿಯ ಪ್ರಯೋಗಶಾಲೆ'ಯನ್ನೇ ನಡೆಸುತ್ತಾ ಬಂದಿರುವ ಈ ದಂಪತಿ, ಒಂದಾದ ಮೇಲೊಂದರಂತೆ, ದಾಂಪತ್ಯ ಕಲಹದ ಬಗೆಗೆ ಅಧ್ಯಯನ ನಡೆಸುತ್ತಲೇ ಇದ್ದಾರೆ. ಈ ಎಲ್ಲಾ ಅಧ್ಯಯನಗಳ ಸಾರ ಏನು ಗೊತ್ತೇ? ದಾಂಪತ್ಯದಲ್ಲಿ ಜಗಳ ಎನ್ನುವುದು ಬೇಕೇ ಬೇಕು ಎನ್ನುವುದು! ಅಂದರೆ ಸಂಬಂಧ ಗಟ್ಟಿಯಾಗಲು ಒಂದು ಇತಿಮಿತಿಯೊಳಗೆ ರಚನಾತ್ಮಕವಾದ ಜಗಳ ಅವಶ್ಯಕ ಎಂದರ್ಥ!

ಇಂಥ ಅಧ್ಯಯನಗಳಲ್ಲಿ ದಂಪತಿ ಮಾತನಾಡಿಕೊಳ್ಳುವ ರೀತಿಯನ್ನು ಪರಿಶೀಲಿಸಲಾಯಿತು. ಒಂದೆಡೆ, ಅವರ ಮಾತುಕತೆಯನ್ನು ಮುದ್ರಿಸಿಕೊಂಡರೆ, ಮತ್ತೊಂದೆಡೆ, ಆ ಸಂದರ್ಭದಲ್ಲಿನ ಅವರ ಎದೆಬಡಿತ, ಒತ್ತಡದ ರಸದೂತಗಳನ್ನು ದಾಖಲಿಸಲಾಯಿತು. ತಮ್ಮ ದಿನಚರಿ, ತಮ್ಮ ನಡುವೆ ಭಿನ್ನಾಭಿಪ್ರಾಯಕ್ಕೆ ಕಾರಣವಾಗುವ ವಿಷಯಗಳು ಸೇರಿದಂತೆ ದೈನಂದಿನ ಸಂಗತಿಗಳ ಬಗೆಗೆ ಅವರು ಉಭಯ ಕುಶಲೋಪರಿಯ ರೀತಿಯಲ್ಲಿ ಮಾತನಾಡಿದರು. ಒಂದು ಅಥವಾ ಎರಡು ವರ್ಷಗಳಿಗೊಮ್ಮೆ ದಂಪತಿಗಳು ಈ ಕೇಂದ್ರಕ್ಕೆ ಬರುವುದು, ಆಗಲೂ ಇದೇ ರೀತಿಯ ಮಾತುಕತೆ ನಡೆಸುವುದು, ಅವುಗಳ ದಾಖಲೀಕರಣವು 20 ದೀರ್ಘ ವರ್ಷಗಳವರೆಗೂ ನಿರಂತರವಾಗಿ ನಡೆಯಿತು. ಸುಮಾರು 3,000 ದಂಪತಿಗಳನ್ನು ಈ ಅಧ್ಯಯನಕ್ಕೆ ಒಳಪಡಿಸಲಾಗಿತ್ತು. ಅವರ ಮಾತು, ಹಾವಭಾವ, ದೇಹದ ಸ್ಥಿತಿ ಎಲ್ಲವನ್ನೂ 'ಪ್ರೀತಿಯ ಪ್ರಯೋಗಶಾಲೆ'ಯಲ್ಲಿ ಎಷ್ಟರಮಟ್ಟಿಗೆ ಅಧ್ಯಯನ ಮಾಡಲಾಯಿತೆಂದರೆ, ಒಂದು ಜೋಡಿಯನ್ನು ಕೆಲಕ್ಷಣ ವೀಕ್ಷಿಸಿ, ಒಂದಷ್ಟು ವರ್ಷಗಳ ನಂತರ ಅವರ ನಡುವಿನ ಸಂಬಂಧ ಹೇಗಿರಬಹುದು ಎಂಬುದನ್ನು ಈ ವಿಜ್ಞಾನಿಗಳು ಶೇ 90ರಷ್ಟು ನಿಖರವಾಗಿ ಹೇಳಬಲ್ಲವರಾದರು!

ಛೇ ಛೇ! ಇದೆಲ್ಲಾ ಅಮೆರಿಕದಲ್ಲಿ ಸರಿ, ನಮ್ಮ ಭಾರತದಲ್ಲಿ ಆ ರೀತಿಯೆಲ್ಲ ನಡೆಯದು ಎಂದು ನೀವು ಹೇಳಬಹುದು. ಗಂಡ-ಹೆಂಡತಿ ನಡುವಣ ಕಲಹಗಳಲ್ಲಿ ಮೂರು ಮುಖ್ಯವಾದ ವಿಧಗಳನ್ನು ಗುರುತಿಸಲಾಗಿದೆ. ಇವುಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ, ದಾಂಪತ್ಯ ಕಲಹವು ಸಾರ್ವತ್ರಿಕವಾದುದು, ಅದಕ್ಕೆ ಯಾವ ಕಾಲ, ದೇಶಗಳ ಭೇದವೂ ಇಲ್ಲ ಎಂಬುದು ಗೊತ್ತಾಗಿ ಹೋಗುತ್ತದೆ. ಕೆಲವರಿಗೆ ಜಗಳದ ತಲೆನೋವೇ ಬೇಕಾಗಿರುವುದಿಲ್ಲ. ಅಂತಹವರು ಜಗಳಕ್ಕೆ ಹೆದರಿಕೊಂಡು ಸುಮ್ಮನಾಗಿಬಿಡುತ್ತಾರೆ. ಇನ್ನು ಕೆಲವರಿಗೆ ಸಮಸ್ಯೆ ಏನು ಎಂದು ಹೇಳಲು ಬರುತ್ತದೆ, ಆದರೆ ಅವರು ತತ್‌ಕ್ಷಣವೇ ಅದಕ್ಕೆ ಪರಿಹಾರ ಬಯಸುತ್ತಾರೆ. ಉಳಿದವರು, ಅಂದರೆ ನಮ್ಮಲ್ಲಿ ಹೆಚ್ಚಿನವರು ರೆಕ್ಕೆಪುಕ್ಕ ಕೆದರಿಕೊಂಡು 'ನಾನು ಸರಿಯಿದ್ದೇನೆ. ನನ್ನ ಗಂಡ ಅಥವಾ ಹೆಂಡತಿಯೇ ಸರಿಯಿಲ್ಲ' ಎಂಬುದನ್ನು ನಿರೂಪಿಸಲು ಪಣ ತೊಟ್ಟವರಂತೆ ಕಾದಾಡುತ್ತೇವೆ. ಹೀಗೆ ಜಗಳಗಳ ರೀತಿ ಯಾವುದೇ ಇರಲಿ, ಇವೆಲ್ಲದರ ಮಧ್ಯೆಯೂ ದಂಪತಿಯ ಸಂಬಂಧ ಗಟ್ಟಿಯಾಗಿರಲು ಸಾಧ್ಯವಿದೆ ಎನ್ನುವುದೇ ಸಮಾಧಾನದ ಸಂಗತಿ.

ಕಲಹದಿಂದ ಸಂಬಂಧ ಕೆಡುವುದು ಯಾವಾಗ? ಕಲಹದ ಮಾತುಗಳಲ್ಲಿ ಅಸಹ್ಯ, ವ್ಯಂಗ್ಯ, ಅಪಮಾನ ನುಸುಳಿದಾಗ, ನಮ್ಮ ತಪ್ಪಿದ್ದೂ ನಾವು ಮುಗ್ಧರಂತೆ ಮತ್ತೆ ಮತ್ತೆ ನಟಿಸತೊಡಗಿದಾಗ, ನಮ್ಮ ಕಿವಿಗಳನ್ನು ಕಿವುಡು ಮಾಡಿಕೊಂಡು ಸಂಗಾತಿಯ ಮಾತನ್ನು ಪೂರ್ತಿ ನಿರ್ಲಕ್ಷಿಸಿದಾಗ. ಸ್ವಾರಸ್ಯಕರ ಸಂಗತಿಯೆಂದರೆ, ಹೀಗೆ ಮಾಡುವಾಗ ಹೊರಗೆ ನಟನೆ, ನಿರ್ಲಕ್ಷ್ಯ ಕಂಡರೂ ಒಳಗೆ ಆತ ಅಥವಾ ಆಕೆಯ ಎದೆಬಡಿತ ಜೋರಾಗಿಯೇ ಇರುತ್ತದೆ!



ಹಾಗಾದರೆ ರಚನಾತ್ಮಕವಾಗಿ ಜಗಳವಾಡುವುದು ಎಂದರೆ ಹೇಗೆ? ದಾಂಪತ್ಯ ಕಲಹಗಳಲ್ಲಿ ಸಾಮಾನ್ಯವಾಗಿ ಹೆಚ್ಚಿನವರ ಗುರಿಯು ಸಂಗಾತಿಯ ವಿರುದ್ಧ ವಾಗ್ಯುದ್ಧದಲ್ಲಿ ಗೆಲ್ಲುವುದೇ ಆಗಿರುತ್ತದೆ. ಆದರೆ ನಿಜವಾಗಿ ಕಲಹ ನಡೆಯಬೇಕಾದದ್ದು ಯಾವುದೇ ಒಂದು ಸಮಸ್ಯೆಯ ಆಳಕ್ಕೆ ಇಳಿಯುವ ಸಲುವಾಗಿ. ಸಮಸ್ಯೆಯಿದೆ, ಭಿನ್ನಾಭಿಪ್ರಾಯವೂ ಇದೆ. ಇಂತಹ ಸ್ಥಿತಿಯಲ್ಲಿ, ಕಲಹ ನಡೆಸಬೇಕಾದದ್ದು ಸಂಗಾತಿಯ ಅಭಿಪ್ರಾಯದ ಹಿಂದಿನ ಕಾರಣವನ್ನು ತಿಳಿದುಕೊಳ್ಳುವ ಸಲುವಾಗಿ! ಈ ಅರಿವು ಕೊಂಡಿಯನ್ನು ಸೇರಿಸುತ್ತದೆ, ಸಂಬಂಧ ಗಟ್ಟಿಯಾಗುತ್ತದೆ.

ಸಾಮಾನ್ಯವಾಗಿ ಇಂತಹ ಕಾರ್ಯ ನಮಗೆ ಅರಿವಿಲ್ಲದೆಯೇ ಕಲಹಗಳ ಮೂಲಕ ನಡೆಯುತ್ತಿರುತ್ತದೆ. ಆದರೆ ಸ್ವಲ್ಪಮಟ್ಟಿಗೆ ಇದನ್ನು ಪ್ರಯತ್ನಪೂರ್ವಕವಾಗಿ ವೈಜ್ಞಾನಿಕವಾದ ರೀತಿಯಲ್ಲಿ ಮಾಡಬಹುದೇ? ಮನೋವಿಜ್ಞಾನ ಇದನ್ನು 'ಡ್ರೀಮ್ಸ್ ವಿಥಿನ್ ಕಾನ್‌ಫ್ಲಿಕ್ಟ್' (ಸಂಘರ್ಷದೊಳಗಿನ ಕನಸುಗಳು) ಎನ್ನುತ್ತದೆ. ಅಂದರೆ, ಉದಾಹರಣೆಗೆ ನಾಯಿಯನ್ನು ಸಾಕಬೇಕು ಅಥವಾ ಸಾಕಬಾರದು ಎನ್ನುವ ವಿಷಯದ ಬಗೆಗೆ ಇಬ್ಬರು ಸ್ನೇಹಿತೆಯರು ಜಗಳವಾಡುತ್ತಿದ್ದಾರೆ ಎಂದುಕೊಳ್ಳೋಣ. ನಾಯಿ ಸಾಕಬೇಕು ಎನ್ನುವ ಮಹಿಳೆಗೆ, ಬಾಲ್ಯದಲ್ಲಿ ಆಕೆ ಹೊಂದಿದ್ದ ಏಕೈಕ ಸ್ನೇಹಿತನೆಂದರೆ, ಗೋಲ್ಡನ್ ರಿಟ್ರೀವರ್ ನಾಯಿ. ಆಕೆಯ 'ಸಂಘರ್ಷದೊಳಗಿನ ಕನಸು' ಏನೆಂದರೆ, 'ನಾಯಿ ಸಾಕಿದರೆ ಮಕ್ಕಳು, ಕುಟುಂಬವನ್ನು ನಿರ್ವಹಿಸಲು ಅಭ್ಯಾಸವಾದಂತೆ ಆಗುತ್ತದೆ. ಮಕ್ಕಳು ಮತ್ತು ನಾಯಿ ಸಾಕಣೆ ಎರಡೂ ಹೆಚ್ಚಿನ ಜವಾಬ್ದಾರಿ ಬೇಡುವ ಕೆಲಸಗಳು. ಅದರ ನಡುವೆಯೂ ಅವು ಎಷ್ಟೆಲ್ಲಾ ಪ್ರೀತಿಯನ್ನು ನಮಗಾಗಿ ನೀಡುತ್ತವೆ ಎಂಬುದು ಮುಖ್ಯವಾಗುತ್ತದೆ.

ನಾಯಿ ಸಾಕುವುದು ಬೇಡ ಎನ್ನುವ ಮಹಿಳೆಯದ್ದು ಬೇರೆಯದೇ ಕತೆ. ಆಕೆಯ 'ಡ್ರೀಮ್ಸ್ ವಿಥಿನ್ ಕಾನ್‌ಫ್ಲಿಕ್ಟ್' ಎಂದರೆ 'ನಾಯಿ ಸಾಕುತ್ತಿಲ್ಲವೆಂದಾದರೆ ನಮ್ಮ ಮೇಲೆ ಹೊರೆ ಇರುವುದಿಲ್ಲ ಎಂದರ್ಥ. ನಾವು ಯಾವಾಗ ಬೇಕಾದರೂ ಪ್ರವಾಸಕ್ಕೆ ತೆರಳಬಹುದು, ಸಾಹಸ ಕೃತ್ಯಗಳಲ್ಲಿ ಪಾಲ್ಗೊಳ್ಳಬಹುದು'. ಅಂದರೆ ಇಲ್ಲಿ ಕಲಹ ಇರುವುದು ನಾಯಿಯನ್ನು ಸಾಕಬೇಕೇ ಬೇಡವೇ ಎಂಬ ವಿಷಯಕ್ಕೆ ಎಂದು ಮೇಲ್ನೋಟಕ್ಕೆ ಅನ್ನಿಸುತ್ತದಾದರೂ ವಾಸ್ತವವಾಗಿ ಅದು ಇರುವುದು 'ಸಾಹಸ ಮತ್ತು ಪ್ರವಾಸಮಯ ಜೀವನ' ಹಾಗೂ 'ಮನೆಯಲ್ಲಿರುವುದು- ಕುಟುಂಬವನ್ನು ನಿರ್ವಹಿಸುವುದು' ಎಂಬ ಸಂಗತಿಗಳ ನಡುವೆ.

ಇಂತಹ ತಂತ್ರಗಳನ್ನು ಬಳಸಿ ಎಚ್ಚರದಿಂದ ಕಲಹ ಮಾಡುವುದರಿಂದ ಹಾಗೂ ಆ ಸಂದರ್ಭದಲ್ಲಿ ಪರಸ್ಪರರನ್ನು ಸೂಕ್ಷ್ಮವಾಗಿ ಗಮನಿಸುವುದರಿಂದ, ನರಳುವಿಕೆಯ ದಾಂಪತ್ಯದಿಂದ ಹೊರಬಂದು ಸುಖೀ ದಾಂಪತ್ಯದತ್ತ ಹೊರಳಲು ಅನುವಾಗುತ್ತದೆ. ಈ ದಿಸೆಯಲ್ಲಿ ನಡೆಸಿದ ಒಂದು ಅಧ್ಯಯನದಲ್ಲಿ ಪಾಲ್ಗೊಂಡಿದ್ದ 600 ದಂಪತಿಗಳ ಪೈಕಿ ಶೇ 87ರಷ್ಟು ಮಂದಿಗೆ ಇಂತಹದ್ದೊಂದು ಸಕಾರಾತ್ಮಕ ಪರಿವರ್ತನೆ ಸಾಧ್ಯವಾಯಿತು ಎಂದು ವರದಿಯಾಗಿದೆ!

ಸಂಬಂಧಗಳೇ ಸಮಾಜದ ತಳಹದಿ ಎಂಬುದು ಗಮನಿಸಬೇಕಾದ ವಿಷಯ. ರಚನಾತ್ಮಕವಾಗಿ ಜಗಳ ಆಡುವುದು ಹೇಗೆ ಎಂಬುದನ್ನು ನಾವು ಮನೆಯಲ್ಲಿ ಸರಿಯಾಗಿ ಕಲಿತರೆ, ಹೊರಗೂ ಅದನ್ನು ಅಳವಡಿಸಿಕೊಳ್ಳಲು ಸಾಧ್ಯವಷ್ಟೆ! ಆಗ ಘರ್ಷಣೆಗಳ ನಡುವೆಯೂ ಸಂಬಂಧಗಳ ಸುಧಾರಣೆ ಸಾಧ್ಯವಾಗುತ್ತದೆ. ಆ ಮೂಲಕ ಸಮಾಜದ ಕನಸುಗಳೂ ಉಳಿಯುತ್ತವೆ!

ಲೇಖಕಿ: ಮನೋವೈದ್ಯೆ

ಚುರುಮುರಿ



ನೋಟ್ ಕೋಚಿಂಗ್!

• ತುರುವೇಕೆರೆ ಪ್ರಸಾದ್

'ನಮ್ ಧೂಪದ ಮಾದೇವ್ರು ತಮ್ ರಾಜಕೀಯ ಎದುರಾಳಿ ದೊಡ್ ಚುನಾವಣೆನಾಗ್ ಗೆದ್‌ಬುಟ್ರೆ ರಾಜೀನಾಮೆ ಕೊಟ್‌ಬುಡ್ತೀನಿ ಅಂತ ಸವಾಲ್ ಹಾಕಿದ್ರಂತೆ. ಕೊಡ್ಲೇ ಇಲ್ಲ ಅಲ್ವಾ?' ಹರಟೆಕಟ್ಟೇಲಿ ಗುದ್ಲಿಂಗ ಮಾತು ತೆಗೆದ.

'ನಾನ್ ರಾಜೀನಾಮೆ ಕೊಡಾಕಿಲ್ಲ ಅಂತ ಯೋಳವ್ರಲ್ಲ, ನೀನ್ಯಾಕ್ ಮತ್ ಅದ್ರು ಸಿಬ್ರು ಎಬ್ಬಿದೀಯ?' ಕೇಳಿದ ಮಾಲಿಂಗ.

'ಅವರು ಯೋಳಿರಾದು ನ್ಯಾಯವಾಗೇ ಐತೆ. ಸುಮ್ಕೆ ಪುಕ್ಸಟ್ಟೆ ಪ್ರಚಾರಕ್ ಅಂಗಂದಿರ್ತಾರೆ. ರಾಜಕೀಯ ಅಂದ್ಮೇಲೆ ಎಲ್ಲಾ ಸತ್ಯಹರಿಶ್ಚಂದ್ರನಂಗೆ, ರಾಮಚಂದ್ರನಂಗೆ ಇರ್ಬೇಕು ಅಂದ್ರೆ ಆಯ್ತದಾ?' ವಕಾಲತ್ತು ವಹಿಸಿದ ಕಲ್ಲೇಶಿ.

'ಹ್ಞಂ ಕಣ್ಲಾ, ಈಗ ರಾಜಕೀಯ ಸನ್ಯಾಸ ತಗಾತೀನಿ ಅಂತ ಯೋಳ್ದೋರೆಲ್ಲ ಆಮ್ಯಾಕೆ ನಂಗ್ ಎಂಎಲ್ಎ ಸೀಟಿರ್ಲಿ, ಎಂಡ್ರುಗೆ ಎಂಪಿ ಸೀಟಿರ್ಲಿ, ಮಗಂಗೆ ಮಂಡಳಿ ಸೀಟು ಸಿಗ್ಲಿ ಅಂತ ಕಾವ್ ಕಾವ್ ಅಂದ್ಕಂಡು ಹೋರಾಡಕಿಲ್ವಾ? ಇವರನ್ನ ರಾಜೀನಾಮೆ ಕೊಡಿ ಅಂತ ಯಾಕ್ ಜುಲ್ಮೆ ಮಾಡ್ಬೇಕು ಅಂತಿವ್ನಿ'.

'ಅಲ್ಲ ಕಣಲೇ, ಜನ ಹೊಸುಬ್ರು ಬರ್ಲಿ, ಹಳೆ ಜಿಡ್ಡು ತೊಳೀಲಿ ಅಂತ ತಾನೇ ವೋಟು ಹಾಕಿ ಗೆಲ್ಸೋದು'.

'ಅದು ಜನಗಳ ತಪ್ಪು ಕಣ್ಲಾ, ಮಾದೇವ್ರೇ ಕೇಳವ್ರಲ್ಲ, ನೀವ್ಯಾಕೆ ಬಟ್ಟೆ ಹರ್ಕಾತೀರಿ, ನಾವು ರಾಜಕೀಯದೋರೆಲ್ಲಾ ಒಂದೇ ಅಂತ'.

'ಅಂಗಾರೆ ಇನ್ ಏನೂ ಕೇಳೋ ಅಂಗೇ ಇಲ್ಲ ಬುಡು. ನಾವೆಲ್ಲಾ ಒಂದೇ ಅಂದ್‌ಮ್ಯಾಗೆ ಇನ್ ಕೇಳೋದೇನೈತೆ? ಹಿಂದಿನೋರ್ ಮಾಡಿದ್ದನ್ನೇ ಇವ್ರೂ ಮಾಡ್ತಾರೆ, ಅದೇ ನಾತ, ಅದೇ ಅನುಪಾತ. ಕಾವಲಿ ಬೇರೆ, ಹಿಟ್ಟು ಒಂದೇ ಅನ್ನೋ ಅಂಗಾಯ್ತು, ಯಾರ್ ಬುಟ್ರೂ ಹುಳಿದ್ವಾಸನೇ'.

'ಅಂಗಾರೆ ಮಾದೇವ್ರು ಒಂದು ಇಸ್ಕೂಲ್ ನಡುಸ್ಕಂಡು ಹೈಕ್ಳುಗೆ ನೀಟ್ ನೋಟು ಬರುಸ್ತಾವ್ರಲ್ಲ, ಅವರೆಲ್ಲಾ ಇದ್ನೇ ಕಲುತ್ಕೋಳ್ಳೋದಾ?'

'ಎಲ್ಲಾ ಮಾಡಾದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ ಅಲ್ವೇನ್ಲಾ? ನೀಟು ಕೋಚಿಂಗ್ ಜೊತೆಗೇ ನೋಟ್ ಕೋಚಿಂಗ್'.

'ಜನ ದುಡ್ಡಿದ್ದ ಗೇಣು ಬಟ್ಟೆನೂ ಹರ್ಕಬೇಕು ಬಿಡು'.

'ಹರ್ಕಳಕ್ಕೆ ಎಲ್ಲಿರುತ್ತೆ ಬಟ್ಟೆ, ಇವರೇ ಜನರನ್ನ ಬಟ್ಟೆ ಬಿಚ್ಚಿ ನಿಲ್ಸಿರ್ತಾರಲ್ಲ' ಎಂದ ಪರ್ಮೇಶಿ. ಎಲ್ಲಾ ಗೊಳ್ಳನೆ ನಕ್ಕರು.

ಸಂಗತ

ಬಿಡುಗಡೆಯತ್ತ ವೈಧವ್ಯದ ಪರಿಭಾಷೆ

ವಿಧವೆಯರು ಹಾಗೂ ದುರಾಚಾರಿ ಪತಿಯನ್ನು ತ್ಯಜಿಸಿದ ಮಹಿಳೆಯರಿಗೆ ಉದ್ಯೋಗ ಕಲ್ಪಿಸಿ ಅವರನ್ನು ಆರ್ಥಿಕವಾಗಿ ಸಬಲರನ್ನಾಗಿ ಮಾಡುವ ಕೆಲಸ ಆಗಬೇಕಿದೆ

• ಮಾಲತಿ ಪಟ್ಟಣಶೆಟ್ಟಿ

ಪರಿವರ್ತನೆಯು ಕಾಲಧರ್ಮದ ಮುಖ್ಯ ತತ್ವ. ಅದಕ್ಕೆ ಅನುಗುಣವಾಗಿ ವೈಧವ್ಯದ ಪರಿಕಲ್ಪನೆಗಳು ಸಹ ಕಾಲಾನುಕ್ರಮದಲ್ಲಿ ಬದಲಾಗುತ್ತಾ ಬಂದಿರುವುದನ್ನು ನಾವು ಕಾಣುತ್ತಿದ್ದೇವೆ. ವೈಧವ್ಯದ ಕಟ್ಟಲೆ ಪಾಲನೆಗೆ ಸಂಬಂಧಿಸಿದಂತೆ ಇದ್ದ ಕಠೋರವಾದ ನೀತಿ ನಿಯಮಗಳು ಈಗ ಮೃದುವಾಗಿವೆ. ವೈಚಾರಿಕತೆ ಮುನ್ನೆಲೆಗೆ ಬಂದಿದೆ. ಹೀಗೆ, ವೈಧವ್ಯಕ್ಕೆ ಸಂಬಂಧಿಸಿದಂತೆ ಇದ್ದ ಕಟ್ಟುಪಾಡುಗಳು ಕ್ರಮೇಣ ಕಳಚಿ ಮಾನವೀಯತೆಯತ್ತ ಸಾಗಿದ್ದು ಖುಷಿ ತರುವ ಸಂಗತಿ.

ಇಂದಿನ ಸಮಾಜದಲ್ಲಿ ಮಹಿಳೆಯು 'ವಿಧವೆ' ಎಂದು ಪ್ರತ್ಯೇಕವಾಗಿ ಕಾಣಿಸಿಕೊಳ್ಳದೆ, ಎಲ್ಲರೂ ಇರುವಂತೆಯೇ ಇದ್ದು ಜೀವನ ಸಾಗಿಸುತ್ತಿರುವುದನ್ನು ಗಮನಿಸುತ್ತಿದ್ದೇವೆ. ಕೇಶಮುಂಡನ ಮಾಡಿಸಿಕೊಂಡು, ಸನ್ಯಾಸಿನಿಯಂತೆ ಕೆಂಪು ಸೀರೆಯನ್ನುಟ್ಟು, ಸ್ತ್ರೀತ್ವದ ಎಲ್ಲ ಉಡುಗೆ-ತೊಡುಗೆಗಳಿಂದ ವಂಚಿತಳಾಗಿ, ಕಣ್ಣೀರು ಸುರಿಸುತ್ತಾ ಕತ್ತಲ ಕೋಣೆಯಲ್ಲಿ ಕುಳಿತಿರುತ್ತಿದ್ದ ಆ ಸ್ತ್ರೀ ಎಲ್ಲಿ, ಬಣ್ಣ ಬಣ್ಣದ ಸೀರೆಯುಟ್ಟು, ಹೂವು ಮುಡಿದು, ಕುಂಕುಮವಿಟ್ಟು, ಮಂಗಳಸೂತ್ರ ಧರಿಸಿ ಸಭೆ-ಸಮಾರಂಭಗಳಲ್ಲಿ, ಶುಭ ಕಾರ್ಯಗಳಲ್ಲಿ ಕಾಣಿಸಿಕೊಳ್ಳುತ್ತಿರುವ ಇಂದಿನ ಈ ವಿಧವಾ ಸ್ತ್ರೀ ಎಲ್ಲಿ? ಅಜಗಜಾಂತರದಷ್ಟು ಬದಲಾವಣೆ!

ಜೂನ್ 23 ಅನ್ನು ಅಂತರರಾಷ್ಟ್ರೀಯ 'ವಿಧವೆಯರ ದಿನ' ಎಂದು ಆಚರಿಸಲಾಗುತ್ತಿದೆ. ಅಂದರೆ, ಸಮಾಜದಲ್ಲಿ ವಿಧವೆಯರು ಇಂದಿಗೂ ಸಂಕಷ್ಟದಲ್ಲಿದ್ದಾರೆ ಎಂದಂತಾಯಿತು. ಅವರನ್ನು ಸಮಾಜದಲ್ಲಿ ಗೌರವದ ದೃಷ್ಟಿಯಿಂದ ಕಾಣಬೇಕು, ಸ್ವಾಭಿಮಾನ ತುಂಬಬೇಕು, ವೈಚಾರಿಕ ಮನೋಭಾವ ಬೆಳೆಸಬೇಕು, ಸರ್ಕಾರಗಳಾಗಲಿ, ಪ್ರಗತಿಪರ ವಿಚಾರಧಾರೆಯ ಸಂಘ–ಸಂಸ್ಥೆಗಳಾಗಲಿ ಸಹಾಯಹಸ್ತ ನೀಡಬೇಕು. ಇದು ಇಂತಹದ್ದೊಂದು ದಿನಾಚರಣೆಯ ಉದ್ದೇಶವಾಗಿದೆ.

ಚರಿತ್ರೆಯ ಪುಟಗಳನ್ನು ತಿರುವಿದರೆ, ವೇದ ಕಾಲದಲ್ಲಿ ಪುರುಷರಂತೆ ಸ್ತ್ರೀಯರಿಗೂ ಸರಿಸಮನಾದ ಶಿಕ್ಷಣ ನೀಡಲಾಗುತ್ತಿತ್ತು, ವಿಧವೆಯರಿಗೆ ಮರುಮದುವೆಯ ವ್ಯವಸ್ಥೆ ಇತ್ತು ಎಂಬಂತಹ ವಿವರಗಳು ಕಾಣಸಿಗುತ್ತವೆ. ಆ ನಂತರದ ಸ್ಮೃತಿ ಯುಗದ ಮನು ಮಹರ್ಷಿಯ ಆದೇಶಗಳ ಅನುಸಾರವಾಗಿ ಸ್ತ್ರೀಯರನ್ನು ಗೌಣದೃಷ್ಟಿಯಲ್ಲಿ ನೋಡುವ ಪರಿಪಾಟ ಆರಂಭವಾಯಿತು. ಪತಿಯ ಮರಣಾನಂತರ ಸತಿಯ ಮೇಲೆ ನಿರ್ದಯವಾದ ಕಟ್ಟಲೆಗಳನ್ನು ಹೇರಲಾಗಿತ್ತು. ಆಕೆಯ ಮುಖದರ್ಶನವೇ ಅಶುಭವೆಂದು ಧಾರ್ಮಿಕ ಆಚರಣೆ, ಮಂಗಳಕಾರ್ಯಗಳಲ್ಲಿ ಪ್ರವೇಶ ನೀಡಲಾಗುತ್ತಿರಲಿಲ್ಲ. ಆಸ್ತಿಯ ಹಕ್ಕನ್ನು ನೀಡದೆ ಎಷ್ಟೋ ಸಲ ಮನೆಯಿಂದ ಆಚೆಗೆ ಅಟ್ಟಿಬಿಡಲಾಗುತ್ತಿತ್ತು. ಆಗ ಆಕೆ ಭಿಕ್ಷೆ ಬೇಡುವ ಇಲ್ಲವೇ ವೇಶ್ಯಾವೃತ್ತಿಗೆ ಇಳಿಯುವ ದಾರುಣ ಸ್ಥಿತಿಗೆ ತಲುಪುತ್ತಿದ್ದಳು.

ಶತಮಾನಗಳು ಉರುಳಿದವು, ಸಮಾಜದಲ್ಲಿ ಆಮೂಲಾಗ್ರ ಪರಿವರ್ತನೆಗಳಾದವು. ರಾಜಾರಾಮ್ ಮೋಹನರಾಯ್, ಈಶ್ವರಚಂದ್ರ ವಿದ್ಯಾಸಾಗರ ಅವರಂಥ ಸಮಾಜ ಸುಧಾರಕರು 'ಸತಿಪದ್ಧತಿ'ಯ ನಿಷೇಧಕ್ಕಾಗಿ ಹೋರಾಡಿದ್ದರ ಫಲವಾಗಿ, ಆಗಿನ ಬ್ರಿಟಿಷ್ ಸರ್ಕಾರವು ಸತಿಪದ್ಧತಿಯನ್ನು ನಿಷೇಧಿಸಿತು. ವಿಧವೆಯರ ಮರುಮದುವೆಗೆ ಪೂರಕವಾಗಿ ಕಾಯ್ದೆಗಳನ್ನು ಜಾರಿಗೊಳಿಸಿತು. ವೈಚಾರಿಕತೆ ಮತ್ತು ವೈಜ್ಞಾನಿಕತೆ ಮುಂಚೂಣಿಯಲ್ಲಿದ್ದ 20ನೇ ಶತಮಾನದಲ್ಲಿ ಮಹಿಳಾಪರವಾದ ಹಲವಾರು ಸಮಾಜ ಸುಧಾರಕರ ಪ್ರಯತ್ನಗಳ ಭಾಗವಾಗಿ ಸ್ತ್ರೀ ಶಿಕ್ಷಣಕ್ಕೆ ಪ್ರಚಾರ ದೊರೆಯಿತು. ಮಹಿಳೆಯರಲ್ಲಿ ಈ ಸಂಬಂಧ ಜಾಗೃತಿ ಮೂಡಿತು. ಸ್ವಾತಂತ್ರ್ಯಕ್ಕಾಗಿ ನಡೆಸಿದ ನಿರಂತರ ಹೋರಾಟದ ಫಲವಾಗಿ ವಿಧವೆಯರು ಸುಶಿಕ್ಷಿತರಾಗಿ, ಉದ್ಯೋಗಸ್ಥರಾಗಿ ಸ್ವತಂತ್ರವಾಗಿ ಜೀವನ ನಡೆಸುತ್ತಾ ನೆಮ್ಮದಿಯಿಂದ ಬಾಳತೊಡಗಿದರು.



ಪ್ರಗತಿಪಥದಲ್ಲಿರುವ ಇಂದಿನ ಭಾರತದಲ್ಲಿ ವಿಧವೆಯರಿಗೆ ಸಂಬಂಧಿಸಿದಂತೆ, ಸಮಾಜಕ್ಕೆ ಕಳಂಕ ತರುವಂಥ ಕೆಲ ವಿದ್ಯಮಾನಗಳೂ ಚಾಲ್ತಿಯಲ್ಲಿವೆ. ಉತ್ತರಪ್ರದೇಶದಲ್ಲಿನ ಬೃಂದಾವನದಲ್ಲಾಗಲಿ, ಕಾಶಿಯಲ್ಲಾಗಲಿ ಆಶ್ರಯ ಪಡೆದ ಸಾವಿರಾರು ವಿಧವೆಯರ ಸ್ಥಿತಿ ಚಿಂತಾಜನಕವಾಗಿದೆ. ಊಟ, ಉಡುಗೆ, ಸೂಕ್ತ ವಸತಿ ವ್ಯವಸ್ಥೆ ಇಲ್ಲದ್ದರಿಂದ ಅವರು ಭಿಕ್ಷಾಟನೆ ಮಾಡುತ್ತಾ ಬೀದಿಗಳಲ್ಲಿ ವಾಸವಾಗಿದ್ದಾರೆ. ಅವರ ಇಂಥ ಹೀನಾಯ ಸ್ಥಿತಿಗೆ ಸರ್ಕಾರವಾಗಲಿ, ಸಮಾಜವಾಗಲಿ ಸ್ಪಂದಿಸದಿರುವುದು ಅತ್ಯಂತ ವಿಷಾದದ ಸಂಗತಿ. ವಿಧವೆಯರ ಸಂಕಟದ ಕಥೆಯ ಮುಂದುವರಿದ ಭಾಗ ಎಂಬಂತೆ, ಇಂದು ದೌರ್ಜನ್ಯಕ್ಕೆ ಒಳಗಾದ ಸತಿಯರು, ಪತಿಯನ್ನು ತೊರೆದ ಅನೇಕ ಪತ್ನಿಯರು ಏಕಾಂಗಿಯಾಗಿ ಜೀವನ ನಡೆಸುತ್ತಿದ್ದಾರೆ. ಆಧುನಿಕ ವಿಚಾರಧಾರೆಯ ಕೆಲವು ಮಹಿಳೆಯರು ವಿವಾಹವನ್ನು ನಿರಾಕರಿಸಿ, ಏಕಾಂಗಿಯಾಗಿ ಇರುವುದೇ ಮೇಲೆಂದು ಭಾವಿಸಿದ್ದಾರೆ. ಇಂಥವರೂ ಹಲವು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ.

ಅಂತರರಾಷ್ಟ್ರೀಯ 'ವಿಧವಾ ದಿನಾಚರಣೆ'ಯ ಈ ಸಂದರ್ಭದಲ್ಲಿ ಇಂದಿನ ಪ್ರಜ್ಞಾವಂತ ಸಮುದಾಯ ಬಯಸುವುದೆಂದರೆ, ವಿಧವೆಯರಿಗಾಗಿ ಹಾಗೂ ದುರಾಚಾರಿ ಪತಿಯನ್ನು ತ್ಯಜಿಸಿದ ಮಹಿಳೆಯರಿಗಾಗಿ ಸರ್ಕಾರವಾಗಲಿ, ಪ್ರಗತಿಪರ ಸೇವಕರಾಗಲಿ ಸಹಾನುಭೂತಿಯಿಂದ ಉದ್ಯೋಗಗಳನ್ನು ಕಲ್ಪಿಸಬೇಕು. ಈ ಮೂಲಕ ಅವರನ್ನು ಆರ್ಥಿಕವಾಗಿ ಸಬಲರನ್ನಾಗಿ ಮಾಡಬೇಕು. ಸುರಕ್ಷತೆಯನ್ನು ಖಾತರಿಗೊಳಿಸಿ, ಅವರಲ್ಲಿ ಧೈರ್ಯ ತುಂಬಬೇಕು. ಈ ದಿಸೆಯಲ್ಲಿ ಇಡೀ ಸಮಾಜವೇ ಸಕ್ರಿಯವಾಗಬೇಕಿದೆ.

ಒಟ್ಟಾರೆ, ಇಂದಿನ ನಮ್ಮ ಮಹಿಳೆಯರು ಸ್ವಾವಲಂಬಿಗಳಾಗಿ, ಸ್ವಾಭಿಮಾನದ ಬಾಳನ್ನು ಕಟ್ಟಿಕೊಳ್ಳಬೇಕಿದೆ. ಪರಂಪರಾಗತವಾಗಿ ಬಂದ ವೈಧವ್ಯದ ಪರಿಕಲ್ಪನೆ ಇಂದು ಅರ್ಥ ಕಳೆದುಕೊಂಡಿದೆಯಾದ್ದರಿಂದ, ಅದನ್ನು ಸಂಪೂರ್ಣವಾಗಿ ತ್ಯಜಿಸಿ ಮುನ್ನಡೆಯಬೇಕಿದೆ.

ವಾಚಕರ ವಾಣಿ

ಅಧಿಕಾರ ಕೇಂದ್ರದ ಸುತ್ತ ತಿರುಗುವವರು...

'ಯಾವುದೇ ಪಕ್ಷ ಅಥವಾ ಯಾವುದೇ ವ್ಯವಸ್ಥೆಯ ಪ್ರಭುತ್ವ ಇರಲಿ ಅದು ಬಯಸುವುದು ವಿಧೇಯತೆಯನ್ನು ಮಾತ್ರ. ಪ್ರಶ್ನಿಸುವ, ಪ್ರತಿಭಟಿಸುವ, ಸ್ವತಂತ್ರ ವಿಚಾರಧಾರೆಯನ್ನು ಪ್ರಭುತ್ವ ಸಹಿಸದು' ಎಂದಿದ್ದಾರೆ ವೆಂಕಟೇಶ ಮಾಚಕನೂರ (ವಾ.ವಾ., ಜೂನ್ 20). ಅಷ್ಟೇ ಅಲ್ಲ, ಯಾವುದೇ ವ್ಯವಸ್ಥೆಯ ಪ್ರಭುತ್ವಗಳು ತಮ್ಮ ಆಡಳಿತದ ಅನುಕೂಲಗಳು, ಸುಗಮ ಆಡಳಿತ ಹಾಗೂ ಭದ್ರ ವ್ಯವಸ್ಥೆಯನ್ನು ಮಾತ್ರ ಅಂತಿಮ ಗುರಿಯಾಗಿ ಇರಿಸಿಕೊಳ್ಳುತ್ತವೆ. ಆದರೆ ಪ್ರಜಾಪ್ರಭುತ್ವದ ಸೊಗಸು ಮತ್ತು ಅದಕ್ಕೆ ಇರುವ ಅನುಕೂಲ ಎಂದರೆ, ಪ್ರಭುತ್ವವು ಸರಿದಾರಿಯಲ್ಲಿ ನಡೆಯುವಂತೆ ನೋಡಿಕೊಳ್ಳುವ ಅವಕಾಶ ಪ್ರಜೆಗಳಿಗೆ ಇರುವುದು. ಆದ್ದರಿಂದಲೇ ಸ್ವತಂತ್ರ ಭಾರತದಲ್ಲಿ ಅದೆಷ್ಟೋ ಬಾರಿ ಪ್ರಭುತ್ವ ದಾರಿ ತಪ್ಪಿದೆ ಎನ್ನಿಸಿದಾಗ ಪ್ರಜೆಗಳು, ಸಾಮಾಜಿಕ ಸಂಘಟನೆಗಳು, ಸಮಾಜದ ಪ್ರಾಜ್ಞರು ಎಚ್ಚರಿಸಿ, ಕೇಳದಿದ್ದಾಗ ಚುನಾವಣೆಗಳಲ್ಲಿ ಅದಕ್ಕೆ ತಕ್ಕ ಉತ್ತರ ನೀಡಿರುವುದಿದೆ. ಸಾಹಿತಿಗಳು, ಸಾಮಾಜಿಕ ಸಂಘಟನೆಗಳು ನಿರಂತರವಾಗಿ ವಿರೋಧ ಪಕ್ಷದ ರೀತಿಯಲ್ಲಿ ಕೆಲಸ ಮಾಡಬೇಕು ಎಂದು ಸಾಹಿತಿ ಪಿ.ಲಂಕೇಶ್ ಹೇಳುತ್ತಿದ್ದರು.

ಆದರೆ ಇತ್ತೀಚಿನ ವರ್ಷಗಳಲ್ಲಿ ಸಾಹಿತಿಗಳಲ್ಲಿ ಕೆಲವರು 'ಆ' ಪಕ್ಷದಲ್ಲಿ ಇಲ್ಲವೇ 'ಈ' ಪಕ್ಷದಲ್ಲಿ ಗುರುತಿಸಿಕೊಂಡಿದ್ದು ಕಂಡುಬರುತ್ತಿದೆ. ಹಾಗಾಗಿ, ತಾವು ಬಯಸುವ ಪಕ್ಷದ ನೇತೃತ್ವದ ಸರ್ಕಾರ ಬಂದಾಗ ಅಕಾಡೆಮಿಗಳಲ್ಲಿ ಸ್ಥಾನಕ್ಕಾಗಿ ಹೋರಾಟ ನಡೆಸುವುದು, ಹಲವು ಸಾಮಾಜಿಕ ಸಂಘಟನೆಗಳು ಸರ್ಕಾರದ ಭಾಗವಾಗಲು ಹಾತೊರೆಯುತ್ತಿರುವುದನ್ನು ಕಾಣುತ್ತಿದ್ದೇವೆ. ಹಿಂದೆ ಜಿ.ಎಸ್.ಶಿವರುದ್ರಪ್ಪ, ಗೋಪಾಲಕೃಷ್ಣ ಅಡಿಗರಂಥವರ ಕಾಲದಲ್ಲಿ ಅಕಾಡೆಮಿಗಳ ಅಧ್ಯಕ್ಷ ಪದವಿ ಪಡೆದವರು ಆ ನಂತರ ತಮ್ಮ ಸಾಹಿತ್ಯ ಕೃಷಿಯನ್ನು, ವೃತ್ತಿಯನ್ನು ಮುಂದುವರಿಸಿಕೊಂಡು ಹೋಗುತ್ತಿದ್ದರು. ಈಗ ಹಾಗಲ್ಲ, ಒಂದು ಬಾರಿ ಅಕಾಡೆಮಿ ಅಧ್ಯಕ್ಷ ಸ್ಥಾನ ಸಿಕ್ಕಿಬಿಟ್ಟರೆ ಆ ನಂತರ ತಮಗೆ ಅವಕಾಶ ಮಾಡಿಕೊಟ್ಟ ಪಕ್ಷದ ವಕ್ತಾರರಾಗಿ ಬಿಡುತ್ತಾರೆ. ಅಧಿಕಾರ ಕೇಂದ್ರದ ಸುತ್ತ ತಿರುಗಾಡಲು ತೊಡಗುತ್ತಾರೆ. ಹಾಗಿದ್ದಾಗ ಅಂತಹವರು ಪಕ್ಷದ ಕಚೇರಿಗಲ್ಲ, ಸರ್ಕಾರದ ಮುಖ್ಯಸ್ಥರು ಕರೆದರೆ ಎಲ್ಲಿಗೆ ಹೋಗಲೂ ಸಿದ್ಧರಿರುತ್ತಾರೆ. ಇವರಿಂದ ಇನ್ನೇನನ್ನು ನಿರೀಕ್ಷಿಸಲು ಸಾಧ್ಯ?

ಹೊಸಮನೆ ವೆಂಕಟೇಶ, ಟಿ.ನರಸೀಪುರ

ಪರೀಕ್ಷಾ ಅಕ್ರಮಕ್ಕೆ ಬೀಳಲಿ ಕಡಿವಾಣ

ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳಿಗೆ ರಾಜ್ಯದಲ್ಲಿ ನಡೆಸುವ ಸಾಮಾನ್ಯ ಪ್ರವೇಶ ಪರೀಕ್ಷೆಗಳಲ್ಲಿ (ಸಿಇಟಿ) 'ಕೃತಕ ಬುದ್ಧಿಮತ್ತೆ' (ಎಐ) ತಂತ್ರಜ್ಞಾನ ಅಳವಡಿಸಿಕೊಂಡು ಪರೀಕ್ಷಾ ಅಕ್ರಮಕ್ಕೆ ಅಂತ್ಯ ಹಾಡಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಮುಂದಾಗಿರುವುದು ಸ್ವಾಗತಾರ್ಹ. ನೀಟ್ ಪರೀಕ್ಷೆಯಲ್ಲೂ ಅಕ್ರಮ ನಡೆದಿರುವ ಆರೋಪ ಕೇಳಿಬಂದಿರುವುದು ಆತಂಕಕಾರಿ ಬೆಳವಣಿಗೆ. ಪರೀಕ್ಷೆ ಅಕ್ರಮದಲ್ಲಿ ಕೆಲವು ಅಭ್ಯರ್ಥಿಗಳು, ಪ್ರಾಧಿಕಾರದ ಕೆಲ ವ್ಯಕ್ತಿಗಳು, ಕೆಲವು ಕೋಚಿಂಗ್ ಕೇಂದ್ರಗಳು, ಪ್ರಾಧ್ಯಾಪಕರು ಹಾಗೂ ಪ್ರಶ್ನೆಪತ್ರಿಕೆ ಮುದ್ರಿಸುವ ಮುದ್ರಣಾಲಯಗಳ ಮಾಲೀಕರು, ಸಿಬ್ಬಂದಿ ಸಹ ಪಾಲ್ಗೊಳ್ಳುವ ಸಾಧ್ಯತೆ ಇರುತ್ತದೆ.

ಯಾವುದೇ ತಂತ್ರಜ್ಞಾನ ಬಂದರೂ ಹೊಲಸು ವಿಧಾನದ ಮೂಲಕ ಹಣ ಮಾಡುವ ದುರುಳರು ಅಕ್ರಮಕ್ಕೆ ಹೊಸ ಹೊಸ ವಿಧಾನಗಳನ್ನು ಕಂಡುಕೊಳ್ಳುತ್ತಾರೆ. ಇದನ್ನು ಸಂಪೂರ್ಣವಾಗಿ ನಿಯಂತ್ರಿಸಲು ಇರುವುದು ಒಂದೇ ದಾರಿ. ಅದು, ಇಂತಹವರ ವಿರುದ್ಧ ಶೀಘ್ರಗತಿಯಲ್ಲಿ ವಿಚಾರಣೆ ನಡೆಸಿ ಕಠಿಣಾತಿ ಕಠಿಣ ಶಿಕ್ಷೆ ವಿಧಿಸುವುದು. ಹಾಗಾದರೆ ಮಾತ್ರ ಪರೀಕ್ಷಾ ಅಕ್ರಮಕ್ಕೆ ಕಡಿವಾಣ ಬೀಳುತ್ತದೆ.

ಲಕ್ಷ್ಮೀಕಾಂತ್ ಕೊಟ್ಟಾರ ಚೌಕಿ, ಮಂಗಳೂರು

ಟೋಲ್ ಪಾವತಿ: ದೋಷಕ್ಕೆ ಯಾರು ಹೊಣೆ?

ಟೋಲ್ ನಾಕಗಳಲ್ಲಿ ಫಾಸ್ಟ್‌ಟ್ಯಾಗ್ ಮೂಲಕ ಹಾದು ಹೋಗುವ ವಾಹನ ಸವಾರರಿಗೆ ಯಾವ ಟೋಲ್ ನಾಕದಿಂದ ಎಷ್ಟು ಗಂಟೆಗೆ ಅವರ ವಾಹನ ಸಾಗಿಹೋಗಿದೆ ಮತ್ತು ಅದಕ್ಕಾಗಿ ಅವರ ಖಾತೆಯಿಂದ ಎಷ್ಟು ಹಣ ಕಡಿತಗೊಂಡಿದೆ ಎಂಬ ಮಾಹಿತಿಯುಳ್ಳ ಸಂದೇಶವು ನೋಂದಾಯಿಸಿದ ಮೊಬೈಲ್ ನಂಬರಿಗೆ ತತ್‌ಕ್ಷಣವೇ ಬರುವ ವ್ಯವಸ್ಥೆ ಮಾಡಲಾಗಿರುವುದು ಅತ್ಯಂತ ಪ್ರಶಂಸಾರ್ಹ. ಆದರೆ, ಇತ್ತೀಚಿನ ದಿನಗಳಲ್ಲಿ ಕೆಲವು ವಾಹನಗಳು ಟೋಲ್ ನಾಕವನ್ನು ಪ್ರವೇಶಿಸದ ಹೊರತಾಗಿಯೂ ಅವುಗಳ ಮಾಲೀಕರ ಖಾತೆಯಿಂದ ಹಣ ಕಡಿತಗೊಂಡ ಸಂದೇಶ ಫೋನ್‌ಗಳಿಗೆ ಬರುತ್ತಿದೆ.

ಇಂತಹದ್ದೊಂದು ಖುದ್ದು ಅನುಭವ ಇತ್ತೀಚೆಗೆ ನನಗೂ ಆಯಿತು. ನಮ್ಮ ವಾಹನವು ಮಂಗಳೂರಿನಲ್ಲಿ ನಿಂತಿದ್ದಾಗ, ಬೆಂಗಳೂರಿನ ಅತ್ತಿಬೆಲೆ ಟೋಲ್ ನಾಕದಲ್ಲಿ ಚಲಿಸಿದ್ದು, ಖಾತೆಯಿಂದ ₹ 35 ಕಡಿತಗೊಳಿಸಲಾಗಿದೆ ಎಂಬ ಫೋನ್ ಸಂದೇಶ ಬಂದಿತು. ಇದರಲ್ಲಿ ಫಾಸ್ಟ್‌ಟ್ಯಾಗ್‌ಗೆ ಸಂಬಂಧಪಟ್ಟ ಬ್ಯಾಂಕ್‌ಗಳ ನಿರ್ಲಕ್ಷ್ಯವೋ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ತಾಂತ್ರಿಕ ದೋಷವೋ ತಿಳಿಯದಾಗಿದೆ. ಬ್ಯಾಂಕ್‌ಗಳಿಗೆ ಕರೆ ಮಾಡಿದರೆ, ದೂರು ದಾಖಲಿಸಿದ 15ರಿಂದ 18 ದಿನಗಳ ಒಳಗಾಗಿ ಹಣ ಹಿಂದಿರುಗಿಸಲಾಗುವುದು ಎಂದು ಸಮಜಾಯಿಷಿ ನೀಡುತ್ತಾರೆ. ಒಂದು ವಾಹನಕ್ಕೆ ಒಂದೇ ಫಾಸ್ಟ್‌ಟ್ಯಾಗ್ ನಿಯಮ ಜಾರಿಯಾದ ನಂತರವೂ ಈ ಗೊಂದಲ ಉಂಟಾಗುತ್ತಿರುವುದು ಆಶ್ಚರ್ಯ ಹಾಗೂ ಅನುಮಾನಕ್ಕೆ ಎಡೆ ಮಾಡಿಕೊಡುತ್ತಿದೆ. ಪ್ರಾಧಿಕಾರ ಇತ್ತ ಗಮನಹರಿಸಬೇಕಿದೆ.

ಮಹೇಶ್ ಸಿ.ಎಚ್., ಶಿವಮೊಗ್ಗ

ಮೊದಲು ಕನ್ನಡವನ್ನು ಗಟ್ಟಿಗೊಳಿಸೋಣ

'ಕರ್ನಾಟಕದಲ್ಲಿ ನೆಲೆಸಿರುವ ಹೊರ ರಾಜ್ಯದವರು ಕನ್ನಡವನ್ನು ಕಡ್ಡಾಯವಾಗಿ ಕಲಿಯಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸಮಾರಂಭವೊಂದರಲ್ಲಿ ಹೇಳಿದ್ದಾರೆ (ಪ್ರ.ವಾ., ಜೂನ್ 21). ಕರ್ನಾಟಕದ ಪ್ರಸ್ತುತ ಪರಿಸ್ಥಿತಿಯು ಹೊರಗಿನವರು ಕನ್ನಡ ಕಲಿಯುವುದಕ್ಕಿಂತ ಮುಖ್ಯವಾಗಿ ನಮ್ಮ ಜನರು ಕನ್ನಡದಲ್ಲಿ ಮಾತನಾಡಲು ಕಲಿಯಬೇಕು ಎಂಬಂತೆ ಇದೆ. ಮಾತೃಭಾಷೆ ಕನ್ನಡ ಆಗಿದ್ದರೂ ಹೆಚ್ಚಿನ ಪೋಷಕರು ತಮ್ಮ ಮಕ್ಕಳು ಇಂಗ್ಲಿಷ್‌ನಲ್ಲಿ ಮಾತ್ರ ಮಾತನಾಡಬೇಕೆಂದು ಬಯಸುತ್ತಾರೆ ಮತ್ತು ಅವರೊಂದಿಗೆ ಇಂಗ್ಲಿಷ್‌ನಲ್ಲೇ ಸಂಭಾಷಣೆ ನಡೆಸುತ್ತಾರೆ. ಎಷ್ಟೋ ಮಕ್ಕಳಿಗೆ ಮಾತೃಭಾಷೆ ಕನ್ನಡದಲ್ಲಿ ಓದಲು ಮತ್ತು ಬರೆಯಲು ಬರುವುದೇ ಇಲ್ಲ. ದಿನನಿತ್ಯದ ಕೆಲಸಕಾರ್ಯಗಳಿಗೆ ಮತ್ತು ನಿರ್ದಿಷ್ಟ ಉದ್ದೇಶಗಳಿಗೆ ಇಂಗ್ಲಿಷ್ ಅಗತ್ಯವಾಗಬಹುದು. ಈ ಪರಿಸ್ಥಿತಿಯಲ್ಲಿ ಹೊರಗಿನ ಜನರು ಲಾಭವನ್ನು ಪಡೆದುಕೊಳ್ಳುತ್ತಿದ್ದಾರೆ ಮತ್ತು ಅವರ ಭಾಷೆ ಅಥವಾ ಇಂಗ್ಲಿಷ್ ಅನ್ನು ಬಳಸಲು ಪ್ರಯತ್ನಿಸುತ್ತಿದ್ದಾರೆ.

ನಮ್ಮ ಭಾಷೆಯನ್ನು ಪ್ರೀತಿಸುವ ಉತ್ಕಟ ಆಕಾಂಕ್ಷೆ ನಮ್ಮಲ್ಲಿ ಅಂತರ್ಗತವಾಗಿ ಇರಬೇಕು ಮತ್ತು ಪೋಷಕರು ಸಹ ಅದಕ್ಕೆ ಪ್ರೋತ್ಸಾಹ ಕೊಡಬೇಕು. ಮೊದಲು ಕರ್ನಾಟಕದಲ್ಲಿ ಕನ್ನಡವನ್ನು ಗಟ್ಟಿಗೊಳಿಸುವಲ್ಲಿ ನಾವು ಯಶಸ್ವಿಯಾದರೆ ಹೊರಗಿನವರು ಕನ್ನಡವನ್ನು ಕಲಿಯುವಂತೆ ಮಾಡಲು ಸಾಧ್ಯವಾಗಬಹುದು.

ಕಡೂರು ಫಣಿಶಂಕರ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಭಾಷೆ, ಸಾಹಿತ್ಯ, ಸಂಸ್ಕೃತಿಗೆ ಸಂಬಂಧಿಸಿದ ಅಕಾಡೆಮಿ, ಪ್ರಾಧಿಕಾರಗಳು ಸರ್ಕಾರದ ಅಡಿಯಾಳುಗಳು ಎಂದು ಭಾವಿಸುವುದು ಸರಿಯೇ?

ಸಾಂಸ್ಕೃತಿಕ ಸ್ವಾಯತ್ತೆಯ ಮೇಲೆ ಸರ್ಕಾರದ ಹಸ್ತಕ್ಷೇಪ ಸಲ್ಲದು



ಸಿದ್ದರಾಮಯ್ಯ ಅವರ ನೇತೃತ್ವದ ಸರ್ಕಾರವು ಅಕಾಡೆಮಿಗಳ ಸ್ವಾಯತ್ತತೆಯನ್ನು ಒಪ್ಪಿಕೊಂಡಿದೆ. ಪ್ರಾಧಿಕಾರಗಳಿಗೆ ಈಗಾಗಲೇ ಶಾಸನಾತ್ಮಕ ಅಧಿಕಾರವಿದೆ. ಆದರೆ 2005ರ ಅಕಾಡೆಮಿಯ ನಿಯಮಾವಳಿಯ ತಿದ್ದುಪಡಿ ಇನ್ನೂ ಆಗಿಲ್ಲ. ಆದ್ದರಿಂದ ಉದ್ರೇಕಾತ್ಮಕ ಅಂತಿಮ ಉವಾಚಗಳ ಬದಲು ಸರ್ಕಾರವೇ ಒಪ್ಪಿರುವ ಸಾಂಸ್ಕೃತಿಕ ಸ್ವಾಯತ್ತೆ ಪರಿಕಲ್ಪನೆಯ ಪರಿಣಾಮಕಾರಿ ಅನುಷ್ಠಾನಕ್ಕೆ ಮುಂದಾಗಬೇಕು. ಸರ್ಕಾರದ ಸಾಂಸ್ಕೃತಿಕ ಅಂಗಸಂಸ್ಥೆಗಳೂ ಸ್ವಾಯತ್ತೆಯ ಸಮರ್ಥನೆಯ ಹೊಣೆಗಾರಿಕೆ ಹೊರಬೇಕು. ಏನಾದರೂ ಬಿಕ್ಕಟ್ಟು ಉಂಟಾದರೆ ಸರ್ಕಾರವು ಸಂವಾದದ ಸೌಜನ್ಯ ತೋರಬೇಕು

• ಬರಗೂರು ರಾಮಚಂದ್ರಪ್ಪ

ನಮ್ಮ ಸರ್ಕಾರಗಳು ಆರಂಭದಿಂದಲೂ ಸಾಂಸ್ಕೃತಿಕ ಸ್ವಾಯತ್ತೆಯ ಪರವಾದ ನಿಲುವನ್ನು ತಾಳಿರುವ ದೊಡ್ಡ ಪರಂಪರೆಯೇ ಇದೆ. ಈ ಸ್ವಾಯತ್ತ ಪರಂಪರೆಯನ್ನು ಈಗಿನ ಸರ್ಕಾರ ಮತ್ತು ಅದರ ಸಾಂಸ್ಕೃತಿಕ ಅಂಗಸಂಸ್ಥೆಯ ಪದಾಧಿಕಾರಿಗಳು ಸರಿಯಾಗಿ ಅರ್ಥಮಾಡಿಕೊಂಡರೆ ವಿವಾದವೇ ಇರುವುದಿಲ್ಲ.

ಸಾಂಸ್ಕೃತಿಕ ಸ್ವಾಯತ್ತ ಪರಂಪರೆಯ ಮೂಲವನ್ನು ನಾಲ್ವಡಿ ಕೃಷ್ಣರಾಜ ಒಡೆಯರ ಆಡಳಿತಾವಧಿಯಲ್ಲಿ ಕಾಣಬಹುದು. ಆಗ ಒಂದು ಸ್ವತಂತ್ರ ಸಾಹಿತ್ಯ ಸಂಸ್ಥೆಯನ್ನು ಸ್ಥಾಪಿಸುವುದು ನಾಲ್ವಡಿಯವರ ಆಶಯವಾಗಿತ್ತು. ಅನಂತರ 1914ರಲ್ಲಿ ನಡೆದ ಮೈಸೂರು ಸಂಸ್ಥಾನದ 'ಸಂಪದಭ್ಯುದಯ ಸಮಾಜ'ದ ವಾರ್ಷಿಕ ಸಮ್ಮೇಳನದಲ್ಲಿ ನಿರ್ಣಯ ಮಾಡಲಾಗುತ್ತದೆ. ಆ ನಿರ್ಣಯ ಹೀಗಿದೆ: 'ಕನ್ನಡ ಭಾಷೆಯಲ್ಲಿ ವಿವಿಧ ಗ್ರಂಥಗಳನ್ನು ರಚಿಸುವವರ ಪ್ರೋತ್ಸಾಹಕ್ಕಾಗಿ ಸ್ವತಂತ್ರಾಧಿಕಾರವುಳ್ಳ ಪರಿಷತ್ತು ಇರಬೇಕು. ಸರ್ಕಾರ ವಿಶೇಷ ಸಹಾಯ ಮಾಡಬೇಕು' –ಈ ನಿರ್ಣಯದಲ್ಲಿ 'ಸ್ವತಂತ್ರಾಧಿಕಾರವುಳ್ಳ ಪರಿಷತ್ತು' ಎಂಬುದನ್ನು ಗಮನಿಸಬೇಕು. ನಿರ್ಣಯ ಸ್ವೀಕಾರದ ನಂತರ ಡಿವಿಜಿ, ಎಚ್.ವಿ. ನಂಜುಂಡಯ್ಯ ಮುಂತಾದ ವಿದ್ವಾಂಸರೇ ಚರ್ಚಿಸಿ ರೂಪುರೇಷೆಗಳನ್ನು ಸಿದ್ಧ ಮಾಡುತ್ತಾರೆ. ರಾಜರು, ದಿವಾನರು ಮಧ್ಯ ಪ್ರವೇಶಿಸುವುದಿಲ್ಲ. 1915ಕ್ಕೆ 'ಸಾಹಿತ್ಯ ಪರಿಷತ್ತು' ನಾಲ್ವಡಿಯವರಿಂದಲೇ ಚಾಲನೆಗೊಳ್ಳುತ್ತದೆ.

ಕೇಂದ್ರ ಸರ್ಕಾರದ 'ಸಾಹಿತ್ಯ ಅಕಾಡೆಮಿ' ಆರಂಭವಾದದ್ದು 1954ರ ಮಾರ್ಚ್ 12ರಂದು. ಆಗ ಪ್ರಧಾನಮಂತ್ರಿಯವರೇ ಅಕಾಡೆಮಿಯ ಅಧ್ಯಕ್ಷರು. ಪ್ರಧಾನಮಂತ್ರಿ ಜವಾಹರಲಾಲ್ ನೆಹರೂ ಅವರು ಮೊದಲ ಸಭೆಯಲ್ಲಿಯೇ ಹೀಗೆ ಹೇಳಿದ್ದರು: 'ಈ ಅಕಾಡೆಮಿಯ ಅಧ್ಯಕ್ಷನಾಗಿ ನಾನು ನಿಮಗೆ ಪ್ರಾಮಾಣಿಕವಾಗಿ ಹೇಳುತ್ತೇನೆ; ನನ್ನ ಕೆಲಸದಲ್ಲಿ ಪ್ರಧಾನಿ ಹಸ್ತಕ್ಷೇಪ ಮಾಡುವುದಿಲ್ಲ'. ತಮ್ಮ ಮಾತಿನಂತೆ ಅವರು ಪ್ರಧಾನಿಯ ಅಧಿಕಾರವನ್ನು ಇಲ್ಲಿ ಚಲಾಯಿಸಲಿಲ್ಲ. ಮೊದಲ ಸಭೆಯಲ್ಲೇ ಅಕಾಡೆಮಿಗೆ ಸರ್ಕಾರದ ನೇಮಕಾತಿ ಬೇಡ ಎಂದು ನಿರ್ಣಯಿಸಲಾಯಿತು.

ಕರ್ನಾಟಕದಲ್ಲಿ ಸಾಹಿತ್ಯ ಅಕಾಡೆಮಿಯ ಸ್ಥಾಪನೆಯಾದದ್ದು 1961ರಲ್ಲಿ. ಆರಂಭದ ಅನೇಕ ವರ್ಷ ಶಿಕ್ಷಣ ಸಚಿವರೇ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದರು. 1976ರಲ್ಲಿ ಯುವಜನ ಖಾತೆ ಸಚಿವರು ಅಧ್ಯಕ್ಷ ಆಗಿದ್ದರು. 1977ರ ಜೂನ್ ಒಂದರಂದು ದೇವರಾಜ ಅರಸು ನೇತೃತ್ವದ ಸರ್ಕಾರವು ಸಾಹಿತ್ಯದ ಜೊತೆಗೆ ಜಾನಪದ ಮತ್ತು ಯಕ್ಷಗಾನ, ಸಂಗೀತ ಮತ್ತು ನೃತ್ಯ ಹಾಗೂ ನಾಟಕ ಅಕಾಡೆಮಿಗಳ ರಚನೆಗೆ ನಿರ್ಧಾರ ಕೈಗೊಂಡು ಆದೇಶ ಹೊರಡಿಸಿತು. ಆಗ ಅಕಾಡೆಮಿಗಳ ಕಾರ್ಯ ಸ್ವರೂಪದ ಬಗ್ಗೆ ಒಂದು 'ಸನ್ನದು' (Charter) ಸಿದ್ಧವಾಯಿತು. 1978ರ ನವೆಂಬರ್ 28ರಲ್ಲಿ ಈ ಅಕಾಡೆಮಿಗಳ ಸ್ಥಾಪನೆಗೆ ವಿವರವಾದ ಆದೇಶ ಮತ್ತು ಸನ್ನದು ಬಿಡುಗಡೆಯಾಯಿತು. ಪ್ರತೀ ಅಕಾಡೆಮಿಯ ಆದೇಶದ ಶೀರ್ಷಿಕೆಯಲ್ಲೇ 'ಸ್ವಾಯತ್ತ ಸನ್ನದು' (Character of Autonomy) ಎಂದು ನಮೂದಿಸಲಾಗಿದೆ. ಆದೇಶದ ಕ್ರಮಾಂಕ ನಾಲ್ಕರಲ್ಲಿ ಹೀಗೆ ಸ್ಪಷ್ಟಪಡಿಸಲಾಗಿದೆ: 'ಮೇಲೆ ಸೂಚಿಸಿದ ಅಕಾಡೆಮಿಗಳು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯಕ್ಕೆ ಸಲಹೆ ಸೂಚಿಸುವ ಮಂಡಲಿಗಳಂತಿದ್ದವು. ಅಕಾಡೆಮಿಗಳು ಸ್ವತಂತ್ರವಾಗಿ ಕಾರ್ಯನಿರ್ವಹಿಸುವ ಉದ್ದೇಶದಿಂದ ಮೇಲ್ಕಂಡ ಅಕಾಡೆಮಿಗಳನ್ನು ಸ್ವಾಯತ್ತ ಸಂಸ್ಥೆಗಳನ್ನಾಗಿ ಬೇರ್ಪಡಿಸಲಾಯಿತು'. ಅಂದರೆ ದೇವರಾಜ ಅರಸು ನೇತೃತ್ವದ ಸರ್ಕಾರವು ಇಲಾಖೆಯಿಂದ ಬೇರ್ಪಡಿಸಿ, ಅಕಾಡೆಮಿಗಳಿಗೆ ಸಂಪೂರ್ಣ ಸ್ವಾಯತ್ತೆಯನ್ನು ನೀಡಿತು.

ಮುಂದೆ ಕೆಲವು ಘಟನೆಗಳು ನಡೆದವು. ತಮಗಿದ್ದ ಸ್ವಾಯತ್ತೆಯನ್ನು ಬಳಸಿಕೊಂಡು ಒಂದು ಅಕಾಡೆಮಿಯ ಅಧ್ಯಕ್ಷರು ತಮಗೆ ಅರವತ್ತು ವರ್ಷ ತುಂಬಿದೆಯೆಂದು ಅರವತ್ತು ಜನಕ್ಕೆ ಪ್ರಶಸ್ತಿ ಕೊಟ್ಟರು. ಇನ್ನೊಬ್ಬರು ಏಕೀಕರಣದ ಸುವರ್ಣ ಸಂಭ್ರಮ ಎಂದು ಲೆಕ್ಕ ಮೀರಿ ಪ್ರಶಸ್ತಿ ಕೊಟ್ಟರು. ಇಂಥ ನಡೆಯನ್ನು ಆಕ್ಷೇಪಿಸಿದವರಲ್ಲಿ ನಾನೂ ಒಬ್ಬ. ಪ್ರಶಸ್ತಿ ನೀಡಿಕೆಯ ಸಂಖ್ಯೆಗೆ ನಿರ್ದಿಷ್ಟ ನಿಯಮ ಕಡ್ಡಾಯವಾಗಬೇಕೆಂದು ಆರಂಭವಾದ ಚರ್ಚೆ ಹೊಸ ನಿಯಮಾವಳಿಯ ರೂಪ ತಾಳಿ ಸರ್ಕಾರವು 2005ರ ಮಾರ್ಚ್ 14ರಂದು ಹೊಸ ನಿಯಮಾವಳಿಯನ್ನು ಜಾರಿಗೆ ತಂದಿತು. ಸರ್ಕಾರದ ಅಧಿಕಾರಿಗಳ ನಿಯಂತ್ರಣಕ್ಕೆ ಹೆಚ್ಚು ಅವಕಾಶ ಕಲ್ಪಿಸಿಕೊಂಡ ಈ ನಿಯಮಾವಳಿಯು ದೇವರಾಜ ಅರಸು ಕಾಲದ ಸಾಂಸ್ಕೃತಿಕ ಸ್ವಾಯತ್ತೆ ಪರಿಕಲ್ಪನೆಯನ್ನು ಮೊಟಕು ಮಾಡಿತು.

ಮುಂದೆ ಸಿದ್ದರಾಮಯ್ಯ ಅವರ ನೇತೃತ್ವದ ಸರ್ಕಾರ ಬಂದಾಗ ನನ್ನ ನೇತೃತ್ವದಲ್ಲಿ ಸಮಗ್ರ ಸಾಂಸ್ಕೃತಿಕ ನೀತಿ ನಿರೂಪಣೆಗಾಗಿ ಸಮಿತಿಯನ್ನು ನೇಮಿಸಿತು. ನಮ್ಮ ಸಮಿತಿಯು ನೀಡಿದ ಅನೇಕ ಶಿಫಾರಸುಗಳಲ್ಲಿ ಅಕಾಡೆಮಿಗಳ ರಚನೆಗೆ ಹೊಸ ವಿಧಾನವನ್ನು ಸೂಚಿಸಿ 2005ರ ನಿಯಮಾವಳಿಗೆ ತಿದ್ದುಪಡಿ ಮಾಡಿ ಸ್ವಾಯತ್ತೆಯ ಮರುಸ್ಥಾಪನೆ ಮಾಡಬೇಕೆಂಬುದೂ ಒಂದು ಶಿಫಾರಸಾಗಿತ್ತು. ಸರ್ಕಾರವು ಎಚ್.ಕೆ. ಪಾಟೀಲರ ಅಧ್ಯಕ್ಷತೆಯಲ್ಲಿ ಉಪಸಮಿತಿ ರಚಿಸಿತು. ಈ ಸಮಿತಿಯು ನಮ್ಮ ಶಿಫಾರಸುಗಳಲ್ಲಿ ಮುಖ್ಯವಾದ ಕೆಲವನ್ನು ಒಪ್ಪಿತು. ಮಂತ್ರಿಮಂಡಲವೂ ಮುದ್ರೆಯೊತ್ತಿತು. 2017ರ ಅಕ್ಟೋಬರ್ 10ರಂದು ಸರ್ಕಾರದ ಅಧಿಕೃತ ಆದೇಶವೂ ಹೊರಟಿತು. ಅದರಲ್ಲಿ ಅಕಾಡೆಮಿಗಳಿಗೆ ಸಂಬಂಧಿಸಿದಂತೆ ಹೀಗೆ ನಮೂದಿಸಲಾಗಿದೆ:

'ಅಕಾಡೆಮಿಯ ಅಂಗರಚನೆ/ನಿಯಮಾವಳಿ ಮತ್ತು ಹಣಕಾಸಿನ ನಿರ್ವಹಣೆಯಲ್ಲಿ ನಿಯಮಾನುಸಾರ ಕಾರ್ಯಕ್ರಮಗಳನ್ನು ರೂಪಿಸುವ ಮತ್ತು ಅನುಷ್ಠಾನ ಮಾಡುವ ಸ್ವಾಯತ್ತೆಯನ್ನು ಅಕಾಡೆಮಿಗಳಿಗೆ ಒದಗಿಸುವುದು'.

ಅಂದರೆ ಸಿದ್ದರಾಮಯ್ಯ ಅವರ ನೇತೃತ್ವದ ಸರ್ಕಾರವೂ ಅಕಾಡೆಮಿಗಳ ಸ್ವಾಯತ್ತೆಯನ್ನು ಒಪ್ಪಿಕೊಂಡಿದೆ. ಪ್ರಾಧಿಕಾರಗಳಿಗೆ ಈಗಾಗಲೇ ಶಾಸನಾತ್ಮಕ ಅಧಿಕಾರವಿದೆ. ಆದರೆ 2005ರ ಅಕಾಡೆಮಿಯ ನಿಯಮಾವಳಿಯ ತಿದ್ದುಪಡಿ ಇನ್ನೂ ಆಗಿಲ್ಲ. ಆದ್ದರಿಂದ ಉದ್ರೇಕಾತ್ಮಕ ಅಂತಿಮ ಉವಾಚಗಳ ಬದಲು ಸರ್ಕಾರವೇ ಒಪ್ಪಿರುವ ಸಾಂಸ್ಕೃತಿಕ ಸ್ವಾಯತ್ತೆ ಪರಿಕಲ್ಪನೆಯ ಪರಿಣಾಮಕಾರಿ ಅನುಷ್ಠಾನಕ್ಕೆ ಮುಂದಾಗಬೇಕು. ಸರ್ಕಾರದ ಸಾಂಸ್ಕೃತಿಕ ಅಂಗಸಂಸ್ಥೆಗಳೂ ಸ್ವಾಯತ್ತೆಯ ಸಮರ್ಥನೆಯ ಹೊಣೆಗಾರಿಕೆ ಹೊರಬೇಕು. ಏನಾದರೂ ಬಿಕ್ಕಟ್ಟು ಉಂಟಾದರೆ ಸರ್ಕಾರವು ಸಂವಾದದ ಸೌಜನ್ಯ ತೋರಬೇಕು. ಈ ಮಾದರಿಯ ನಡವಳಿಕೆಗೆ ಸಂಕೋಚದಿಂದಲೇ ನನ್ನ ಎರಡು ಅನುಭವಗಳನ್ನು ಹಂಚಿಕೊಳ್ಳ ಬಯಸುತ್ತೇನೆ.

ಒಂದು: ನಾನು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷನಾಗಿದ್ದ ಕಾಲ. ಆಗ ಎಸ್. ಬಂಗಾರಪ್ಪನವರು ಮುಖ್ಯಮಂತ್ರಿ. ಅವರು ಸತ್ಯಸಾಯಿಬಾಬ ಅವರಿಗೆ ಎರಡು ಕೋಟಿ ರೂಪಾಯಿ ಅನುದಾನ ಕೊಡುವುದಾಗಿ ಪ್ರಕಟಿಸಿದರು. ಅವರಿಂದಲೇ ಅಧ್ಯಕ್ಷನಾಗಿ ನೇಮಕಗೊಂಡ ನಾನು ಅದನ್ನು ವಿರೋಧಿಸಿ ಪತ್ರಿಕೆಗಳಿಗೆ ಬರೆದೆ. 'ಮುಖ್ಯಮಂತ್ರಿ' ಬಂಗಾರಪ್ಪನವರ ಸೌಜನ್ಯ ಎಷ್ಟು ಹಿರಿದಾಗಿತ್ತೆಂದರೆ, ನನ್ನನ್ನು ಆಹ್ವಾನಿಸಿದರು. ತಾವು ಹಣ ಕೊಟ್ಟಿರುವುದು ಸಾಯಿಬಾಬ ಅವರ ಸ್ವಂತಕ್ಕಲ್ಲ, ಬಡವರಿಗೆ ಅನುಕೂಲವಾಗುವ ಅವರ ಆಸ್ಪತ್ರೆಗೆ ಎಂದು ಮನವರಿಕೆ ಮಾಡಿದರು. 'ಇಷ್ಟರ ಮೇಲೆ ನಿಮ್ಮ ಅಭಿಪ್ರಾಯ ನಿಮ್ಮದು ನನಗೆ ಬೇಸರವಿಲ್ಲ' ಎಂದು ಹೇಳಿದ್ದರು.


ಎರಡು: ಎಸ್.ಎಂ. ಕೃಷ್ಣ ಅವರು ಮುಖ್ಯಮಂತ್ರಿಯವರಾಗಿದ್ದಾಗ ನಾನು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ. ನಾನು ಕೊಟ್ಟ ಕೆಲವು ರಚನಾತ್ಮಕ ಸಲಹೆಗಳು ಜಾರಿಯಾಗದೆ ಇದ್ದಾಗ ರಾಜೀನಾಮೆ ಕೊಡಲು ಮುಂದಾಗಿ ಒಂದು ದೀರ್ಘ ಪತ್ರ ಬರೆದು ಮುಖ್ಯಮಂತ್ರಿಯವರ ವಿಶೇಷಾಧಿಕಾರಿ ಪ್ರಕಾಶ್ ಅವರ ಕೈಗೆ ಕೊಟ್ಟು ಬಂದೆ. ರಾತ್ರಿ ಹತ್ತೂವರೆಗೆ 'ಮುಖ್ಯಮಂತ್ರಿ' ಕೃಷ್ಣ ಅವರು ನನಗೆ ಫೋನ್ ಮಾಡಿ ಬೆಳಿಗ್ಗೆ ತಿಂಡಿಗೆ ಬರಲು ಆಹ್ವಾನಿಸಿದರು. ಬೆಳಿಗ್ಗೆ ಹೋದಾಗ 'ನಾನು ಮೂಲತಃ ಸಮಾಜವಾದಿ; ಅದಕ್ಕೆ ವಿರುದ್ಧವಾದ ಸನ್ನಿವೇಶದಲ್ಲಿ ಮುಖ್ಯಮಂತ್ರಿ ಆಗಿದ್ದೇನೆ' ಎಂದು ಮಾತು ಆರಂಭಿಸಿ ಆಡಳಿತದ ಅಡೆ ತಡೆಗಳನ್ನು ವಿವರಿಸಿದರು. ರಾಜೀನಾಮೆ ಕೊಡಬೇಡಿ ಎಂದರು. ಅನಂತರ ನನ್ನ ಸಲಹೆಯಂತೆ ಕನ್ನಡ ಮಾಧ್ಯಮದವರಿಗೆ ಮೀಸಲಾತಿಯನ್ನೂ ಒಳಗೊಂಡಂತೆ ಅನೇಕ ಕ್ರಮಗಳಿಗೆ ಕಾರಣರಾದರು.

ಈ ಎರಡು ಪ್ರಸಂಗಗಳು ಸರ್ಕಾರದ ಸೌಜನ್ಯ ಮತ್ತು ಸಂವಾದಕ್ಕೆ ಸಾಕ್ಷಿಯಾಗಿವೆ. ಸಾಂಸ್ಕೃತಿಕ ಸ್ವಾಭಿಮಾನ ಮತ್ತು ಸರ್ಕಾರದ ಸೌಜನ್ಯ- ಎರಡಕ್ಕೂ ಪ್ರಜಾಸತ್ತಾತ್ಮಕ ಸಂವಾದ ಸಾಧ್ಯವಿದ್ದರೆ ಸ್ವಾಯತ್ತೆಗೆ ಧಕ್ಕೆಯಾಗದು.

ಲೇಖಕ: ಸಾಹಿತಿ

ಪ್ರಜಾವಾಣಿ ಚರ್ಚೆ

ಮಂಡಿಯೂರಿ ತುತ್ತೂರಿ ಊದಿದ ಕಸಿವಿಸಿ



ಸಾಹಿತಿಗಳು ಈ ಪ್ರಮಾಣದಲ್ಲಿ ಸ್ಥಾನ–ಸಂಗದ ಚಪಲದಲ್ಲಿ ಚಡಪಡಿಸುತ್ತಿದ್ದರೆ ಇದರ ಗಂಧ ಗಾಳಿಯೂ ಇಲ್ಲದ ರಾಜಕಾರಣಿಗೆ ಏನನಿಸಬೇಡ? ಶಿವಕುಮಾರರು ಒರಟು ಹೇಳಿಕೆ ಮೂಲಕ ಅನಾವರಣಗೊಳಿಸಿದ್ದು ಈ ವಾಸ್ತವವನ್ನು. ಆದರೆ, ಅವರು ಇದೇ ಸಮಯದಲ್ಲಿ ಸಾಹಿತ್ಯ ಸಂಸ್ಕೃತಿ ಬಗ್ಗೆ ಲವಲೇಶ ಅರಿವಿಲ್ಲದ ರಾಜಕಾರಣಿ ಎಂತಹ ಅಪಾಯಕಾರಿ ಮನಃಸ್ಥಿತಿಯಲ್ಲಿರುತ್ತಾನೆ ಎಂಬುದನ್ನೂ ತೋರಿಸಿಕೊಟ್ಟಿದ್ದಾರೆ

• ಕೆ.ಪಿ. ಸುರೇಶ

ಕರ್ನಾಟಕ ಘನ ಸರ್ಕಾರದ ಉಪಮುಖ್ಯಮಂತ್ರಿಯೂ ಆಗಿರುವ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಡಿ.ಕೆ. ಶಿವಕುಮಾರ್ ಅವರು ಕಾಂಗ್ರೆಸ್ ಕಚೇರಿಯಲ್ಲಿ ನಡೆಸಿದ ಸಭೆಯು ಈಗ ಅವರ ಕತ್ತಿಗೆ ಹೆಬ್ಬಾವಿನಂತೆ ಸುತ್ತಿಕೊಂಡಿದೆ. ಇದನ್ನು ಶಿವಕುಮಾರರ ಸ್ವಭಾವ ದೋಷ ಎಂಬಂತೆ ಬಿಂಬಿಸುವುದು ಸರಳೀಕರಣ. ಆಳುವ ಪಕ್ಷ ಪಿಸುಮಾತಲ್ಲಿ ಹೇಳುವುದನ್ನು ಅವರು ಒರಟು ನುಡಿಗಟ್ಟಿನಲ್ಲಿ ಹೇಳಿದ್ದಾರೆ.

ಸಾಹಿತ್ಯ, ಸಾಂಸ್ಕೃತಿಕ ಕ್ಷೇತ್ರದವರು ಮತ್ತು ಪ್ರಭುತ್ವದ ಸಂಬಂಧದ ಬಗ್ಗೆ ಇರುವ ನೈತಿಕ ಶೀಲದ ಲಕ್ಷ್ಮಣ ರೇಖೆ ಈಗ ಮತ್ತೊಮ್ಮೆ ಹೆಡೆ ಎತ್ತಿದೆ.

'ಕವಿಗಳು ಜಗತ್ತಿನ ಅಘೋಷಿತ ಶಾಸಕರು' ಎಂದು ಶೆಲ್ಲಿ 19ನೇ ಶತಮಾನದಲ್ಲಿ ಘೋಷಿಸಿದ್ದ. ಅಲೆಕ್ಸಾಂಡರ್ ತನ್ನ ಕಾಲದ ಖ್ಯಾತ ತತ್ವಶಾಸ್ತ್ರಜ್ಞನಲ್ಲಿ ಹೋಗಿ, 'ನನ್ನಿಂದ ಏನು ಸಹಾಯ ಬೇಕು , ಹೇಳಿ' ಎಂದನಂತೆ. ಓದುತ್ತಾ ಕೂತಿದ್ದ ಆ ತತ್ವಜ್ಞ, 'ಸ್ವಲ್ಪ ಆಕಡೆ ನಿಲ್ಲು ಅಷ್ಟು ಸಾಕು, ನೀನು ಸೂರ್ಯನ ಬೆಳಕಿಗೆ ಅಡ್ಡ ನಿಂತಿದೀಯಾ' ಎಂದನಂತೆ. ಶೆಲ್ಲಿಯ ಸ್ಫೂರ್ತಿಯನ್ನೇ ಮುಂದೊತ್ತಿ ಕುವೆಂಪು, ರಾಜಕಾರಣದ ಹುಸಿ ದೌಲಿಗೆ ಝಾಡಿಸಿ ಬರೆದದ್ದನ್ನು ಶಿವಕುಮಾರ್ ಆದಿಯಾಗಿ ನಮ್ಮ ರಾಜಕಾರಣಿಗಳು ನೆನಪಿನಲ್ಲಿಟ್ಟುಕೊಳ್ಳಬೇಕು.

'ಅಖಂಡ ಕರ್ನಾಟಕ/ ಅಲ್ತೊ ನಮ್ಮ ನಾಲ್ಕು ದಿನದ ರಾಜಕೀಯ ನಾಟಕ/ ಇಂದು ಬಂದು ನಾಳೆ ಸಂದು / ಹೋಹ ಸಚಿವ ಮಂಡಲ... ನೃಪತುಂಗನೇ ಚಕ್ರವರ್ತಿ/ ಪಂಪನಲ್ಲಿ ಮುಖ್ಯಮಂತ್ರಿ/ ರನ್ನ ಜನ್ನ ನಾಗವರ್ಮ/ ರಾಘವಾಂಕ ಹರಿಹರ/ ಬಸವೇಶ್ವರ ನಾರಣಪ್ಪ/ ಸರ್ವಜ್ಞ ಷಡಕ್ಷರ/ ಸರಸ್ವತಿಯೆ ರಚಿಸಿದೊಂದು/ ನಿತ್ಯ ಸಚಿವ ಮಂಡಲ... ಎಂದು ಹೇಳುವ ಕುವೆಂಪುರವರು, ನಾಡಿಗೆ ಯಾರೆಲ್ಲ ಶ್ರೇಷ್ಠರು ಎಂದು ನಿದರ್ಶನಗಳನ್ನು ನೀಡುತ್ತಾರೆ. ಅರಸರ ಸ್ತುತಿ ಗೀತೆ ಬರೆಯಲು ಕುವೆಂಪು ನಿರಾಕರಿಸಿದ್ದೂ ಜನಜನಿತ.

ಅಧಿಕಾರ ಕೇಂದ್ರದ ಜೊತೆ ಸಾಹಿತಿಯ ಸಂಬಂಧದ ವಿನ್ಯಾಸದ ಬಗ್ಗೆ ಇದು ಹೇಳುತ್ತದೆ. ಆದರೆ ಇಂಥಾ ಕತೆಗಳ ಸಂಖ್ಯೆ ಕಡಿಮೆ ಎಂಬುದನ್ನು ನಾವು ಮರೆಯಬಾರದು. ರಾಜರ ಆಶ್ರಯದಲ್ಲಿ ಸಾರ್ಥಕ್ಯ ಕಂಡ ಕವಿಗಳ ಗುಂಪೇ ಜಗತ್ತಿನಾದ್ಯಂತ ಇದೆ... 'ಪೊಯೆಟ್ ಲಾರೆಟ್' ಎಂಬ ಹುದ್ದೆ ಇಂಗ್ಲೆಂಡಿನಲ್ಲಿತ್ತು. ಉಳಿದೆಡೆಯೂ ಇತ್ತು. ಇದರಾಚೆಗೆ ಜನರ ನಡುವೆಯೇ ಇದ್ದು ರಾಜ ಸಮ್ಮಾನಕ್ಕೆ ಲಜ್ಜೆಪಟ್ಟು ದೂರವಿದ್ದವರ ಘನತೆಯನ್ನು ಹೇಗೆ ಗ್ರಹಿಸಬೇಕು?

ಕೇರಳದಲ್ಲಿ ರಾಜನೊಬ್ಬ ಕವಿಗಳಿಗೆ ಇನಾಮು ಕೊಡುತ್ತಾನೆ ಎಂದು ಒಬ್ಬ ಆಸ್ಥಾನಕ್ಕೆ ಹೋಗಿ 'ಕವನ ವಾಚಿಸಲೇ' ಎಂದು ಕೇಳಿದನಂತೆ. ರಾಜ ಠೀವಿಯಲ್ಲಿ ಒಪ್ಪಿಗೆ ಕೊಟ್ಟ. ಕವಿ ಪುಂಗವ, 'ದೀಪಸ್ತಂಭಂ ಮಹಾಶ್ಚರ್ಯಂ...' ಎಂಬ ಸಾಲು ಓದಿದ್ದೇ ರಾಜ, 'ಅದರಲ್ಲೇನಿದೆ ಆಶ್ಚರ್ಯ?' ಎಂದು ಕೇಳಿದನಂತೆ. ಈ ಅಕ್ಷರ ದಾರಿದ್ರ್ಯದ ಕವಿ ಉಗುಳು ನುಂಗಿ, ಎರಡನೇ ಸಾಲು ಓದಿದನಂತೆ. 'ಎನಕ್ಕುಂ ಕಿಟ್ಟಣಂ ಪಣಂ' ಅಂದರೆ 'ಜೀಯಾ ನನಗೆ ಕಾಸು ಬೇಕು' ಎಂದು ಕವಿ ಉಸುರಿದನಂತೆ.

ಇಲ್ಲಿಯೂ ಈಗ 'ಎನಕ್ಕುಂ ಕಿಟ್ಟಣಂ ಪಣಂ ಸ್ಥಾನಂ...' (ನನಗೂ ಬೇಕು ಹಣ ಮತ್ತು ಸ್ಥಾನ) ಎಂದು ಉರು ಹಚ್ಚುವುದನ್ನು ನಾವು ಕೇಳಿಸಿಕೊಳ್ಳುತ್ತಿದ್ದೇವೆ. ಬಲಪಂಥೀಯ ಎಂದು ಕರೆಯುವ ಕೋಮು ಪೂರ್ವಗ್ರಹ, ಹುಸಿ ಶ್ರೇಷ್ಠತೆಯ ಅಮಲಿನ ಸಿದ್ಧಾಂತಕ್ಕೆ ಅಬ್ಬರದ ಕೊರಳಾಗುವ ಕವಿ, ಲೇಖಕರೇನೂ ಭಿನ್ನರಲ್ಲ. ಬಿಜೆಪಿ ಸರ್ಕಾರದ ಅವಧಿಯಲ್ಲಿ ಅಕಾಡೆಮಿ–ಪ್ರಾಧಿಕಾರದ ಅಧ್ಯಕ್ಷರಾಗಿದ್ದ ಹೆಚ್ಚಿನವರು, ಸರ್ಕಾರದ ಧೋರಣೆಯನ್ನೂ, ಪೂರ್ವಗ್ರಹ, ಹುಸಿ ವಿತಂಡ ಸಿದ್ಧಾಂತದ ವಿಸ್ತರಣೆಯನ್ನಷ್ಟೇ ಮಾಡಿದ್ದು. ಬಹುತೇಕ ಆಕ್ಷೇಪವಿರುವುದು ಜನಪರವೆಂದು ಬಗೆಯುವ, ಸಾಂವಿಧಾನಿಕ ಮೌಲ್ಯಗಳ ಬಗ್ಗೆ ಕಕ್ಕುಲಾತಿ ತೋರುವ ಬರಹಗಾರರು ಬಿಜೆಪಿಯೇತರ ಸರ್ಕಾರ ಬಂದಾಗ ಇನ್ನು ಹತ್ತಿರ ಹೋಗುವ ಬಗೆಯ ಬಗ್ಗೆ. ಇದು ನೈತಿಕ ಶೀಲದ ಲಕ್ಷ್ಮಣ ರೇಖೆಯ ಪ್ರಶ್ನೆ. ಅಕಾಡೆಮಿ, ಮತ್ತಿತರ ಸದಸ್ಯತ್ವಗಳನ್ನು ಸ್ವರ್ಗೋಪಮ ಸ್ಥಾನವೆಂದು ಬಗೆದು ಅದಕ್ಕಾಗಿ ಹೋರಾಡುತ್ತಿರುವುದನ್ನು ಕಂಡರೆ ಚೋದ್ಯ ಆಗುತ್ತದೆ. ಕಳೆದ ಹತ್ತು ವರ್ಷಗಳಲ್ಲಿ ಹೀಗೆ ಸದಸ್ಯರಾದವರ ಹೆಸರು ನೆನಪಿದೆಯಾ ಎಂದು ಕೇಳಿ ನೋಡಿ. ಹೋಗಲಿ ಅಕಾಡೆಮಿ ಪ್ರಶಸ್ತಿ ಪಡೆದ ಹತ್ತು ಕೃತಿಗಳನ್ನು ಹೆಸರಿಸಿ ಎಂದು ಕೇಳಿ ನೋಡಿ.

ಈ ಚಪಲ ಇಷ್ಟೇಕೆ ಹಬ್ಬಿತು; ಸಾಹಿತಿಗಳು ಈ ಪ್ರಮಾಣದಲ್ಲಿ ಸ್ಥಾನ–ಸಂಗದ ಚಪಲದಲ್ಲಿ ಚಡಪಡಿಸುತ್ತಿದ್ದರೆ ಇದರ ಗಂಧ ಗಾಳಿಯೂ ಇಲ್ಲದ ರಾಜಕಾರಣಿಗೆ ಏನನಿಸಬೇಡ? ಶಿವಕುಮಾರರು ಒರಟು (ಕ್ರೂಡ್) ಹೇಳಿಕೆ ಮೂಲಕ ಅನಾವರಣಗೊಳಿಸಿದ್ದು ಈ ವಾಸ್ತವವನ್ನು. ಆದರೆ, ಅವರು ಇದೇ ಸಮಯದಲ್ಲಿ ಸಾಹಿತ್ಯ ಸಂಸ್ಕೃತಿ ಬಗ್ಗೆ ಲವಲೇಶ ಅರಿವಿಲ್ಲದ ರಾಜಕಾರಣಿ ಎಂತಹ ಅಪಾಯಕಾರಿ ಮನಃಸ್ಥಿತಿಯಲ್ಲಿ ಇರುತ್ತಾನೆ ಎಂಬುದನ್ನೂ ತೋರಿಸಿಕೊಟ್ಟಿದ್ದಾರೆ. ಕರ್ನಾಟಕದ ರಾಜಕೀಯ ಧುರೀಣರಿಗೆ ಸಾಹಿತಿ ಕಲಾವಿದರ ಬಗ್ಗೆ ಅಪಾರ ಗೌರವವಿತ್ತು. ನಮ್ಮನ್ನು ಎಚ್ಚರಿಸುವ, ಮುನ್ನಡೆಸುವ ಶಕ್ತಿ ಇವರು ಎಂಬ ಎಚ್ಚರದ ಆದರ ಅವರಿಗಿತ್ತು. ಕನ್ನಡದ ಹಿರಿಯ ಲೇಖಕರ ಜೊತೆ ಹಳೆ ತಲೆಮಾರಿನ ರಾಜಕಾರಣಿಗಳ ಫೋಟೊಗಳಲ್ಲಿ ಕಾಣಿಸಿದ್ದ 'ಬಾಡಿ ಲಾಂಗ್ವೇಜ್' ಗಮನಿಸಿದರೆ ಇದು ಗೊತ್ತಾಗುತ್ತದೆ.

ತ.ಸು. ಶ್ಯಾಮರಾಯರು ತಮ್ಮ ಹಳೆ ವಿದ್ಯಾರ್ಥಿಗಳಿಗೆ ವರ್ಷಕ್ಕೊಮ್ಮೆ ಊಟ ಹಾಕುತ್ತಿದ್ದರು. ಬಂಗಾರಪ್ಪ, ನಜೀರ್ ಸಾಬರಂಥವರು ಬಂದು ಊಟ ಮಾಡುತ್ತಿದ್ದರು. ಶ್ಯಾಮರಾಯರು, 'ಏನು ಮಗೂ ಚೆನ್ನಾಗಿದೀಯ?' ಎಂದು ವಿಚಾರಿಸುತ್ತಿದ್ದರಂತೆ. ಒಮ್ಮೆಯೂ ಈ ಜೀವ ಶಿಷ್ಯಂದಿರಲ್ಲಿ ಏನನ್ನೂ ಕೇಳಲಿಲ್ಲ.


ಇವೆಲ್ಲಾ ಮನೋ ಧರ್ಮಕ್ಕೆ ಸಂಬಂಧಿಸಿದ್ದು. ನಾರ್ವೆಯ ನುಟ್ ಹ್ಯಾಂಪ್ಸನ್ ಎಂಬ ಲೇಖಕ ದಾಸ್ತೋವಸ್ಕಿಯ ಉತ್ತರಾಧಿಕಾರಿ ಎಂದೇ ಖ್ಯಾತಿ ಪಡೆದಿದ್ದ. ನೊಬೆಲ್ ಪ್ರಶಸ್ತಿಯೂ ಬಂದಿತ್ತು. ಆತನಿಗೇನು ಬಡಿಯಿತೋ, ಆತ ಹಿಟ್ಲರನ ಸ್ತುತಿಕಾರನಾದ. ನಾರ್ವೆಯನ್ನು ಹಿಟ್ಲರ್ ಆಕ್ರಮಿಸಿದಾಗ ಸ್ವಾಗತಿಸಿದ. ಆತನಿಗೆ ನೀಡಿದ ಸಕಲ ಪ್ರಶಸ್ತಿ ಸನ್ಮಾನಗಳನ್ನು ನಾರ್ವೆ ಯುದ್ಧಾನಂತರ ಕಿತ್ತುಕೊಂಡಿತು. ನುಟ್ ಹ್ಯಾಂಪ್ಸನ್ ಮಾನಸಿಕ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದ. ಕಾಲದ ತೀರ್ಪು ಅದು.

ಪ್ರಭುತ್ವದ ಎದುರು ಸೆಣಸಿ ಜೈಲುಪಾಲಾದ, ಹುತಾತ್ಮರಾದ ಕವಿಗಳ, ಲೇಖಕರ ಪಟ್ಟಿ ಇದೆ. ಅಂಥಾದ್ದೇನೂ ಆಗದು ಎಂಬ 'ಭರವಸೆ'ಯ ಭರತವರ್ಷದಲ್ಲಿ ಆಳುವವನ ಜೊತೆಗಿನ ಸಂಬಂಧವನ್ನು ಈ ಸೆಲ್ಫಿ ಯುಗದಲ್ಲಿ ಪುನರ್ ನಿರ್ವಚಿಸಲಾಗುತ್ತಿದೆ.

ನಾಲ್ಕು ದಶಕಗಳ ಹಿಂದೆ ಕರ್ನಾಟಕದಲ್ಲಿ ಅಭೂತಪೂರ್ವ ಸಾಹಿತ್ಯ, ಸಾಮಾಜಿಕ ಬದ್ಧತೆಯ ಮಥನವೊಂದು ನಡೆಯಿತು. ಬಂಡಾಯದ ಇತಿ-ಮಿತಿಗಳೇನಿದ್ದರೂ ಅದು ತೋರಿದ ಸೂಚಿಗಳು ಗಮನಾರ್ಹ. ಆಮೇಲೆ ಕನ್ನಡ ಜಡತ್ವದೆಡೆಗೆ ಸಾಗಿ ಸ್ವಸಂತೃಪ್ತ/ ಸ್ವರತಿ ಸುಖ–ಸ್ವಕುಚಮರ್ದನದ ಲೋಲುಪತೆಯಲ್ಲಿ ಮಗ್ನವಾಗಿದೆಯೇ ಎಂಬ ಪ್ರಶ್ನೆ ಎದುರಾಗಿದೆ.

ಇನ್ನು ಅನುಷ್ಠಾನಯೋಗ್ಯವಾಗಿ ಒಂದು ಸಲಹೆ; ಈ ಅಕಾಡೆಮಿ ಸಿಂಡಿಕೇಟ್ ಇತ್ಯಾದಿಗಳಿಗೆ ನಾಮಕರಣಗೊಳಿಸಲು ಒಂದು ಸ್ವಾಯತ್ತ ಆಯ್ಕೆ ಸಮಿತಿಯನ್ನು ಸರ್ಕಾರ ಸ್ಥಾಪಿಸುವುದು ವಿಹಿತ. ಅದು ಎಷ್ಟು ಪಾರದರ್ಶಕವಾಗಿರುತ್ತದೆ ಎಂಬುದು ಬೇರೆ ಮಾತು. ಸರ್ಕಾರದ ಕನಿಷ್ಠ ಮರ್ಜಿಯಲ್ಲಿ ಇಲ್ಲದ ಒಂದು ಮಾದರಿಯಾದರೂ ಸೃಷ್ಟಿಯಾಗಬಹುದು.

ಲೇಖಕ: ಸಾಮಾಜಿಕ ಕಾರ್ಯಕರ್ತ



'ನಾಡಪ್ರಭು ಕೆಂಪೇಗೌಡ' ಪಾತ್ರದಲ್ಲಿ ಧನಂಜಯ

ಟಿ.ಎಸ್. ನಾಗಾಭರಣ ಅವರ ನಿರ್ದೇಶನದ ಸಿನಿಮಾದಲ್ಲಿ ನಟ ಧನಂಜಯ ನಟಿಸುತ್ತಿದ್ದಾರೆ ಎನ್ನುವ ಸುಳಿವು ಮೊದಲೇ ಸಿಕ್ಕಿತ್ತು. ಬೆಂಗಳೂರು ನಿರ್ಮಾತೃ ಕೆಂಪೇಗೌಡರ ಕುರಿತಾದ 'ನಾಡಪ್ರಭು ಕೆಂಪೇಗೌಡ' ಎಂಬ ಸಿನಿಮಾಗೆ ನಾಗಾಭರಣ ಅವರು ಆ್ಯಕ್ಷನ್ ಕಟ್ ಹೇಳಲಿದ್ದು, ಇದೀಗ ಚಿತ್ರದ ಫಸ್ಟ್‌ಲುಕ್ ಬಿಡುಗಡೆಯಾಗಿದೆ.

ಬಹುನಿರೀಕ್ಷಿತ ಐತಿಹಾಸಿಕ ಚಿತ್ರ ಇದಾಗಿದ್ದು, ಕೆಂಪೇಗೌಡರ ಜೀವನ ಚರಿತ್ರೆಯನ್ನು ಹೇಳುವ ಕಥೆ ಸಿನಿಮಾದಲ್ಲಿದೆ ಎಂದಿದೆ ಚಿತ್ರತಂಡ. ಚಿತ್ರಕ್ಕೆ ವಾಸುಕಿ ವೈಭವ್ ಸಂಗೀತ ಸಂಯೋಜನೆ ಮಾಡಲಿದ್ದು, ಅದ್ವೈತ ಗುರುಮೂರ್ತಿ ಮುಖ್ಯ ಛಾಯಾಗ್ರಾಹಕರಾಗಿದ್ದಾರೆ. ಚಿತ್ರವನ್ನು ಎಂ.ಎನ್.ಶಿವರುದ್ರಪ್ಪ ಮತ್ತು ಶುಭಂ ಗುಂಡಲ ಈಶ್ವರ ಎಂಟರ್‌ಟೈನ್‌ಮೆಂಟ್ ಬ್ಯಾನರ್ ಅಡಿಯಲ್ಲಿ ನಿರ್ಮಿಸಲಿದ್ದಾರೆ. ಚಿತ್ರದ ಚಿತ್ರೀಕರಣ ಸದ್ಯದಲ್ಲೇ ಆರಂಭವಾಗಲಿದೆ ಎಂದು ಚಿತ್ರತಂಡ ತಿಳಿಸಿದೆ.


'ಬಂಗಾರದ ಜಿಂಕೆ', 'ಜನುಮದ ಜೋಡಿ', 'ಕಲ್ಲರಳಿ ಹೂವಾಗಿ' ಸೇರಿದಂತೆ ಹಲವಾರು ಯಶಸ್ವಿ ಚಿತ್ರಗಳನ್ನು ನೀಡಿದ ನಿರ್ದೇಶಕ ಟಿ.ಎಸ್.ನಾಗಾಭರಣ ಅವರ ಎರಡು ದಶಕಗಳ ಕನಸಿನ ಕೂಸು ಈ ಸಿನಿಮಾ. ಕನ್ನಡ ಚಿತ್ರರಂಗದಲ್ಲಿ ಬಹಳಷ್ಟು ಸದ್ದು ಮಾಡಿರುವ ಜೀವನ ಚರಿತ್ರೆಯ ಕಥನ ಇದಾಗಿದೆ. ನಾಗಾಭರಣ ಅವರು ಹಲವು ವರ್ಷಗಳ ನಂತರ ಮತ್ತೆ ಆ್ಯಕ್ಷನ್ ಕಟ್ ಹೇಳಲು ಹೊರಟಿದ್ದಾರೆ. ಸದ್ಯ 'ಉತ್ತರಕಾಂಡ' ಮತ್ತು 'ಅಣ್ಣ ಫ್ರಂ ಮೆಕ್ಸಿಕೋ' ಸಿನಿಮಾದ ಚಿತ್ರೀಕರಣದಲ್ಲಿ ತೊಡಗಿಸಿಕೊಂಡಿರುವ ಧನಂಜಯ, ಇವುಗಳನ್ನು ಪೂರ್ಣಗೊಳಿಸಿ ಕೆಂಪೇಗೌಡರ ಪಾತ್ರಕ್ಕೆ ಬಣ್ಣಹಚ್ಚುವ ಸಾಧ್ಯತೆ ಇದೆ. ಜೊತೆಗೆ ಡಾಲಿ ಪಿಕ್ಚರ್ಸ್‌ನಡಿ 'ಜೆಸಿ' ಮತ್ತು 'ವಿದ್ಯಾಪತಿ' ಎಂಬ ಸಿನಿಮಾವನ್ನು ಧನಂಜಯ ನಿರ್ಮಾಣ ಮಾಡುತ್ತಿದ್ದಾರೆ. ❖

ಆಗಸ್ಟ್ 9ಕ್ಕೆ 'ಭೀಮ' ಬಿಡುಗಡೆ

ನಟ ದುನಿಯಾ ವಿಜಯ್ ನಿರ್ದೇಶಿಸಿ, ನಟಿಸಿರುವ 'ಭೀಮ' ಬಿಡುಗಡೆ ಯಾವಾಗ ಎನ್ನುವ ಪ್ರಶ್ನೆಗೆ ಉತ್ತರ ಸಿಕ್ಕಿದೆ. ಸಿನಿಮಾವನ್ನು ಆಗಸ್ಟ್ 9ಕ್ಕೆ ಬಿಡುಗಡೆ ಮಾಡಲು ಚಿತ್ರತಂಡ ನಿರ್ಧರಿಸಿದೆ.

ಆಗಸ್ಟ್ 15 ರಂದು ಬಿಡುಗಡೆಯಾಗಬೇಕಿದ್ದ ತೆಲುಗಿನ 'ಪುಷ್ಪ–2' ಮುಂದೂಡಿಕೆಯಾಗಿದ್ದು, ಈ ಅವಧಿಯಲ್ಲೇ 'ಭೀಮ' ತೆರೆಗೆ ಬರುವ ಸಾಧ್ಯತೆ ಇದೆ. 2022ರ ಫೆಬ್ರುವರಿ 24ರಂದು ವಿಜಯ್ ತಮ್ಮ 28ನೇ ಸಿನಿಮಾ 'ಭೀಮ' ಘೋಷಿಸಿದ್ದರು. 2022 ಏ.18ಕ್ಕೆ ಈ ಸಿನಿಮಾದ ಮುಹೂರ್ತ ನಡೆದಿತ್ತು. ಇದಾಗಿ ಎರಡು ವರ್ಷದ ಬಳಿಕ ಸಿನಿಮಾ ಬಿಡುಗಡೆಯಾಗುತ್ತಿದೆ.

ಚಿತ್ರದಲ್ಲಿ ಭೀಮನಿಗೆ ಜೋಡಿಯಾಗಿ ಅಶ್ವಿನಿ ನಟಿಸಿದ್ದು, ರಂಗಾಯಣ ರಘು, ಅಚ್ಯುತ್ ಕುಮಾರ್, ಕಾಕ್ರೋಚ್ ಸುಧಿ, ಕಲ್ಯಾಣಿ ಮತ್ತಿತರರು ಅಭಿನಯಿಸಿದ್ದಾರೆ. ಮಾಸ್ತಿ ಸಂಭಾಷಣೆ ಚಿತ್ರಕ್ಕಿದ್ದು, ಕೃಷ್ಣ ಸಾರ್ಥಕ್, ಜಗದೀಶ್ ಗೌಡ ಈ ಸಿನಿಮಾವನ್ನು ನಿರ್ಮಾಣ ಮಾಡಿದ್ದಾರೆ. ❖



ಪದಬಂಧ 5719


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

5.ವಿಶೇಷಾರ್ಥವುಳ್ಳ ಪದಪುಂಜ (4)
6.ನಾರಿ ಹಿಡಿದಿರುವ ತೆಂಗಿನಕಾಯಿ (4)
7.ಹೂವಿನಲ್ಲಿರುವ ಹುಡಿಯಿದು (3)
9.ಕೂಪದಲ್ಲಿರುವ ಕಪ್ಪೆ! (3)
10.ಮನಸ್ಸಿಗೆ ತಾಗುವಂಥದ್ದು (5)
11.ಧನವುಳ್ಳವನ ಸಾವು! (3)
12.ಕುದುರೆಯನ್ನೇರುವ ಬಳೆ (3)
14.ಕುಲದಲ್ಲಿರುವ ವಿಸ್ಮಯ! (4)
16.ತಂದೆಯ ತಾಯಿ (4)

ಮೇಲಿಂದ ಕೆಳಕ್ಕೆ

1.ಒಪ್ಪವಾಗಿ ಬಳಿಯುವುದು (4)
2.ಧಾನ್ಯದ ಸಿಪ್ಪೆ (2)
3.ಶುನಕವಿಲ್ಲಿ ಉಲ್ಟಾ ನಿಂತಿದೆ (2)
4.ರುಚಿಕಟ್ಟಾದ ಅಡುಗೆಯನ್ನು ಹೀಗೂ ಹೇಳುವರು (4)
8.ಮನವನ್ನು ಸೆಳೆದ ಲಕ್ಷ್ಯ (3)
9.ಮಂಕ ಹೊತ್ತಿರುವ ಬುಟ್ಟಿ (3)
11.ಅಂಕುಶವಿದ್ದರೂ ಇದು ಹತೋಟಿಯಿಲ್ಲದ್ದು (4)
13.ಕೊನೆಗೆ ಹಿತವನ್ನುಂಟು ಮಾಡುವ ಅರ್ಚಕ! (4)
15.ಒದೆತಕ್ಕೊಂದು ಪರ್ಯಾಯ ಪದ (2)
16.ಪಿನಾಕದ ಹತ್ತಿರವಿರುವ ಗಿಳಿ (2)



5718ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅವಸರ 3.ಅತಿರೇಕ
5.ಮಹಲು 6.ಖರೀದಿಸು
7.ನದೀಮುಖಜಭೂಮಿ
10.ಆಕಸ್ಮಿಕ 11.ವಸಂತ
14.ದುರಭ್ಯಾಸ 15.ಮೆಹನತ್ತು

ಮೇಲಿಂದ ಕೆಳಕ್ಕೆ:
1.ಅಚ್ಚು 2.ಸಮ್ಮೋಹ
4.ಕನಸು 5.ಮದನ
6.ಖನಿಜ 8.ಮುದುಕ
9.ಮಿಡಿತ 10.ಆಮದು
12.ಸಂದೇಹ 13.ಸ್ವತ್ತು

ಸುಡೊಕು 6104

	7			6			5	
2					5		6	
		1	2			4		9
7		2		5			4	
4					6			
	1		3		2		7	
	2			1		8		
1			8					4
	8			3	7		1	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6103 ಸುಡೊಕು

7	9	2	5	3	1	4	6	8
4	1	5	6	8	7	3	2	9
6	8	3	4	9	2	1	5	7
5	3	4	7	1	9	6	8	2
1	2	6	8	5	4	7	9	3
8	7	9	2	6	3	5	4	1
9	4	7	3	2	5	8	1	6
3	6	1	9	4	8	2	7	5
2	5	8	1	7	6	9	3	4

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶನಿವಾರ ಜೂನ್ 22, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಶುದ್ಧ ಪೂರ್ಣಿಮಾ ಗಂ. 6-38 ನಂತರ ಜ್ಯೇಷ್ಠ ಕೃಷ್ಣ ಪ್ರತಿಪದ್ ಗಂ. 29-14 ನಕ್ಷತ್ರ: ಮೂಲ ಗಂ. 17-54
ಯೋಗ: ಶುಕ್ಲ (ಶುಕ್ರ) ಗಂ. 16-45, ಮಿಥುನ ಮಾಸದ ನೇ 08 ದಿನ, ಮಳೆನಕ್ಷತ್ರ: ಆರ್ದ್ರಾ 1.
ರಾಹುಕಾಲ: ಬೆಳಗ್ಗೆ 09-00 – 10-30
ಸೂರ್ಯೋದಯ : 06-09 ಸೂರ್ಯಾಸ್ತ : 06-56
ಮುಸ್ಲಿಂ ದಿನಾಂಕ : 16 ಜುಲ್‌ಹಿಜಾ
ಅದೃಷ್ಟ ಸಂಖ್ಯೆ : 4, 9

ಮೇಷ: ದೇಹದಲ್ಲಿನ ಉಷ್ಣತೆಯನ್ನು ನೀವಾಗಿಯೆ ಆಹಾರದ ಮೂಲಕ ನಿವಾರಿಸಿಕೊಳ್ಳದಿದ್ದರೆ ವೈದ್ಯರ ದರ್ಶನ ಅನಿವಾರ್ಯವಾಗುವುದು. ನಿಮ್ಮ ಪ್ರೀತಿ ಪಾತ್ರರೊಂದಿಗೆ ದೂರದ ಊರಿಗೆ ಪ್ರಯಾಣ ಬೆಳೆಸುವ ಯೋಗವಿದೆ.

ವೃಷಭ: ನಿರುದ್ಯೋಗಿಗಳಿಗೆ ತಾತ್ಕಾಲಿಕ ಉದ್ಯೋಗ ದೊರಕುವ ಸುದ್ದಿಯಿಂದ ತುಸು ಸಮಾಧಾನ ಸಿಗುವುದು. ಪಾಲುದಾರಿಕೆಯನ್ನು ಮುಂದುವರೆಸುವ ಯೋಚನೆ ಮಾಡಬಹುದು. ಅದರ ಬಗ್ಗೆ ಋಣಾತ್ಮಕವಾಗಿ ಚಿಂತಿಸದಿರಿ.

ಮಿಥುನ: ವೈದ್ಯರು ಹೊಸ ಖಾಸಗಿ ಕಾರ್ಯಾಲಯವನ್ನು ಮಾಡುವ ಉತ್ತಮವಾದ ಯೋಚನೆ ಮಾಡುವಿರಿ. ಎಲೆಕ್ಟ್ರಿಕಲ್ ಉಪಕರಣಗಳ ಮಾರಾಟಗಾರರಿಗೆ ಮತ್ತು ಕಬ್ಬಿಣ ವ್ಯಾಪಾರಿಗಳಿಗೆ ಹೆಚ್ಚು ಲಾಭ ಇರುವುದು.

ಕರ್ಕಾಟಕ: ಸರ್ಕಾರಿ ಲೋಕೋಪಯೋಗಿ ಕೆಲಸದ ಗುತ್ತಿಗೆದಾರರು ಕಾಮಗಾರಿಗಳನ್ನು ನಿಮ್ಮೆಡೆಗೆ ಮಾಡಿಕೊಳ್ಳುವ ವಿಚಾರದಲ್ಲಿ ಎಡುವುವಿರಿ. ದಾಯಾದಿಗಳು ನಿಮ್ಮ ಅಭಿವೃದ್ಧಿಗೆ ಅಡ್ಡಗಾಲು ಹಾಕಬಹುದು.

ಸಿಂಹ: ನಿವೇಶನ ಖರೀದಿವ್ಯವಹಾರದಲ್ಲಿ ಮತ್ತೊಮ್ಮೆ ಭೂ ದಾಖಲೆಗಳ ಪರೀಕ್ಷೆ ಅನಿವಾರ್ಯ ಎನಿಸಲಿದೆ. ನೀವು ಇಂದು ಕೈಗೊಳ್ಳುವ ನಿರ್ಧಾರಗಳು ನಿಮ್ಮ ಕುಟುಂಬದ ಎಲ್ಲ ಸದಸ್ಯರ ಮನಸ್ಸಿಗೆ ನೆಮ್ಮದಿ ತರಲಿದೆ.

ಕನ್ಯಾ: ಈ ದಿನ ಬೇರೆಯವರ ಸಹಾಯ ಅಪೇಕ್ಷಿಸದೆ ಕಠಿಣವಾದ ಕಾರ್ಯಗಳನ್ನು ಸಹ ನೀವೆ ಮಾಡಿ. ದೈವಾನುಗ್ರಹದಿಂದ ಸಕಲ ಅಭೀಷ್ಟವು ಸಿದ್ಧಿಯಾಗಲಿದೆ. ಹಣಕಾಸಿನ ವಿವಾದ ಬಗೆಹರಿಸಿಕೊಳ್ಳುವಿರಿ.

ತುಲಾ: ಗುರಿ ಸಾಧಿಸಲು ಅನಿವಾರ್ಯವಿರುವ ಕೆಲವು ಬದಲಾವಣೆ ಮಾಡಿಕೊಳ್ಳಿ. ನಿಮ್ಮಲ್ಲಿದ್ದ ಅಭದ್ರತೆಯ ಭಾವ ಬಿಟ್ಟು ಹೋಗಲಿದೆ. ಸಂಗೀತ ಮತ್ತು ಕಲೆಯಲ್ಲಿ ಅಭಿರುಚಿ ಹೆಚ್ಚಲಿದೆ.

ವೃಶ್ಚಿಕ: ಕಾರ್ಮಿಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ನಿಮ್ಮ ನಿರ್ಧಾರ ಉತ್ತಮವಾಗಿದೆ. ಧಾರ್ಮಿಕ ಕ್ಷೇತ್ರದಲ್ಲಿ ದುಡಿಯುವವರಿಗೆ ದೇವರ ರಕ್ಷಣೆ ಸಿಗುವುದು. ಸಂಗಾತಿಯಿಂದ ಉಡುಗೊರೆ ದೊರೆಯಬಹುದು.

ಧನು: ಕುಟುಂಬದ ವತಿಯಿಂದ ನಡೆಸಬೇಕಾದ ಸತ್ಕಾರ್ಯಗಳ ಕುರಿತು ಸಮಾಲೋಚಿಸಿ. ಉದಯೋನ್ಮುಖ ಕವಿಗಳಿಗೆ ಛಂದೋಬದ್ಧ ಕೃತಿಗೆ ಹಿರಿಯ ಸಾಹಿತಿಗಳಿಂದ ಉತ್ತಮ ಪ್ರಶಂಸೆ ದೊರೆಯುವುದು.

ಮಕರ: ನೀವು ಇತರರ ಕಷ್ಟಕಾಲದಲ್ಲಿ ಮಾಡಿದ ಉಪಕಾರದ ಫಲಗಳು ಕಷ್ಟಕಾಲದಲ್ಲಿ ನಿಮ್ಮ ಸಹಾಯಕ್ಕೆ ಬರುತ್ತವೆ. ನಿಮ್ಮ ಸರಳತೆಯು ಸಮಾಜದಲ್ಲಿ ನಿಮ್ಮ ಉತ್ತಮ ಗೌರವಕ್ಕೆ ಕಾರಣವಾಗುತ್ತದೆ.

ಕುಂಭ: ಭಾವನೆಯ ಕಲ್ಪನಾ ಲೋಕದ ಬದಲು ವಾಸ್ತವದತ್ತ ಗಮನ ಹರಿಸಲು ಇದು ಸೂಕ್ತವಾದ ಸಮಯ. ಪರಿಚಯವೇ ಇಲ್ಲದ ವ್ಯಕ್ತಿಯು ಕ್ಲಿಷ್ಟ ಸಮಯದಲ್ಲಿ ನಿಮಗೆ ಸಹಕಾರವನ್ನು ಮಾಡುವರು.

ಮೀನ: ಸಾಮಾಜಿಕ ಸೇವಾ ಕಾರ್ಯದಲ್ಲಿ ಸಮಯ ವ್ಯರ್ಥವಾಗದಂತೆ ಜಾಗರೂಕತೆ ವಹಿಸಿ. ಸಾಧ್ಯವಾದಷ್ಟೂ ಉಳಿತಾಯ ಮಾಡುವುದನ್ನು ರೂಢಿಸಿಕೊಳ್ಳಿ. ಯೋಜನೆಗಳು ವ್ಯವಸ್ಥಿತ ರೂಪದಲ್ಲಿ ಸಾಗಲಿವೆ.

ಕೆಪಿಸಿಸಿ ಕಚೇರಿಯಲ್ಲಿ ಅಕಾಡೆಮಿ ಸಭೆ: ಸಚಿವ ಶಿವರಾಜ್ ತಂಗಡಗಿ ಸಮರ್ಥನೆ

‘ಪಕ್ಷ ವ್ಯವಸ್ಥೆ ಇಲ್ಲದೆ ಸರ್ಕಾರ, ಅಕಾಡೆಮಿಗಳಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪಕ್ಷ ವ್ಯವಸ್ಥೆ ಇಲ್ಲದೆ ಸರ್ಕಾರವಿಲ್ಲ, ಸರ್ಕಾರವಿಲ್ಲದೇ ಅಕಾಡೆಮಿ– ಪ್ರಾಧಿಕಾರಗಳಿಲ್ಲ’ ಎನ್ನುವ ಮೂಲಕ ಕನ್ನಡ ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ಕೆಪಿಸಿಸಿ ಕಚೇರಿಯಲ್ಲಿ ವಿವಿಧ ಅಕಾಡೆಮಿಗಳ ಅಧ್ಯಕ್ಷರು, ಸದಸ್ಯರ ಸಭೆ ನಡೆಸಿದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನಡೆಯನ್ನು ಸಮರ್ಥಿಸಿಕೊಂಡರು.

ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾತನಾಡಿದ ಅವರು, ‘ಪಕ್ಷ ವ್ಯವಸ್ಥೆಯ ಆಧಾರದ ಮೇಲೆ ಎಲ್ಲ ಸರ್ಕಾರಗಳು ಅಸ್ತಿತ್ವಕ್ಕೆ ಬರುತ್ತವೆ. ಈಗ ರಾಜ್ಯ- ದಲ್ಲಿರುವುದು ಕಾಂಗ್ರೆಸ್ ಸರ್ಕಾರ ಎಂದೇ ಎಲ್ಲರೂ ಕರೆಯುವುದು.


ಶಿವರಾಜ್ ತಂಗಡಗಿ

ಅಲ್ಲದೇ, ಶಿವಕುಮಾರ್ ಅವರು ಕೆಪಿಸಿಸಿ ಅಧ್ಯಕ್ಷರಷ್ಟೇ ಅಲ್ಲ, ಉಪ ಮುಖ್ಯಮಂತ್ರಿಯೂ ಹೌದು. ಹಾಗಾಗಿ, ಪಕ್ಷದ ಕಚೇರಿಗೆ ಅಕಾಡೆಮಿ ಅಧ್ಯಕ್ಷರನ್ನು ಕರೆದಿದ್ದಾರೆ. ಅದರಲ್ಲಿ ತಪ್ಪು ಏಕೆ ಹುಡುಕಬೇಕು’ ಎಂದು ಪ್ರಶ್ನಿಸಿದರು.

ಶಿವಕುಮಾರ್ ಅವರು ಈ ಹಿಂದೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರಾಗಿ ಕಾರ್ಯ ನಿರ್ವಹಿಸಿದ್ದರು. ಸರ್ಕಾರದ ಘನತೆ ಹೆಚ್ಚಿಸುವಲ್ಲಿ ಸಾಹಿತಿಗಳ ಪಾತ್ರ ಮಹತ್ವದ್ದಾಗಿದೆ. ಹಾಗಾಗಿ, ಸಭೆ ನಡೆಸಿ ಕೆಲವೊಂದು ಸಲಹೆ ನೀಡಿದ್ದಾರೆ ಎಂದರು.

‘ಹಿಂದಿನ ಸರ್ಕಾರದಲ್ಲಿ ಅಕಾಡೆಮಿಗಳ ಅಧ್ಯಕ್ಷರ ಸಭೆ ಎಲ್ಲಿ ನಡೆಸಿದ್ದರು ಎಂದು ಹೇಳುತ್ತಾ ಹೋದರೆ ಅದು ರಾಜಕೀಯವಾಗುತ್ತದೆ. ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರಿಗೆ ಪ್ರಶಸ್ತಿ ಘೋಷಣೆ ಮಾಡಿದ್ದವರಿಗೂ ಪ್ರಶಸ್ತಿ ಪ್ರದಾನ ಮಾಡಲಿಲ್ಲ. ನಮ್ಮ ಸರ್ಕಾರ ಬಂದ ನಂತರ ಎಲ್ಲರಿಗೂ ಪ್ರದಾನ ಮಾಡಿದ್ದೇವೆ’ ಎಂದರು.

ಸುದ್ದಿಗೋಷ್ಠಿಗೂ ಮೊದಲು, ಶಿವರಾಜ್ ತಂಗಡಗಿ ನೇತೃತ್ವದಲ್ಲಿ ಶುಕ್ರವಾರ ನಡೆದ ವಿವಿಧ ಅಕಾಡೆಮಿಗಳ ಅಧ್ಯಕ್ಷರು, ಸದಸ್ಯರ ಸಭೆಯಲ್ಲಿ ಶಿಕ್ಷಣ ತಜ್ಞ ವಿ.ಪಿ. ನಿರಂಜನಾರಾಧ್ಯ ಅವರು ಕೆಪಿಸಿಸಿ ಕಚೇರಿಯಲ್ಲಿನ ಸಭೆ ಕುರಿತು ಸಾಹಿತಿಗಳ ಟೀಕೆಗಳ ಪ್ರಸ್ತಾವ ಮಾಡಿದರೂ, ಉಳಿದ ಸಾಹಿತಿಗಳು ಮತ್ತು ಕಲಾವಿದರು ಪ್ರತಿಕ್ರಿಯಿಸಲಿಲ್ಲ. ಎಲ್ಲರೂ ಮೌನವಹಿಸಿದ್ದರು ಎಂದು ಮೂಲಗಳು ಹೇಳಿವೆ.

ಪ್ರಾಧಿಕಾರಗಳಿಗೆ ಸಮನ್ವಯ ಸಮಿತಿ

ಬೆಂಗಳೂರು: ವಿವಿಧ ಅಕಾಡೆಮಿ, ಪ್ರಾಧಿಕಾರಗಳ ಸುಗಮ ಕಾರ್ಯ- ನಿರ್ವಹಣೆಗಾಗಿ ಎಲ್ಲ ಅಧ್ಯಕ್ಷರನ್ನೂ ಒಳಗೊಂಡ ಸಮನ್ವಯ ಸಮಿತಿ ರಚಿಸಲಾಗುವುದು ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ಹೇಳಿದರು.

ಅಕಾಡೆಮಿ–ಪ್ರಾಧಿಕಾರಗಳ ಅಧ್ಯಕ್ಷರಲ್ಲೇ ಒಬ್ಬರನ್ನು ಸಮನ್ವಯ ಸಮಿತಿ ಅಧ್ಯಕ್ಷರನ್ನಾಗಿ ಮಾಡುವ ಅಥವಾ ಸಚಿವರೇ ಅಧ್ಯಕ್ಷರಾಗುವ ಕುರಿತು ಶೀಘ್ರ ನಿರ್ಧಾರ ತೆಗೆದುಕೊ- ಳ್ಳಲಾಗುವುದು ಎಂದು ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಪ್ರತಿ ತಿಂಗಳು ಕನಿಷ್ಠ ಎರಡು ಅಕಾಡೆಮಿಗಳ ಅಧ್ಯಕ್ಷರು, ಸದಸ್ಯರನ್ನು ಕರೆದು ಸಭೆ ನಡೆಸಲಾಗುವುದು. ಸಂವಿಧಾನದ ಆಶಯಗಳಿಗೆ ಪೂರಕವಾಗಿ ವೈವಿಧ್ಯಮಯ ಚಟುವಟಿಕೆಗಳನ್ನು ಹಮ್ಮಿಕೊಳ್ಳ- ಲಾಗುವುದು. ಅಕಾಡೆಮಿಗಳ ಪತ್ರ ವ್ಯವಹಾರದಲ್ಲಿ ‘ಕರ್ನಾಟಕ’ ಎಂದು ನಾಮಕರಣಗೊಂಡ ಸುವರ್ಣ ವರ್ಷದ ಲೋಗೊ ಕಡ್ಡಾಯವಾಗಿ ಬಳಸಲು ಸೂಚಿಸಲಾಗಿದೆ ಎಂದರು.

ಮಂಡ್ಯದಲ್ಲೇ ಸಮ್ಮೇಳನ: ಕನ್ನಡ ಸಾಹಿತ್ಯ ಸಮ್ಮೇಳನವನ್ನು ಮಂಡ್ಯದಲ್ಲೇ ನಡೆಸಲಾಗುವುದು. ನವೆಂಬರ್– ಡಿಸೆಂಬರ್‌ನಲ್ಲಿ ಸಮ್ಮೇಳನಕ್ಕೆ ದಿನಾಂಕ ನಿಗದಿ ಮಾಡಲಾಗುವುದು ಎಂದರು.

ಸುದ್ದಿ 2 ನಿಮಿಷ

ಕನಕಪುರದಲ್ಲೇಕೆ ಉಪ ಚುನಾವಣೆ ನಡೆಯುತ್ತೆ: ಡಿಕೆಶಿ

ಬೆಂಗಳೂರು: ‘ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದಲ್ಲಿ ಉಪ ಚುನಾವಣೆ ನಡೆದರೆ ಕನಕಪುರ ವಿಧಾನಸಭಾ ಕ್ಷೇತ್ರದಲ್ಲಿ ಏಕೆ ಉಪ ಚುನಾವಣೆ ನಡೆಯಬೇಕು’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರಶ್ನಿಸಿದರು.

‘ಸ್ವಪ್ರತಿಷ್ಠೆಗಾಗಿ ಉಪ ಚುನಾವಣೆ ಹೆಸರಿನಲ್ಲಿ ದೇಶದ ಸಂಪತ್ತು ಹಾಳು ಮಾಡುತ್ತಿದ್ದಾರೆ’ ಎಂಬ ಬಿಜೆಪಿ ಶಾಸಕ ಎಸ್. ಸುರೇಶ್ ಕುಮಾರ್ ಟೀಕೆ ಕುರಿತು ಸುದ್ದಿಗಾರರಿಗೆ ಶುಕ್ರವಾರ ಪ್ರತಿಕ್ರಿಯಿಸಿದ ಅವರು, ‘ನಾನು ಕನಕಪುರದ ಶಾಸಕ. ಪಕ್ಷದ ಅಧ್ಯಕ್ಷನಾಗಿ ನನ್ನ ಮೇಲೆ ಜವಾಬ್ದಾರಿ ಇದೆ. ಚನ್ನಪಟ್ಟಣವೂ ನನ್ನದೇ ಕ್ಷೇತ್ರ, ಅಲ್ಲಿಗೂ ನನ್ನದೇ ನಾಯಕತ್ವ. ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ನಾನು ಸೇರಿಕೊಂಡು ಚುನಾವಣೆ ನಡೆಸುತ್ತೇವೆ’ ಎಂದರು.

‘ಚನ್ನಪಟ್ಟಣದಲ್ಲಿ ಶಿವಕುಮಾರ್ ರಾಜಕೀಯ ಅಂತ್ಯವಾಗಲಿದೆ’ ಎಂಬ ಬಿಜೆಪಿ ಮುಖಂಡ ಸಿ.ಪಿ. ಯೋಗೇಶ್ವರ್ ಹೇಳಿಕೆಗೆ ಪ್ರತಿಕ್ರಿಯಿಸಿದ ಶಿವಕುಮಾರ್, ‘ನನ್ನ ರಾಜಕೀಯ ಅಂತ್ಯ ಕುರಿತು ತೀರ್ಮಾನ ಮಾಡುವವರು ಜನರು. ಬೇರೆ ಯಾರಿಗೂ ಅದು ಸಾಧ್ಯವಿಲ್ಲ. ಜನರೇ ನನ್ನ ಹಿಂದಿರುವ ಶಕ್ತಿ’ ಎಂದು ಹೇಳಿದರು.

‘ಯೋಗೇಶ್ವರ್ ದೊಡ್ಡವರು. ಅವರ ಮಾತಿಗೆ ಪ್ರತಿಕ್ರಿಯೆ ನೀಡುವಷ್ಟು ಸಮಯ ನನ್ನ ಬಳಿ ಇಲ್ಲ. ನಾನೂ ರಾಮನಗರ ಜಿಲ್ಲೆಯವನು. ನಿಮ್ಮ ಋಣ ತೀರಿಸಲು ಬದ್ಧನಿದ್ದೇನೆ, ಶಕ್ತಿ ಕೊಡಿ ಎಂದು ಆ ಕ್ಷೇತ್ರದ ಜನರ ಬಳಿ ಕೇಳಿಕೊಂಡಿದ್ದೇನೆ. ನನ್ನ ಮೇಲೆ ವಿಶ್ವಾಸವಿದ್ದರೆ ಬೆಂಬಲ ನೀಡುತ್ತಾರೆ’ ಎಂದರು.



‘ರಾಜಕೀಯ ಅಧ್ಯಾಯ ಅಂತ್ಯ ಯಾರದ್ದೆಂದು ನೋಡೋಣ’

ಮಾಗಡಿ (ರಾಮನಗರ): ‘ಚನ್ನಪಟ್ಟಣ ಉಪ ಚುನಾವಣೆಯಲ್ಲಿ ಸ್ಪರ್ಧಿಸಿದರೆ ಮುಗಿಯುವುದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ರಾಜಕೀಯ ಅಧ್ಯಾಯವೊ ಅಥವಾ ಯೋಗೇಶ್ವರ ಅಧ್ಯಾಯವೊ ಚುನಾವಣೆಯಲ್ಲಿ ನೋಡೋಣ’ ಎಂದು ಶಾಸಕ ಎಚ್.ಸಿ.ಬಾಲಕೃಷ್ಣ ತಿರುಗೇಟು ನೀಡಿದರು.

‘ಚನ್ನಪಟ್ಟಣದಲ್ಲಿ ಸ್ಪರ್ಧಿಸಿದರೆ ಡಿಕೆಶಿ ರಾಜಕೀಯ ಅಧ್ಯಾಯ ಮುಗಿಯಲಿದೆ’ ಎಂಬ ಸಿ.ಪಿ.ಯೋಗೇಶ್ವರ್ ಹೇಳಿಕೆ ಕುರಿತು, ಪಟ್ಟಣದಲ್ಲಿ ಶುಕ್ರವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, ‘ತಲೆ ಕೆಟ್ಟ ರೀತಿಯಲ್ಲಿ ಮಾತನಾಡುವ ಯೋಗೇಶ್ವರ್ ಮಾತಿಗೆ ಮಹತ್ವ ಕೊಡಬೇಕಿಲ್ಲ. ಅನುಕಂಪ ಗಿಟ್ಟಿಸಿಕೊಳ್ಳುವುದಕ್ಕಾಗಿ ಇಂತಹ ರಾಜಕೀಯ ಗಿಮಿಕ್‌ನ ಮಾತುಗಳನ್ನಾಡುತ್ತಾರೆ. ಜನರೆದುರು ನಮ್ಮನ್ನು ಖಳರನ್ನಾಗಿ ಮಾಡಲು ಹೊರಟ್ಟಿದ್ದಾರೆ. ಆದರೆ, ಅದ್ಯಾವುದು ನಡೆಯಲ್ಲ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

‘ನಟ ದರ್ಶನ್ ಕಟುಕನಲ್ಲ’

ಬೆಂಗಳೂರು: ‘ಚಿತ್ರನಟ ದರ್ಶನ್ ಸ್ವಲ್ಪ ಮುಂಗೋಪಿ, ಆತನಿಗೆ ಸಿಟ್ಟು ಜಾಸ್ತಿ. ಆದರೆ, ಕೊಲೆ ಮಾಡುವಷ್ಟು ಕಟುಕನಲ್ಲ’ ಎಂದು ಮದ್ದೂರು ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಶಾಸಕ ಕದಲೂರು ಉದಯ್ ಗೌಡ ಹೇಳಿದರು.

‘ದರ್ಶನ್ ಹಲವು ವರ್ಷಗಳಿಂದ ನನಗೆ ಸ್ನೇಹಿತ. ಕೊಲೆ ಮಾಡುವಂತಹ ಬುದ್ಧಿ ಆತನಿಗೆ ಇಲ್ಲ. ಈ ಪ್ರಕರಣದಲ್ಲಿ ಆತನೇ ಕೊಲೆ ಮಾಡಿದ್ದಾನಾ ಎನ್ನುವುದು ಗೊತ್ತಿಲ್ಲ’ ಎಂದು ಸುದ್ದಿಗಾರರಿಗೆ ಶುಕ್ರವಾರ ಪ್ರತಿಕ್ರಿಯಿಸಿದರು.

‘ಬೇರೆಯವರು ಕೊಲೆ ಮಾಡಿ ದರ್ಶನ್ ಹೆಸರು ಹೇಳಿರಬಹುದಾ ಎಂಬುದೂ ಗೊತ್ತಿಲ್ಲ. ಪ್ರಕರಣದ ತನಿಖೆ ನಡೆಯತ್ತಿದೆ. ಸತ್ಯ ಇನ್ನಷ್ಟೇ ಹೊರಬರಬೇಕಿದೆ’ ಎಂದು ಹೇಳಿದರು.

‘ಮುಂಗೋಪಿ ಆಗಿರುವುದರಿಂದ ಅಭಿಮಾನಿಗಳಿಗೆ ದರ್ಶನ್ ಗದರುತ್ತಿದ್ದ. ಸಿಟ್ಟಿನಿಂದ ಮಾತನಾಡುತ್ತಿದ್ದ. ಇನ್ನೇನು ಕೆಲವು ದಿನಗಳಲ್ಲಿ ಈ ಪ್ರಕರಣದ ಸತ್ಯಾಂಶ ಹೊರ ಬರಲಿದೆ’ ಎಂದರು.

ತಮ್ಮ ಅಂಗರಕ್ಷಕನ ಮೇಲೆ ದರ್ಶನ್ ಬೆಂಬಲಿಗರು ಹಲ್ಲೆ ನಡೆಸಿದ್ದರು ಎಂಬ ಆರೋಪಕ್ಕೆ ಪ್ರತಿಕ್ರಿಯಿಸಿದ ಉದಯ್ ಗೌಡ, ‘ಅದೆಲ್ಲ ಸುಳ್ಳು. ಅಂತಹ ಘಟನೆಯೇ ನಡೆದಿಲ್ಲ. ನಿಮಗೆ ಈ ರೀತಿ ಹೇಳಿದವರು ಯಾರು’ ಎಂದು ಪ್ರಶ್ನಿಸಿದರು.

ಪಕ್ಷ ಆಧಾರದಲ್ಲಿ ತನಿಖೆ ನಡೆಯದು: ಜಿ. ಪರಮೇಶ್ವರ

ಪ್ರಜಾವಾಣಿ ವಾರ್ತೆ


ಜಿ.ಪರಮೇಶ್ವರ

ಬೆಂಗಳೂರು: ‘ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದ ತನಿಖೆ ಪಕ್ಷದ ಆಧಾರದಲ್ಲಿ ನಡೆಯುವುದಿಲ್ಲ. ಕಾನೂನಿನ ಪ್ರಕಾರ ಪೊಲೀಸರು ತನಿಖೆ ನಡೆಸುತ್ತಾರೆ’ ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು, ‘ತಪ್ಪಿತಸ್ಥರು ಯಾವ ರಾಜಕೀಯ ಪಕ್ಷದಲ್ಲಿದ್ದರು ಎಂಬುದನ್ನು ಆಧರಿಸಿ ತನಿಖೆಯ ನಡೆ ನಿರ್ಧಾರ ಆಗುವುದಿಲ್ಲ. ತಪ್ಪು ಮಾಡಿದವರು ಯಾವುದೇ ಪಕ್ಷದಲ್ಲಿದ್ದರೂ ತಪ್ಪಿತಸ್ಥರೇ ಆಗಿರುತ್ತಾರೆ. ತನಿಖೆಯಲ್ಲಿ ಪಕ್ಷ ಮುಖ್ಯ ಆಗುವುದಿಲ್ಲ. ಏನು ತಪ್ಪು ಮಾಡಿದ್ದಾರೆ ಎಂಬುದರ ಆಧಾರದಲ್ಲಿ ತನಿಖೆ ಮುಂದುವರಿಯುತ್ತದೆ’ ಎಂದು ಹೇಳಿದರು.

‘ನಟ ದರ್ಶನ್ ರಕ್ಷಣೆಗೆ ಪ್ರಭಾವ ಬೀರಲು ನನ್ನ ಬಳಿ ಬರಬೇಡಿ ಎಂದು ಮುಖ್ಯಮಂತ್ರಿಯವರು ಸೂಚಿಸಿದ್ದಾರೆ’ ಎಂಬುದನ್ನು ಕುರಿತ ಪ್ರಶ್ನೆಗೆ ಪ್ರತಿಕ್ರಿಯಿ- ಸಿದ ಅವರು, ‘ನಮ್ಮ ಅಧಿಕಾರಿಗಳು ಮಾಹಿತಿ ನೀಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡುತ್ತಾರೆ. ಅದನ್ನು ಹೊರತುಪಡಿಸಿ, ಯಾರೂ ಹೋಗುವುದಿಲ್ಲ. ಅದರ ಅವಶ್ಯಕತೆಯೂ ಯಾರಿಗೂ ಇಲ್ಲ. ದರ್ಶನ್ ವಿಷಯದಲ್ಲಿ ಯಾರೂ ನನ್ನ ಬಳಿ ಬಂದಿಲ್ಲ’ ಎಂದರು.

ನೋಟಿಸ್ ನೀಡಲಾಗಿದೆ: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಿರುದ್ಧ ‘ಎಕ್ಸ್’ ಖಾತೆಯಲ್ಲಿ ಕೀಳು ಅಭಿರುಚಿಯ ಪೋಸ್ಟ್ ಹಾಕಿದ್ದ ವ್ಯಕ್ತಿಗೆ ನೋಟಿಸ್ ನೀಡಲು ತೆರಳಿದ್ದ ಹೈಗ್ರೌಂಡ್ಸ್ ಠಾಣೆ ಪೊಲೀಸರ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದ ಪ್ರಕರಣದ ಬಗ್ಗೆ ಪ್ರತಿಕ್ರಿಯಿಸಿದ ಗೃಹ ಸಚಿವ ಜಿ. ಪರಮೇಶ್ವರ ಅವರು, ‘ನಮ್ಮ ಪೊಲೀಸರು ಸ್ಥಳೀಯ ಪೊಲೀಸರಿಗೆ ತಿಳಿಸದೇ ಉತ್ತರಪ್ರದೇಶದ ನೊಯ್ಡಾದಲ್ಲಿ ಕಾರ್ಯಾಚರಣೆ ನಡೆಸಿದಾಗ ಆ ರೀತಿ ನಡೆದಿದೆ. ನಂತರ ಸ್ಥಳೀಯ ಪೊಲೀಸರ ನೆರವು ಪಡೆದು ಆ ವ್ಯಕ್ತಿಗೆ ನೋಟಿಸ್ ನೀಡಲಾಗಿದೆ’ ಎಂದು ತಿಳಿಸಿದರು.

ಜಗತ್ತಿನ ನಾಲ್ಕು ಖಂಡಗಳಲ್ಲಿ ಬಿಸಿಲಿನ ಬೇಗೆ ತೀವ್ರ, ಪ್ರಾಣಕ್ಕೆ ಎರವಾಗುತ್ತಿರುವ ಬಿಸಿಲಾಘಾತ

ಬಿಸಿಗಾಳಿ: ಕುದಿಯುತ್ತಿದೆ ಅರ್ಧ ಜಗತ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ ರಾಜಧಾನಿ ದೆಹಲಿ ಸೇರಿದಂತೆ ಉತ್ತರ ಭಾರತದಲ್ಲಿ ಮಾತ್ರವಲ್ಲ; ಪ್ರಪಂಚದ ಅರ್ಧದಷ್ಟು ಭಾಗದಲ್ಲಿ ಬಿಸಿಗಾಳಿಯ ತೀವ್ರತೆ ಜಾಸ್ತಿಯಾಗಿದ್ದು, ಅಪಾರ ಸಾವು ನೋವು ಸಂಭವಿಸುತ್ತಿದೆ.

ಏಷ್ಯಾ ಸೇರಿದಂತೆ ಭೂಮಿಯ ಉತ್ತರಗೋಳದಲ್ಲಿ ಬರುವ ನಾಲ್ಕು ಖಂಡಗಳಲ್ಲಿ ಬಿಸಿಗಾಳಿ ಆತಂಕ ಸೃಷ್ಟಿಸಿದ್ದು, ಸಾವಿರಾರು ಜನರ ಪ್ರಾಣಕ್ಕೆ ಎರವಾಗಿದೆ.

ಭಾರತ, ಚೀನಾ, ಸೌದಿ ಅರೇಬಿಯಾ ಸೇರಿದಂತೆ ಏಷ್ಯಾದ ಹಲವು ರಾಷ್ಟ್ರಗಳು, ಅಮೆರಿಕ, ಮೆಕ್ಸಿಕೊ ಸೇರಿದಂತೆ ಉತ್ತರ ಅಮೆರಿಕ ಖಂಡದಲ್ಲಿ ಬರುವ ದೇಶಗಳು, ದಕ್ಷಿಣ ಅಮೆರಿಕ ಖಂಡ, ಬ್ರಿಟನ್ ಸೇರಿದಂತೆ ಯುರೋಪ್ ಖಂಡದ ರಾಷ್ಟ್ರಗಳು, ಆಫ್ರಿಕಾ ಖಂಡದ ಉತ್ತರ ಭಾಗಗಳಲ್ಲಿ ಉಷ್ಣಾಂಶ ಏರುಗತಿಯಲ್ಲಿದ್ದು, ಬಿಸಿ ವಾತಾವರಣ ಜನಜೀವನವನ್ನು ಅಸಹನೀಯವಾಗಿಸಿದೆ.

ಸೌದಿ ಅರೇಬಿಯಾದ ಮೆಕ್ಕಾಕ್ಕೆ ಹಜ್ ಯಾತ್ರೆ ಕೈಗೊಂಡಿದ್ದ ಯಾತ್ರಿಗಳಲ್ಲಿ ಬಿಸಿಲಾಘಾತದಿಂದ ಮೃತಪಟ್ಟವರ ಸಂಖ್ಯೆ 1,000 ದಾಟಿದೆ. ಭಾರತದಲ್ಲಿ ಮಾರ್ಚ್ 1ರಿಂದ ಜೂನ್ 20ರವರೆಗೆ ಬಿಸಿಗಾಳಿ ಹೊಡೆತಕ್ಕೆ ಸಿಕ್ಕ 143 ಜನರು ಪ್ರಾಣ ಕಳೆದುಕೊಂಡಿದ್ದಾರೆ ಎಂದು ಆರೋಗ್ಯ ಸಚಿವಾಲಯ ಹೇಳಿದೆ. ಇದಕ್ಕೂ ಎರಡು ಪಟ್ಟು ಹೆಚ್ಚು ಮಂದಿ ಬಿಸಿಗಾಳಿಯಿಂದ ಪ್ರಾಣ ಕಳೆದುಕೊಂಡಿದ್ದಾರೆ ಎಂದು ಹೇಳಲಾಗುತ್ತಿದೆ.


ಮೆಕ್ಸಿಕೊದಲ್ಲಿ ಮಾರ್ಚ್‌ನಿಂದೀಚೆಗೆ ಬಿಸಿಗಾಳಿ ಕಾರಣಕ್ಕೆ 125 ಜನರು ನಿಧನರಾಗಿದ್ದಾರೆ.

ಅಮೆರಿಕದಲ್ಲೂ ಉಷ್ಣಾಂಶ ದಾಖಲೆ ಪ್ರಮಾಣದಲ್ಲಿ ಏರಿದ್ದು, ದೇಶದ ನೈರುತ್ಯ ಭಾಗದಲ್ಲಿ ಸೆಕೆಯಿಂದ ಜನರು ತತ್ತರಿಸುತ್ತಿದ್ದಾರೆ. 10 ಕೋಟಿಯಷ್ಟು ಜನರಿಗೆ ಎಚ್ಚರಿಕೆಯಿಂದ ಇರುವಂತೆ ಅಮೆರಿಕ ಸರ್ಕಾರ ಸಲಹೆ ನೀಡಿದೆ. ಅಮೆರಿಕದ ಅರಿಜೋನಾ ರಾಜ್ಯದಲ್ಲಿ ವಾತಾವರಣದ ಉಷ್ಣತೆ 45.5 ಡಿಗ್ರಿ ಸೆಲ್ಸಿಯಸ್‌ನಷ್ಟಿದೆ.

ನ್ಯೂಯಾರ್ಕ್ ನಗರದ ಆಡಳಿತವು ಜನರ ಅನುಕೂಲಕ್ಕಾಗಿ ಗ್ರಂಥಾಲಯಗಳಲ್ಲಿ ಉಷ್ಣತೆಯ ತೀವ್ರತೆಯನ್ನು ಕಡಿಮೆ ಮಾಡಲು ಕೂಲಿಂಗ್ ಕೇಂದ್ರಗಳು, ಹಿರಿಯ ನಾಗರಿಕ ಕೇಂದ್ರ ಹಾಗೂ ಇತರ ಸೌಲಭ್ಯಗಳನ್ನು ಆರಂಭಿಸಿದೆ. ನಗರದ ಹೊರವಲಯದಲ್ಲಿ ಶಾಲೆಗಳನ್ನು ಮುಚ್ಚಲಾಗಿದೆ.

ಉತ್ತರ ಆಫ್ರಿಕಾ ಭಾಗದಲ್ಲಿರುವ ರಾಷ್ಟ್ರಗಳಲ್ಲಿ ತಾಪಮಾನ 40 ಡಿಗ್ರಿ ಸೆಲ್ಸಿಯಸ್ ದಾಟಿದೆ.

ಕಾಳ್ಗಿಚ್ಚಿನ ಕೊಡುಗೆ: ಗ್ರೀಸ್, ಪೋರ್ಚುಗಲ್ ಸೇರಿದಂತೆ ಆಫ್ರಿಕಾದ ಉತ್ತರ ಕರಾವಳಿ ಭಾಗದಲ್ಲಿ ಕಂಡು ಬಂದಿರುವ ಕಾಳ್ಗಿಚ್ಚು ಕೂಡ ಮೆಡಿಟರೇನಿಯನ್ ಸುತ್ತಮುತ್ತಲಿನ ರಾಷ್ಟ್ರಗಳಲ್ಲಿ ಉಷ್ಣಾಂಶ ಏರುವಂತೆ ಮಾಡಿದೆ.



ಭಾರತದಲ್ಲಿ ಲೆಕ್ಕಕ್ಕೆ ಸಿಕ್ಕಿದ್ದು 143 ಸಾವು

ನವದೆಹಲಿ (ಪಿಟಿಐ): ಮಾರ್ಚ್ 1ರಿಂದ ಜೂನ್ 20ರ ನಡುವಿನ ಅವಧಿಯಲ್ಲಿ ದೇಶದಲ್ಲಿ ಬಿಸಿಗಾಳಿಯ ಕಾರಣದಿಂದ 143 ಮಂದಿ ಮೃತಪಟ್ಟಿದ್ದಾರೆ. 41,789 ಮಂದಿ ಶಂಕಿತ ಬಿಸಿಲಾಘಾತದಿಂದ ಬಳಲಿದ್ದಾರೆ.

ಆರೋಗ್ಯ ಸಚಿವಾಲಯದ ಅಧೀನದಲ್ಲಿ ಬರುವ ರಾಷ್ಟ್ರೀಯ ರೋಗ ನಿಯಂತ್ರಣ ಕೇಂದ್ರದ ಉಷ್ಣತೆಗೆ ಸಂಬಂಧಿಸಿದ ಅನಾರೋಗ್ಯ ಮತ್ತು ಸಾವಿನ ಮೇಲಿನ ಕಣ್ಗಾವಲು ವರದಿ ಈ ವಿವರ ನೀಡಿದೆ. ರಾಜ್ಯಗಳು ಇನ್ನೂ ಮಾಹಿತಿಗಳನ್ನು ಪರಿಷ್ಕರಿಸಬೇಕಿರುವುದರಿಂದ ಮೃತಪಟ್ಟವರ ಸಂಖ್ಯೆ ಹೆಚ್ಚಲಿದೆ.

‘ಜೂನ್ 11ರಿಂದ 19ರ ನಡುವೆ ಬಿಸಿಗಾಳಿಯ ಕಾರಣಕ್ಕೆ ದೆಹಲಿಯಲ್ಲಿ ವಸತಿರಹಿತ 192 ಮಂದಿ ಮೃತಪಟ್ಟಿದ್ದಾರೆ’ ಎಂದು ‘ದಿ ಸೆಂಟರ್ ಫಾರ್ ಹೋಲಿಸ್ಟಿಕ್ ಡೆವಲಪ್‌ಮೆಂಟ್’ ಎಂಬ ಸ್ವಯಂ ಸೇವಾ ಸಂಸ್ಥೆ ಹೇಳಿಕೊಂಡಿದೆ.

ಹವಾಮಾನ ಬದಲಾವಣೆ ಕಾರಣ

ಹವಾಮಾನ ಬದಲಾವಣೆಯ ಕಾರಣದಿಂದ ಭೂ ವಾತಾವರಣದ ಉಷ್ಣತೆಯಲ್ಲಿ ಆಗುತ್ತಿರುವ ಏರಿಕೆಯು ಬಿಸಿಗಾಳಿಯ ಹಾವಳಿ ಉಂಟುಮಾಡುತ್ತಿದೆ ಎಂದು ಹೇಳುತ್ತದೆ ಅಮೆರಿಕ, ಮೆಕ್ಸಿಕೊ, ಬ್ರಿಟನ್ ಸೇರಿದಂತೆ ಹಲವು ರಾಷ್ಟ್ರಗಳ ವಿಜ್ಞಾನಿಗಳು ನಡೆಸಿರುವ ಅಧ್ಯಯನ.

2,000 ವರ್ಷಗಳಲ್ಲೇ ಕಳೆದ ವರ್ಷದ ಬೇಸಿಗೆ ಅತ್ಯಂತ ‘ಬಿಸಿ’ಯಾಗಿತ್ತು. ಈ ಬಾರಿ ಜಗತ್ತಿನ ಹಲವು ದೇಶಗಳಲ್ಲಿ ತಾಪಮಾನ ದಾಖಲೆ ಮಟ್ಟಕ್ಕೆ ಏರಿದ್ದು, ಈ ವರ್ಷದ ಬೇಸಿಗೆ ಕಳೆದ ವರ್ಷಕ್ಕಿಂತಲೂ ಹೆಚ್ಚು ಬಿಸಿಯಾಗಿರುವ ಸಾಧ್ಯತೆ ಇದೆ ಎಂದು ಹವಾಮಾನ ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಗೇಮ್ ಜೋನ್: ವರದಿ ಸಲ್ಲಿಕೆ

ಅಹಮದಾಬಾದ್ (ಪಿಟಿಐ): 27 ಜನರು ಮೃತಪಟ್ಟ ರಾಜ್‌ಕೋಟ್‌ನ ಟಿಆರ್‌ಪಿ ಗೇಮ್ ಜೋನ್ ಅಗ್ನಿ ದುರಂತದ ತನಿಖೆಗೆ ಗುಜರಾತ್ ಸರ್ಕಾರ ನೇಮಿಸಿರುವ ವಿಶೇಷ ತನಿಖಾ ತಂಡವು (ಎಸ್‌ಐಟಿ) ತನ್ನ ಮಧ್ಯಂತರ ವರದಿಯನ್ನು ಶುಕ್ರವಾರ ಗೃಹಖಾತೆ ರಾಜ್ಯ ಸಚಿವ ಹರ್ಷ್ ಸಾಂಘ್ವಿ ಅವರಿಗೆ ಸಲ್ಲಿಸಿದೆ.

ಹಿರಿಯ ಐಪಿಎಸ್ ಅಧಿಕಾರಿ ಸುಭಾಷ್ ತ್ರಿವೇದಿ ಅವರ ನೇತೃತ್ವದ ಎಸ್‌ಐಟಿ ಸಲ್ಲಿಸಿರುವ ಈ ಮಧ್ಯಂತರ ವರದಿಯು 100 ಪುಟಗಳ ವಿವರಗಳನ್ನು ಒಳಗೊಂಡಿದೆ.

‘ಸರ್ಕಾರಕ್ಕೆ ನಾವು ಇಂದು ಮಧ್ಯಂತರ ವರದಿ’ ಸಲ್ಲಿಸಿದ್ದೇವೆ ಎಂದು ತಿಳಿಸಿದ ತ್ರಿವೇದಿ, ಗುಜರಾತ್ ಪೊಲೀಸ್ ಕಾಯ್ದೆಯ (ಜಿಪಿ ಆ್ಯಕ್ಟ್) ಸೆಕ್ಷನ್ 33ಕ್ಕೆ ಕೆಲವು ಬದಲಾವಣೆ ತರಲು ಸೂಚಿಸಲಾಗಿದೆ. ಇದು ಅಂತಹ ಗೇಮ್ ಜೋನ್‌ಗಳಿಗೆ ವಿವಿಧ ಪರವಾನಗಿಗಳನ್ನು ನೀಡಲು ಪೊಲೀಸರಿಗೆ ಅಧಿಕಾರ ಕಲ್ಪಿಸುತ್ತದೆ ಎಂದರು.

‘ಪೊಲೀಸ್, ಅಗ್ನಿಶಾಮಕ ಇಲಾಖೆ, ಟೌನ್ ಪ್ಲಾನಿಂಗ್, ರಸ್ತೆ ಮತ್ತು ಕಟ್ಟಡ ನಿರ್ಮಾಣ ಇಲಾಖೆಗಳ ಲೋಪಗಳನ್ನು ನಾವು ಪತ್ತೆ ಮಾಡಿದ್ದೇವೆ. ನಾವು ಅವರ ನಿರ್ಲಕ್ಷ್ಯದ ಬಗ್ಗೆ ಸೂಕ್ತ ಪುರಾವೆಗಳನ್ನು ಸಂಗ್ರಹಿಸಿದ್ದೇವೆ. ನಮ್ಮ ವರದಿಯ ಮೂಲಕ ಸರ್ಕಾರದ ಗಮನವನ್ನು ಸೆಳೆದಿದ್ದೇವೆ’ ಎಂದು ತ್ರಿವೇದಿ ಹೇಳಿದರು.

‘ಎನ್‌ಟಿಎ ಅಸಹಕಾರ ದುರದೃಷ್ಟಕರ’

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ನೀಟ್ ಅಕ್ರಮದ ಸಂಬಂಧ ಬಂಧಿತರಾಗಿರುವ ಶಾಲೆಯೊಂದರ ಪ್ರಾಂಶುಪಾಲರಿಗೆ ಗೋಧ್ರಾ ನ್ಯಾಯಾಲಯವು ಜಾಮೀನು ನಿರಾಕರಿಸಿದೆ. ಇದೇ ವೇಳೆ, ಪರೀಕ್ಷೆಯಲ್ಲಿ ಶಂಕಿತರು ನಕಲು ಮಾಡಿದ್ದಾರೆಯೇ ಇಲ್ಲವೇ ಎನ್ನುವುದನ್ನು ತಿಳಿಯಲು ರಾಷ್ಟ್ರೀಯ ಪರೀಕ್ಷಾ ಏಜೆನ್ಸಿಯು (ಎನ್‌ಟಿಎ) ಗೋಧ್ರಾ ಪೊಲೀಸರಿಗೆ ಒಎಂಆರ್ ಹಾಳೆಗಳನ್ನು ಒದಗಿಸದೇ ಇರುವುದು ‘ದುರದೃಷ್ಟಕರ’ ಎಂದು ಗೋಧ್ರಾ ನ್ಯಾಯಾಲಯ ಹೇಳಿದೆ.

ಗೋಧ್ರಾದ ಜಯ್ ಜಲರಾಮ್ ಶಾಲೆಯಲ್ಲಿ ಶಂಕಿತರ ಯೋಜನೆಯನ್ನು ಕೊನೆಯ ಕ್ಷಣದಲ್ಲಿ ವಿಫಲಗೊಳಿಸಲಾಗಿತ್ತು ಮತ್ತು ಜಿಲ್ಲಾಧಿಕಾರಿಯು ಪರೀಕ್ಷಾ ಕೇಂದ್ರದ ಉಸ್ತುವಾರಿಗೆಂದು ಹೆಚ್ಚುವರಿ ಸಿಬ್ಬಂದಿಯನ್ನು ಕಳಿಸಿಕೊಟ್ಟಿದ್ದರಿಂದ ಪರೀಕ್ಷೆಯಲ್ಲಿ ನಕಲು ನಡೆದಿಲ್ಲ ಎಂದು ಸ್ಥಳೀಯ ಪೊಲೀಸರು ಹೇಳಿದ್ದಾರೆ. ಆದರೆ, ದಾಖಲೆಗಳನ್ನು ಪರಿಶೀಲಿಸಿದಾಗ ನಕಲು ನಡೆದಿರುವುದು ತಿಳಿದುಬಂದಿದೆ ಮತ್ತು ಆಯ್ದ ಕೆಲವರಿಗೆ ಅನುಕೂಲ ಮಾಡಿಕೊಡಲಾಗಿದೆ ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿದೆ.

ಇದು ಆರಂಭಿಸಿ, ನಿಲ್ಲಿಸುವ ಪ್ರಕ್ರಿಯೆಯಲ್ಲ ಎಂದ ‘ಸುಪ್ರೀಂ’

‘ಕೌನ್ಸೆಲಿಂಗ್‌ಗೆ ತಡೆಯಾಜ್ಞೆ ಇಲ್ಲ’

ನವದೆಹಲಿ (ಪಿಟಿಐ): ನೀಟ್ ಯುಜಿ ಪರೀಕ್ಷೆಯ ಹಿಂದೆಯೇ ಜುಲೈ 6ರಿಂದ ನಡೆಸಲು ನಿಗದಿಪಡಿಸಿರುವ ಕೌನ್ಸೆಲಿಂಗ್ ಪ್ರಕ್ರಿಯೆಗೆ ತಡೆಯಾಜ್ಞೆ ನೀಡಲು ಸುಪ್ರೀಂ ಕೋರ್ಟ್ ನಿರಾಕರಿಸಿದೆ. ‘ಕೌನ್ಸೆಲಿಂಗ್ ಆರಂಭಿಸಿ, ನಿಲ್ಲಿಸುವ ಪ್ರಕ್ರಿಯೆಯಲ್ಲ’ ಎಂದೂ ಹೇಳಿದೆ.

‘ನೀಟ್–ಯುಜಿ 2024’ ಪರೀಕ್ಷೆಯಲ್ಲಿ ಅಕ್ರಮ ಆರೋಪಗಳ ಹಿನ್ನೆಲೆಯಲ್ಲಿ ಪರೀಕ್ಷೆಯನ್ನು ರದ್ದುಪಡಿಸಲು ಕೋರಿ ಸಲ್ಲಿಸಲಾಗಿದ್ದ ವಿವಿಧ ಅರ್ಜಿಗಳನ್ನು ವಿಚಾರಣೆಗೆ ಪರಿಗಣಿಸಿದ ನ್ಯಾಯಪೀಠ ಶುಕ್ರವಾರ ಈ ಬಗ್ಗೆ ಸ್ಪಷ್ಟ ಅಭಿಪ್ರಾಯ ವ್ಯಕ್ತಪಡಿಸಿತು.

ಪರೀಕ್ಷೆಯನ್ನೇ ರದ್ದುಪಡಿಸಲು ಕೋರಿದ್ದ ಅರ್ಜಿಗಳಿಗೆ ಸಂಬಂಧಿಸಿ ಉತ್ತರ ನೀಡಲು ಸೂಚಿಸಿ ಕೇಂದ್ರ ಸರ್ಕಾರ ಮತ್ತು ರಾಷ್ಟ್ರೀಯ ಪರೀಕ್ಷಾ ಏಜೆನ್ಸಿಗೆ ನೋಟಿಸ್ ಅನ್ನು ಜಾರಿಮಾಡಿತು.

ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್ ಮತ್ತು ಎಸ್.ವಿ.ಎನ್.ಭಟ್ಟಿ ಅವರಿದ್ದ ರಜಾಕಾಲದ ಪೀಠವು, ಈ ಸಂಬಂಧಿತ ವಿಚಾರಣೆಯನ್ನು ಜುಲೈ 8ಕ್ಕೆ ಮುಂದೂಡಿತು.

ಮರುಪರೀಕ್ಷೆಗೆ ತಡೆ ನೀಡಲು ನಕಾರ

ನವದೆಹಲಿ: ಕೃಪಾಂಕ ರದ್ದತಿ ಬಳಿಕ 1,563 ಅಭ್ಯರ್ಥಿಗಳಿಗೆ ನಡೆಸಲು ಉದ್ದೇಶಿರುವ ನೀಟ್ –ಯುಜಿ ಮರುಪರೀಕ್ಷೆಗೆ ತಡೆಯಾಜ್ಞೆ ನೀಡಲು ಸುಪ್ರೀಂ ಕೋರ್ಟ್ ನಿರಾಕರಿಸಿದೆ.

‘ಅರ್ಜಿದಾರರು ಈ ವಿಚಾರಣೆಯ ಅಂತಿಮ ತೀರ್ಮಾನದವರೆಗೆ ಕಾಯಬೇಕು. ಒಂದು ವೇಳೆ ಅವರಿಗೆ ಜಯ ಲಭಿಸಿದಲ್ಲಿ ಇಡೀ ಪರೀಕ್ಷಾ ಪ್ರಕ್ರಿಯೆಯೇ ರದ್ದಾಗಲಿದೆ’ ಎಂದು ಹೇಳಿತು.

‘ನೀಟ್ ಯುಜಿ’ ವಿಶ್ವಾಸಾರ್ಹತೆಯನ್ನು ಪ್ರಶ್ನಿಸಿದ್ದ ಅರ್ಜಿಗಳ ವಿಚಾರಣೆ ವೇಳೆ ನ್ಯಾಯಮೂರ್ತಿಗಳಾದ ವಿಕ್ರಂನಾಥ್ ಮತ್ತು ಎಸ್.ವಿ.ಎನ್.ಭಟ್ಟಿ ಅವರಿದ್ದ ಪೀಠ ಈ ಮಾತು ಹೇಳಿತು.

ಸರ್ಕಾರ ಸ್ವತಂತ್ರವಾಗಿದೆ: ತೇಜಸ್ವಿ

ಪಟ್ನಾ (ಪಿಟಿಐ): ಉಪ ಮುಖ್ಯಮಂತ್ರಿ ವಿಜಯ್ ಕುಮಾರ್ ಸಿನ್ಹಾ ಮಾಡಿರುವ ಆರೋಪಗಳ ಕುರಿತು ಉನ್ನತ ಮಟ್ಟದ ತನಿಖೆಗೆ ಆದೇಶಿಸಲು ರಾಜ್ಯ ಸರ್ಕಾರ ಸ್ವತಂತ್ರವಾಗಿದೆ ಎಂದು ಹೇಳಿರುವ ಆರ್‌ಜೆಡಿ ನಾಯಕ ತೇಜಸ್ವಿ ಯಾದವ್, ಇತರ ಇಬ್ಬರು ಆರೋಪಿಗಳ ಜತೆಗಿನ ಬಿಜೆಪಿ ಸಂಪರ್ಕದ ಬಗ್ಗೆಯೂ ತನಿಖೆ ಆಗಬೇಕಿದೆ ಎಂದು ಪ್ರತಿಪಾದಿಸಿದರು.

‘ತನಿಖಾ ಸಂಸ್ಥೆಗಳು ಕೇಂದ್ರದ ಬಿಜೆಪಿ ಸರ್ಕಾರದ ಅಡಿಯಲ್ಲಿಯೇ ಇವೆ. ರಾಜ್ಯದಲ್ಲಿ ಅವರ ಪಕ್ಷವು ಸರ್ಕಾರದ ಭಾಗವಾಗಿದೆ. ಹೀಗಿರುವಾಗ ತನಿಖೆಗೆ ಆದೇಶಿಸಲು ಏಕೆ ಹಿಂಜರಿಯುತ್ತಿದ್ದಾರೆ’ ಎಂದು ಅವರು ಪ್ರಶ್ನಿಸಿದರು.

ಸಿಬಿಐಗೆ ವಹಿಸಲು ಡಿಸಿಎಂ ಮನವಿ

ಪಟ್ನಾ (ಪಿಟಿಐ): ‘ನೀಟ್’ ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣದಲ್ಲಿ ಬಂಧಿತನಾಗಿರುವ ಪ್ರಮುಖ ಶಂಕಿತ ಆರೋಪಿ ಮತ್ತು ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ಅವರ ಅಧಿಕಾರಿಗಳ ಜತೆಗಿನ ಸಂಬಂಧಗಳ ಕುರಿತು ತಿಳಿದುಕೊಳ್ಳಲು ಸಿಬಿಐ ತನಿಖೆಗೆ ಶಿಫಾರಸು ಮಾಡುವಂತೆ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರಿಗೆ ಮನವಿ ಮಾಡುವುದಾಗಿ ಬಿಹಾರದ ಉಪಮುಖ್ಯಮಂತ್ರಿ ವಿಜಯ್ ಕುಮಾರ್ ಸಿನ್ಹಾ ಶುಕ್ರವಾರ ತಿಳಿಸಿದರು.

ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣದ ಪ್ರಮುಖ ಆರೋಪಿಯಾಗಿರುವ ಸಿಕಂದರ್ ಪ್ರಸಾದ್ ಯದುವೇಂದು ಅವರು ತೇಜಸ್ವಿ ಯಾದವ್ ಅವರ ಅಧಿಕಾರಿಗಳ ಜತೆ ನಿರಂತರ ಸಂಪರ್ಕದಲ್ಲಿದ್ದಾರೆ ಎಂದು ಸಿನ್ಹಾ ಗುರುವಾರ ಆರೋಪಿಸಿದ್ದರು. ಈ ಬಗ್ಗೆ ತನಿಖೆ ಆಗಬೇಕು ಎಂದೂ ಆಗ್ರಹಿಸಿದ್ದರು.

ಸಿಬಿಐ ಅಥವಾ ಯಾವುದೇ ಸ್ವತಂತ್ರ ಸಂಸ್ಥೆಯಿಂದ ತನಿಖೆ ನಡೆಸುವುದಕ್ಕೆ ಶಿಫಾರಸು ಮಾಡುವ ವಿಶೇಷ ಅಧಿಕಾರಿ ಮುಖ್ಯಮಂತ್ರಿ ಅವರಿಗಿದೆ. ಹೀಗಾಗಿ ಮುಖ್ಯಮಂತ್ರಿಯನ್ನು ಭೇಟಿ ಮಾಡಿ ಈ ಕುರಿತು ಮನವಿ ಮಾಡಲಾಗುವುದು ಎಂದು ಅವರು ಪಿಟಿಐಗೆ ತಿಳಿಸಿದರು.

ಈ ಪ್ರಕರಣದ ತನಿಖೆ ನಡೆಸುತ್ತಿರುವ ಬಿಹಾರದ ಪೊಲೀಸ್ ಇಲಾಖೆಯ ಆರ್ಥಿಕ ಅಪರಾಧಗಳ ಘಟಕ (ಇಒಯು) ಸಹ, ಆರೋಪಿ ಮತ್ತು ಆರ್‌ಜೆಡಿ ನಾಯಕನ ಅಧಿಕಾರಿಗಳ ಜತೆಗಿನ ಸಂಬಂಧದ ಕುರಿತು ತನಿಖೆ ಮಾಡುತ್ತದೆ ಎಂದು ಭಾವಿಸಿದ್ದೇನೆ ಎಂದು ಅವರು ಹೇಳಿದರು.

ನೀಟ್: ದೇಶದ ವಿವಿಧೆಡೆ ಕಾಂಗ್ರೆಸ್ ಪ್ರತಿಭಟನೆ

ಶಿಕ್ಷಣ ಸಚಿವರ ರಾಜೀನಾಮೆಗೆ ಆಗ್ರಹ ● ‘ಸುಪ್ರೀಂ’ ಮೇಲ್ವಿಚಾರಣೆಯಲ್ಲಿ ತನಿಖೆಗೆ ಒತ್ತಾಯ

ನವದೆಹಲಿ (ಪಿಟಿಐ): ‘ನೀಟ್–ಯುಜಿ’ ಪರೀಕ್ಷಾ ಅಕ್ರಮಗಳನ್ನು ವಿರೋಧಿಸಿ ಮತ್ತು ನೀಟ್ ಮರು ಪರೀಕ್ಷೆಗೆ ಆಗ್ರಹಿಸಿ ಕಾಂಗ್ರೆಸ್, ರಾಷ್ಟ್ರ ರಾಜಧಾನಿ ದೆಹಲಿ, ಮುಂಬೈ, ಲಖನೌ, ರಾಂಚಿ, ಚಂಡೀಗಢ, ಜೈಪುರ, ಕೋಹಿಮಾ ಸೇರಿದಂತೆ ದೇಶದ ವಿವಿಧೆಡೆ ಶುಕ್ರವಾರ ಪ್ರತಿಭಟನೆ ನಡೆಸಿದೆ.

ಕೇಂದ್ರ ಸರ್ಕಾರ, ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ವಿರುದ್ಧ ಪ್ರತಿಭಟನಕಾರರು ಆಕ್ರೋಶ ವ್ಯಕ್ತಪಡಿಸಿದರು. ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರ ರಾಜೀನಾಮೆಗೆ ಆಗ್ರಹಿಸಿದರು. ಎನ್‌ಟಿಎ ಮುಖ್ಯಸ್ಥರ ವಿರುದ್ಧ ಮತ್ತು ತಪ್ಪು ಮಾಡಿದ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಪ್ರತಿಭಟನಕಾರರು ಒತ್ತಾಯಿಸಿದರು.

ವಿವಿಧ ರಾಜ್ಯಗಳ ರಾಜಧಾನಿಗಳಲ್ಲಿ ಆಯಾ ರಾಜ್ಯಗಳ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರ ನೇತೃತ್ವದಲ್ಲಿ ಪ್ರತಿಭಟನೆಗಳು ಜರುಗಿದವು. ಪ್ರತಿಭಟನಾ ಮೆರವಣಿಗೆಯಲ್ಲಿ ಸಾಗಿದ ನಾಯಕರು ಮತ್ತು ಕಾರ್ಯಕರ್ತರು ಕೇಂದ್ರ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು.

ವಿದ್ಯಾರ್ಥಿಗಳ ಭವಿಷ್ಯಕ್ಕೆ ಸಂಬಂಧಿಸಿದ ಈ ವಿಷಯ ಕುರಿತು ಕಾಂಗ್ರೆಸ್ ಸಂಸತ್ತಿನಲ್ಲಿ ಧ್ವನಿಯೆತ್ತಲಿದೆ ಎಂದು ಪಕ್ಷದ ನಾಯಕರು ಹೇಳಿದರು. ವಿವಿಧೆಡೆ ಪ್ರತಿಭಟನೆ ಕೈಗೊಂಡಿದ್ದ ಹಲವು ಕಾರ್ಯಕರ್ತರನ್ನು ಪೊಲೀಸರು ಬಂಧಿಸಿದರು.

ಪ್ರಮುಖ ಬೇಡಿಕೆಗಳು...

- ಮೇ 5ರಂದು ನಡೆದಿದ್ದ ನೀಟ್ ರದ್ದುಗೊಳಿಸಬೇಕು
- ನೀಟ್ ಅಕ್ರಮಗಳ ಕುರಿತು ಸುಪ್ರೀಂ ಕೋರ್ಟ್‌ನ ಹಾಲಿ ನ್ಯಾಯಮೂರ್ತಿ ಮೇಲ್ವಿಚಾರಣೆಯಲ್ಲಿ ತನಿಖೆ ನಡೆಸಬೇಕು
- ಪರೀಕ್ಷೆ ಬರೆದ ಅಭ್ಯರ್ಥಿಗಳು ಮತ್ತು ಪೋಷಕರ ಆತಂಕ ದೂರ ಮಾಡುವ ಹೊಣೆಯನ್ನು ಪ್ರಧಾನಿ ನಿರ್ವಹಿಸುತ್ತಿಲ್ಲ. ಅವರು ಇನ್ನೂ ಏಕೆ ಮೌನವಾಗಿದ್ದಾರೆ
- ಪರೀಕ್ಷಾ ನಿರ್ವಹಣೆಯಲ್ಲಿನ ಲೋಪದ ಹೊಣೆಯನ್ನು ಸರ್ಕಾರವೇ ಹೊರಬೇಕು. ಲಕ್ಷಾಂತರ ಅಭ್ಯರ್ಥಿಗಳ ಭವಿಷ್ಯವನ್ನು ರಕ್ಷಿಸುವ ಜವಾಬ್ದಾರಿ ತೆಗೆದುಕೊಳ್ಳಬೇಕು
- ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಬೇಕು
- ಗುಜರಾತ್, ಬಿಹಾರ ಪೊಲೀಸರು ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಹಲವರನ್ನು ಬಂಧಿಸಿದ್ದರೂ ಪರೀಕ್ಷಾ ಅಕ್ರಮಗಳ ಕುರಿತು ಸರ್ಕಾರ ಏಕೆ ಮೌನವಹಿಸಿದೆ
- ಶಿಕ್ಷಣವನ್ನು ರಾಜಕೀಯಗೊಳಿಸಬಾರದು ಮತ್ತು ವಿದ್ಯಾರ್ಥಿಗಳಿಗೆ ನ್ಯಾಯ ದೊರೆಯಬೇಕು



‘ನೀಟ್–ಯುಜಿ’ ಪರೀಕ್ಷಾ ಅಕ್ರಮ ವಿರೋಧಿಸಿ ಉತ್ತರ ಪ್ರದೇಶದ ಕಾಂಗ್ರೆಸ್ ನಾಯಕರು ಮತ್ತು ಕಾರ್ಯಕರ್ತರು ಲಖನೌದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು. ಪೊಲೀಸರು ಹಾಕಿದ್ದ ಬ್ಯಾರಿಕೇಡ್‌ಗಳನ್ನು ಪ್ರತಿಭಟನಕಾರರು ದಾಟಲು ಪ್ರಯತ್ನಿಸಿದರು —ಪಿಟಿಐ ಚಿತ್ರ

ಯೋಗ ದಿನಕ್ಕೆ ಹಾಜರಾಗದ ಪ್ರಧಾನ್

ನವದೆಹಲಿ (ಪಿಟಿಐ): ದೆಹಲಿ ವಿಶ್ವವಿದ್ಯಾಲಯದ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಶುಕ್ರವಾರ ಭಾಗವಹಿಸಬೇಕಿದ್ದ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು, ಕೆಲ ವಿದ್ಯಾರ್ಥಿಗಳು ನಡೆಸಿದ ಪ್ರತಿಭಟನೆಯಿಂದಾಗಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳದೇ ದೂರ ಉಳಿದರು.

‘ನೀಟ್– ಯುಜಿ’ ಮತ್ತು ಯುಜಿಸಿ– ನೆಟ್ ಅಕ್ರಮಗಳನ್ನು ವಿರೋಧಿಸಿ ಎಡಪಂಥೀಯ ಸಂಘಟನೆ ಅಖಿಲ ಭಾರತ ವಿದ್ಯಾರ್ಥಿಗಳ ಸಂಘದ (ಎಐಎಸ್‌ಎ) ಸದಸ್ಯರು ವಿಶ್ವವಿದ್ಯಾಲಯದ ಇತರ ವಿದ್ಯಾರ್ಥಿಗಳೊಂದಿಗೆ ಕ್ಯಾಂಪಸ್‌ನಲ್ಲಿ ಕಪ್ಪು ಬಾವುಟ ಪ್ರದರ್ಶಿಸಿ ಪ್ರತಿಭಟಿಸಿದರು.

ಅಂತರರಾಷ್ಟ್ರೀಯ ಯೋಗ ದಿನಾಚರಣೆ ಪ್ರಯುಕ್ತ ಬೆಳಿಗ್ಗೆ 6 ಗಂಟೆಗೆ ಕಾರ್ಯಕ್ರಮ ನಿಗದಿಯಾಗಿತ್ತು. ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಬೇಕಿದ್ದ ಸಚಿವ ಪ್ರಧಾನ್ ಅವರು ಕೆಲ ತುರ್ತು ಕೆಲಸದ ಕಾರಣ ಭಾಗವಹಿಸಲು ಸಾಧ್ಯವಾಗಿಲ್ಲ ಎಂದು ದೆಹಲಿ ವಿ.ವಿ ಅಧಿಕಾರಿಗಳು ತಿಳಿಸಿದರು.

‘ಭ್ರಷ್ಟ ಮತ್ತು ದುರಹಂಕಾರಿ ಶಿಕ್ಷಣ ಸಚಿವರನ್ನು ನಮ್ಮ ವಿಶ್ವವಿದ್ಯಾಲಯಕ್ಕೆ ಸ್ವಾಗತಿಸಲು ಆಗುವುದಿಲ್ಲ. ಅವರು ಮತ್ತು ಎನ್‌ಟಿಎಯಿಂದ ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯಕ್ಕೆ ಧಕ್ಕೆ ಆಗಿದೆ’ ಎಂದು ದೆಹಲಿ ವಿ.ವಿ ಎಐಎಸ್‌ಎ ಘಟಕ ಪ್ರಕಟಣೆಯಲ್ಲಿ ತಿಳಿಸಿದೆ.

ಪ್ರಧಾನ್ ರಾಜೀನಾಮೆ ಸಲ್ಲಿಸಬೇಕು ಎಂದು ವಿದ್ಯಾರ್ಥಿಗಳು ಆಗ್ರಹಿಸಿದರು.

> ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ವಿಷಯದಲ್ಲಿ ಅಕ್ರಮ ಎಸಗಿದ ಆರೋಪಿಗಳ ವಿರುದ್ಧ ಕಠಿಣ ಕ್ರಮ ಕೈಗೊಂಡು, ಅಮಾಯಕ ವಿದ್ಯಾರ್ಥಿಗಳಿಗೆ ನ್ಯಾಯ ಒದಗಿಸಬೇಕು
> **ಮಾಯಾವತಿ,** ಬಿಎಸ್‌ಪಿ ಅಧ್ಯಕ್ಷೆ

ಸಿಎಸ್‌ಐಆರ್ ನೆಟ್ ಪರೀಕ್ಷೆ ರದ್ದು

ನವದೆಹಲಿ: ಸಿಎಸ್‌ಐಆರ್ ಯುಜಿಸಿ ನೆಟ್ ಪರೀಕ್ಷೆಯನ್ನು ‘ಅನಿವಾರ್ಯ ಪರಿಸ್ಥಿತಿಗಳಿಂದಾಗಿ’ ಮುಂದೂಡಲಾಗಿದೆ ಎಂದು ರಾಷ್ಟ್ರೀಯ ಪರೀಕ್ಷಾ ಏಜೆನ್ಸಿಯು (ಎನ್‌ಟಿಎ) ಶುಕ್ರವಾರ ಘೋಷಿಸಿದೆ.

ನೀಟ್ ಪರೀಕ್ಷೆಯಲ್ಲಿ ಲೋಪಗಳಾಗಿವೆ ಎಂದು ಕೇಂದ್ರ ಶಿಕ್ಷಣ ಸಚಿವರು ಒಪ್ಪಿಕೊಂಡ ಒಂದು ದಿನದ ನಂತರ ಹಾಗೂ ಯುಜಿಸಿ ನೆಟ್ ಪರೀಕ್ಷೆ ರದ್ದು ಮಾಡಿದ ಎರಡು ದಿನಗಳ ನಂತರ ಈ ಬೆಳವಣಿಗೆ ನಡೆದಿದೆ.

‘25.06.2024ರಿಂದ 27.06.2024ರವರೆಗೆ ನಡೆಯಬೇಕಿದ್ದ ಸಿಎಸ್‌ಐಆರ್ ನೆಟ್ ಪರೀಕ್ಷೆಯನ್ನು ಮುಂದೂಡಲಾಗಿದ್ದು, ಪರಿಷ್ಕೃತ ವೇಳಾಪಟ್ಟಿಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು’ ಎಂದು ಎನ್‌ಟಿಎ ತಿಳಿಸಿದೆ. ಸಿಎಸ್‌ಐಆರ್ ಯುಜಿಸಿ ನೆಟ್, ವಿಜ್ಞಾನ ವಿಭಾಗದ ಕೆಮಿಕಲ್ ವಿಜ್ಞಾನ, ಭೂ ವಿಜ್ಞಾನ, ಜೀವ ವಿಜ್ಞಾನ, ಭೌತವಿಜ್ಞಾನ, ಗಣಿತ ವಿಷಯಗಳ ಉಪನ್ಯಾಸಕರಿಗೆ ನಡೆಸುವ ಅರ್ಹತಾ ಪರೀಕ್ಷೆಯಾಗಿದೆ.

ತೆಲಂಗಾಣ: ಕೃಷಿ ಸಾಲ ಮನ್ನಾಕ್ಕೆ ಸಂಪುಟ ಅಸ್ತು

ಹೈದರಾಬಾದ್: ಕೃಷಿ ಸಾಲ ಮನ್ನಾ ಯೋಜನೆಗೆ ಅನುಮೋದನೆ ನೀಡಿರುವ ತೆಲಂಗಾಣ ಸಚಿವ ಸಂಪುಟ, ‘ರೈತು ಭರೋಸಾ’ ಯೋಜನೆ ಅನುಷ್ಠಾನದಲ್ಲಿ ಪಾರದರ್ಶಕತೆ ಖಾತ್ರಿಪಡಿಸುವ ಸಲುವಾಗಿ ಸಂಪುಟ ಉಪಸಮಿತಿ ನೇಮಕ ಮಾಡಲು ಶುಕ್ರವಾರ ನಿರ್ಧರಿಸಿದೆ.

ಅಸ್ಸಾಂ: 4 ಲಕ್ಷಕ್ಕೂ ಹೆಚ್ಚು ಜನ ಪ್ರವಾಹ ಸಂಕಷ್ಟದಲ್ಲಿ

ಗುವಾಹಟಿ (ಪಿಟಿಐ): ಅಸ್ಸಾಂನಲ್ಲಿ ಕಳೆದ ಕೆಲವು ದಿನಗಳಿಂದ ಸುರಿಯುತ್ತಿರುವ ಧಾರಾಕಾರ ಮಳೆ ಶುಕ್ರವಾರವೂ ಮುಂದುವರಿದಿದ್ದು, ಹಲವು ಜಿಲ್ಲೆಗಳ ನಾಲ್ಕು ಲಕ್ಷಕ್ಕೂ ಹೆಚ್ಚು ಮಂದಿ ಪ್ರವಾಹದಲ್ಲಿ ಸಿಲುಕಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮತ್ತೊಂದೆಡೆ ಮುಂದಿನ ಎರಡು ದಿನಗಳವರೆಗೆ ಅಸ್ಸಾಂನ ಕೆಲವು ಭಾಗಗಳಲ್ಲಿ ಗುಡುಗು ಮತ್ತು ಮಿಂಚು ಸಹಿತ ಹಾಗೂ ಮತ್ತೆ ಕೆಲವು ಕಡೆ ಸಣ್ಣ ಪ್ರಮಾಣದ ಮಳೆ ಮುಂದುವರಿಯುವ ಸಾಧ್ಯತೆ ಇದೆ.

ಕೊಪಿಲಿ, ಬರಾಕ್ ಮತ್ತು ಕುಶಿಯಾರ ಸೇರಿದಂತೆ ಹಲವು ನದಿಗಳು ಅಪಾಯದ ಮಟ್ಟ ಮೀರಿ ಹರಿಯುತ್ತಿವೆ ಎಂದು ವರದಿಗಳು ತಿಳಿಸಿವೆ.

ಕರೀಂಗಂಜ್ ಜಿಲ್ಲೆಯಲ್ಲಿ ಅತಿಹೆಚ್ಚು ಅಂದರೆ 2.5 ಲಕ್ಷಕ್ಕೂ ಹೆಚ್ಚು ಮಂದಿ ಪ್ರವಾಹದಲ್ಲಿ ಸಿಲುಕಿದ್ದಾರೆ. ದರಂಗ ಮತ್ತು ತಾಮುಲಪುರ ಜಿಲ್ಲೆಗಳಲ್ಲೂ ಹೆಚ್ಚಿನ ಹಾನಿಯಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಅಸ್ಸಾಂನಲ್ಲಿ ಈ ವರ್ಷ ಸಂಭವಿಸಿದ ಪ್ರವಾಹ, ಭೂಕುಸಿತ ಮತ್ತು ಚಂಡಮಾರುತದಲ್ಲಿ ಒಟ್ಟಾರೆ 36 ಮಂದಿ ಮೃತಪಟ್ಟಿದ್ದಾರೆ. ಪ್ರವಾಹದಲ್ಲಿ ಸಿಲುಕಿದವರ ರಕ್ಷಣೆಗಾಗಿ ಆರಂಭಿಸಲಾಗಿರುವ 100ಕ್ಕೂ ಹೆಚ್ಚು ಶಿಬಿರಗಳಲ್ಲಿ 14,000 ಮಂದಿ ಆಶ್ರಯ ಪಡೆದಿದ್ದಾರೆ.

‘ಯೋಗಾಸನ’ ಪ್ರದರ್ಶನ, ಸಂಭ್ರಮ

ಭಾರತ ಹಾಗೂ ವಿಶ್ವದಾದ್ಯಂತ ಅಂತರರಾಷ್ಟ್ರೀಯ ಯೋಗ ದಿನ ಆಚರಣೆ

ನವದೆಹಲಿ(ಪಿಟಿಐ): ಭಾರತ ಹಾಗೂ ವಿಶ್ವದೆಲ್ಲೆಡೆ ಜನರು ಶುಕ್ರವಾರ ಯೋಗಾಸನದ ಮೂಲಕ ಅಂತರ ರಾಷ್ಟ್ರೀಯ ಯೋಗ ದಿನವನ್ನು ಸಂಭ್ರಮದಿಂದ ಆಚರಿಸಿದರು.

ದೇಶದ ಎಲ್ಲೆಡೆ ಹಮ್ಮಿಕೊಂಡಿದ್ದ ಕಾರ್ಯಕ್ರಮಗಳಲ್ಲಿ, ಜನರು ಯೋಗಾಸನಗಳನ್ನು ಹಾಕುವ ಮೂಲಕ ಅಂತರ ರಾಷ್ಟ್ರೀಯ ಯೋಗ ದಿನಾಚರಣೆಗೆ ಮೆರುಗು ತಂದರು.

ಕಾಶ್ಮೀರದ ಶ್ರೀನಗರದಲ್ಲಿರುವ ದಾಲ್ ಸರೋವರದ ತಟದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಪ್ರಧಾನಿ ನರೇಂದ್ರ ಮೋದಿ ಅವರು ಹಲವು ಆಸನಗಳನ್ನು ಪ್ರದರ್ಶಿಸುವ ಮೂಲಕ ಯೋಗಾಭ್ಯಾಸ ಮಾಡುವಂತೆ ಜನರನ್ನು ಹುರಿದುಂಬಿಸಿದರು.

ಭಾರಿ ಸಂಖ್ಯೆಯಲ್ಲಿ ಸೇರಿದ್ದ ವಿದ್ಯಾರ್ಥಿಗಳು, ಮೋದಿ ಅವರೊಂದಿಗೆ ವಿವಿಧ ಆಸನಗಳನ್ನು ಹಾಕಿ ಸಂಭ್ರಮಿಸಿದರು. ಅವರೊಂದಿಗೆ ಸೆಲ್ಫಿ ತೆಗೆದುಕೊಂಡರು.

ದಾಲ್ ಸರೋವರ ದಡದಲ್ಲಿರುವ ಶೇರ್–ಎ–ಕಾಶ್ಮೀರ್ ಅಂತರರಾಷ್ಟ್ರೀಯ ಸಮ್ಮೇಳನ ಕೇಂದ್ರದಲ್ಲಿ (ಎಸ್‌ಕೆಐಸಿಸಿ) ನಡೆದ 10ನೇ ಅಂತರರಾಷ್ಟ್ರೀಯ ಯೋಗ ದಿನ ಉದ್ದೇಶಿಸಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ, ‘ಯೋಗ ಕುರಿತು ಜನರು ಮಾತನಾಡಿದಾಗಲೆಲ್ಲಾ, ಅದು ಅಲ್ಲಾ, ಈಶ್ವರ ಅಥವಾ ದೇವರನ್ನು ಕಾಣುವುದಕ್ಕೆ ಕ್ರಮಿಸುವ ಆಧ್ಯಾತ್ಮಿಕ ಪಯಣ ಎಂದೇ ಎಲ್ಲರು ಭಾವಿಸುತ್ತಾರೆ’ ಎಂದರು.


‘ಆಧ್ಯಾತ್ಮಿಕ ಪಯಣ ಎಂಬುದನ್ನು ಕ್ಷಣ ಕಾಲ ಬದಿಗಿಟ್ಟು ಯೋಚಿಸಿದರೆ, ವೈಯಕ್ತಿಕ ಬೆಳವಣಿಗೆ ಕುರಿತು ಎಲ್ಲರೂ ಗಮನ ಕೇಂದ್ರೀಕರಿಸಬೇಕು. ಯೋಗ ಎಂಬುದು ಈ ವೈಯಕ್ತಿಕ ಪ್ರಗತಿಯ ಭಾಗವೇ ಆಗಿದೆ’ ಎಂದು ಅವರು ಹೇಳಿದರು.

ಸರೋವರದ ದಡದಲ್ಲಿನ ಬಯಲಿನಲ್ಲಿ ಯೋಗ ಕಾರ್ಯಕ್ರಮ ನಡೆಸಲು ನಿರ್ಧರಿಸಲಾಗಿತ್ತು. ಆದರೆ, ಬೆಳಿಗ್ಗೆಯಿಂದಲೇ ಮಳೆ ಸಿಂಚನವಾಗುತ್ತಿದ್ದ ಕಾರಣ, ಕೇಂದ್ರದ ಒಳಗಡೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

ರಾಜ್ಯಗಳಲ್ಲಿ ಹಮ್ಮಿಕೊಂಡಿದ್ದ ಯೋಗ ದಿನಾಚರಣೆ ಕಾರ್ಯಕ್ರಮಗಳಲ್ಲಿ ಆಯಾ ರಾಜ್ಯಗಳ ಮುಖ್ಯಮಂತ್ರಿಗಳು, ಸಚಿವರು ಹಾಗೂ ರಾಜ್ಯಪಾಲರು ಪಾಲ್ಗೊಂಡಿದ್ದರು.

ಕೇಂದ್ರ ಗೃಹ ಸಚಿವ ಅಮಿತ್ ಶಾ, ವಿದೇಶಾಂಗ ಸಚಿವ ಎಸ್. ಜೈಶಂಕರ್, ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ವಿವಿಧ ನಗರಗಳಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರು.

ಜನಾಂಗೀಯ ಸಂಘರ್ಷದಿಂದ ನಲುಗಿರುವ ಮಣಿಪುರದ ರಾಜಧಾನಿ ಇಂಫಾಲ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಎನ್.ಬೀರೇನ್ ಸಿಂಗ್ ಪಾಲ್ಗೊಂಡಿದ್ದರು.



10ನೇ ಅಂತರರಾಷ್ಟ್ರೀಯ ಯೋಗ ದಿನ ಅಂಗವಾಗಿ ಕಾಶ್ಮೀರದ ಶ್ರೀನಗರದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಪ್ರಧಾನಿ ನರೇಂದ್ರ ಮೋದಿ ಅವರ ಯೋಗಾಸನದ ಭಂಗಿ —ಪಿಟಿಐ ಚಿತ್ರ

ವಿದೇಶದಲ್ಲೂ ‘ಯೋಗ’ ದರ್ಶನ

ವಿವಿಧ ದೇಶಗಳಲ್ಲಿರುವ ಭಾರತದ ರಾಯಭಾರ ಕಚೇರಿಗಳು ಹಾಗೂ ಕಾನ್ಸುಲೇಟ್ ಜನರಲ್ ಕಚೇರಿಗಳಲ್ಲಿ ಶುಕ್ರವಾರ ಅಂತರರಾಷ್ಟ್ರೀಯ ಯೋಗ ದಿನದ ಅಂಗವಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.

ನ್ಯೂಯಾರ್ಕ್‌ನಲ್ಲಿ ‘ಟೈಮ್ಸ್ ಸ್ಕ್ವೇರ್ ಅಲಯನ್ಸ್’ ಸಹಯೋಗದಲ್ಲಿ ಭಾರತೀಯ ಕಾನ್ಸುಲೇಟ್ ಕಚೇರಿಯು ಟೈಮ್ಸ್ ಸ್ಕ್ವೇರ್‌ನಲ್ಲಿ ಯೋಗಾಸನ ಪ್ರದರ್ಶನ ಹಮ್ಮಿಕೊಂಡಿತ್ತು.

ವಾಷಿಂಗ್ಟನ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ನೂರಾರು ಜನರು ಭಾಗವಹಿಸಿದ್ದರು.

ಇಸ್ರೇಲ್‌ನ ಟೆಲ್ ಅವೀವ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ 300ಕ್ಕೂ ಹೆಚ್ಚು ಜನರು ಪಾಲ್ಗೊಂಡಿದ್ದರು.

ಸಿಂಗಪುರ, ಶ್ರೀಲಂಕಾ, ಫ್ರಾನ್ಸ್, ಬ್ರಿಟನ್, ಮಲೇಷ್ಯಾ, ಇಂಡೋನೇಷ್ಯಾ, ಕುವೈತ್, ಇಟಲಿ ಸೇರಿದಂತೆ ವಿವಿಧ ದೇಶಗಳಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮಗಳಲ್ಲಿ ಜನರು ಉತ್ಸಾಹದಿಂದ ಪಾಲ್ಗೊಂಡಿದ್ದರು.

> ದೈಹಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ಸ್ವಾಸ್ಥ್ಯಕ್ಕೆ ಇರುವ ದಾರಿಯೇ ಯೋಗ. ಇದನ್ನು ನಮ್ಮ ದೈನಂದಿನ ಜೀವನದ ಅವಿಭಾಜ್ಯ ಅಂಗವನ್ನಾಗಿ ಮಾಡಿಕೊಳ್ಳೋಣ
> **ದ್ರೌಪದಿ ಮುರ್ಮು**
> ರಾಷ್ಟ್ರಪತಿ

ಮುಖ್ಯಾಂಶಗಳು

- ‘ಸ್ವಂತಕ್ಕೆ ಮತ್ತು ಸಮಾಜಕ್ಕಾಗಿ ಯೋಗ’ ಎಂಬುದು ಈ ಬಾರಿಯ ಧ್ಯೇಯವಾಕ್ಯವಾಗಿದೆ
- ಯುದ್ಧವಿಮಾನ ವಾಹಕ ನೌಕೆ ಐಎನ್‌ಎಸ್ ವಿಕ್ರಮಾದಿತ್ಯ ಅಂಗಳದಲ್ಲಿ ಯೋಗಾಸನ ಹಾಕಿದ ಸಿಬ್ಬಂದಿ
- ರಾಷ್ಟ್ರಪತಿಗಳ ಸಚಿವಾಲಯದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಪಾಲ್ಗೊಂಡಿದ್ದರು
- ತಮಿಳುನಾಡಿನ ರಾಮೇಶ್ವರದಲ್ಲಿ ಜನರ ಗುಂಪೊಂದು ‘ಜಲ ಯೋಗ’ ಪ್ರದರ್ಶಿಸಿ ಗಮನ ಸೆಳೆದರು
- ಸಿಯಾಚಿನ್‌ನ ಹಿಮಚ್ಛಾದಿತ ಪರ್ವತಗಳಲ್ಲಿ ಸಶಸ್ತ್ರ ಪಡೆಗಳು ಮತ್ತು ಅರೆಸೇನಾ ಪಡೆಗಳ ಯೋಧರು ‘ಯೋಗಾಸನ’ ಪ್ರದರ್ಶಿಸಿದರು

ಸಂಕ್ಷಿಪ್ತ ಸುದ್ದಿ

ನೀರಿಗಾಗಿ ಆತಿಶಿ ಅನಿರ್ದಿಷ್ಟಾವಧಿ ಉಪವಾಸ ಆರಂಭ

ನವದೆಹಲಿ (ಪಿಟಿಐ): ಹರಿಯಾಣದಿಂದ ದೆಹಲಿಗೆ ಹೆಚ್ಚಿನ ನೀರು ಬಿಡುವಂತೆ ಒತ್ತಾಯಿಸಿ ದೆಹಲಿ ಜಲ ಸಚಿವೆ ಆತಿಶಿ ಅವರು ಶುಕ್ರವಾರ ದಕ್ಷಿಣ ದೆಹಲಿಯ ಭೋಗಲ್‌ನಲ್ಲಿ ಅನಿರ್ದಿಷ್ಟಾವಧಿ ಉಪವಾಸ ಸತ್ಯಾಗ್ರಹವನ್ನು ಆರಂಭಿಸಿದರು.



ಆತಿಶಿ

ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಪತ್ನಿ ಸುನೀತಾ ಕೇಜ್ರಿವಾಲ್, ಎಎಪಿ ಸಂಸದ ಸಂಜಯ್ ಸಿಂಗ್ ಮತ್ತು ದೆಹಲಿ ಸಚಿವ ಸೌರಭ್ ಭಾರದ್ವಾಜ್ ಉಪಸ್ಥಿತರಿದ್ದರು. ಈ ಮೊದಲು ಇವರೆಲ್ಲರೂ ರಾಜ್‌ಘಾಟ್‌ನಲ್ಲಿ ಮಹಾತ್ಮ ಗಾಂಧಿ ಅವರ ಸ್ಮಾರಕಕ್ಕೆ ತೆರಳಿ ನಮನ ಸಲ್ಲಿಸಿದರು.

ಸದ್ಯ ತಿಹಾರ್ ಜೈಲಿನಲ್ಲಿರುವ ಅರವಿಂದ ಕೇಜ್ರಿವಾಲ್ ಅವರು ಎಎಪಿ ಹೋರಾಟ ಮತ್ತು ದೆಹಲಿಯ ನೀರಿನ ಸಮಸ್ಯೆ ಕುರಿತು ಬರೆದ ಸಂದೇಶವನ್ನು ಸುನೀತಾ ಅವರು ಓದಿದರು.

ಈ ಬಗ್ಗೆ ಎಕ್ಸ್ ಖಾತೆಯಲ್ಲಿ ಪೋಸ್ಟ್ ಮಾಡಿರುವ ಆತಿಶಿ ‘ದೆಹಲಿಯಲ್ಲಿ ನೀರಿನ ಸಮಸ್ಯೆ ಇದೆ. ಸಹಾಯಕ್ಕಾಗಿ ಪ್ರಧಾನಿ ಮೋದಿವರಿಗೆ ಪತ್ರ ಬರೆದರೂ ಯಾವುದೇ ಪ್ರಯೋಜನವಾಗಲಿಲ್ಲ. ದೆಹಲಿ ಜನರ ಪರಿಸ್ಥಿತಿಯನ್ನು ನೋಡಲು ನನ್ನಿಂದ ಸಾಧ್ಯವಾಗುತ್ತಿಲ್ಲ. ದೆಹಲಿಯ ಜನರಿಗೆ ಹರಿಯಾಣದಿಂದ ನೀರು ಸಿಗುವವರೆಗೆ ಅನಿರ್ದಿಷ್ಟ ಜಲ ಸತ್ಯಾಗ್ರಹ ಮುಂದುವರೆಯಲಿದೆ. ಹರಿಯಾಣವು ತಾನು ದೆಹಲಿಗೆ ಬಿಡಬೇಕಾದ 613 ಎಮ್‌ಜಿಡಿ ನೀರಿನ ಪ್ರಮಾಣದ ಬದಲಿಗೆ 513 ಎಮ್‌ಜಿಡಿ ನೀರನ್ನು ಬಿಡುತ್ತಿದೆ. ಇದರಿಂದ ದೆಹಲಿಯ 28 ಲಕ್ಷ ಜನರಿಗೆ ತೊಂದರೆಯಾಗಿದೆ. ಕಳೆದ 2 ದಿನಗಳಲ್ಲಿ ಹರಿಯಾಣವು 100 ಎಮ್‌ಜಿಡಿಯಿಂದ 120 ಎಮ್‌ಜಿಡಿ ನೀರು ಬಿಡುಗಡೆ ಮಾಡಿದೆ ಎಂದು ಹೇಳಿದ್ದಾರೆ.

ಕೆನಡಾ ನಡೆ ಖಂಡಿಸಿದ ಭಾರತ

ನವದೆಹಲಿ(ಪಿಟಿಐ): ಖಾಲಿಸ್ತಾನ ಉಗ್ರ ಹರ್ದೀಪ್ ಸಿಂಗ್ ನಿಜ್ಜರ್ ಸ್ಮರಣಾರ್ಥ ‘ಒಂದು ನಿಮಿಷ ಮೌನ’ ಆಚರಣೆ ಮಾಡಿದ ಕೆನಡಾ ಸಂಸತ್‌ನ ನಡೆಯನ್ನು ಭಾರತ ಶುಕ್ರವಾರ ಖಂಡಿಸಿದೆ.

‘ಉಗ್ರವಾದಕ್ಕೆ ರಾಜಕೀಯ ನೆಲೆ ಕಲ್ಪಿಸುವುದು ಹಾಗೂ ಹಿಂಸಾಚಾರಕ್ಕೆ ಕುಮ್ಮಕ್ಕು ನೀಡುವ ಯಾವುದೇ ರೀತಿಯ ನಡೆಗಳನ್ನು ನಾವು ಸಹಜವಾಗಿಯೇ ವಿರೋಧಿಸುತ್ತೇವೆ’ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ವಕ್ತಾರ ರಣಧೀರ ಜೈಸ್ವಾಲ್ ಹೇಳಿದ್ದಾರೆ.

ಕಳೆದ ವರ್ಷ ಜೂನ್‌ನಲ್ಲಿ ಬ್ರಿಟಿಷ್ ಕೊಲಂಬಿಯಾದ ಸರ್ರೆ ಎಂಬಲ್ಲಿ ನಿಜ್ಜರ್‌ನನ್ನು ಹತ್ಯೆ ಮಾಡಲಾಗಿತ್ತು.

‘ನಿಜ್ಜರ್ ಹತ್ಯೆಯಲ್ಲಿ ಭಾರತೀಯ ಏಜೆಂಟರ ಕೈವಾಡ ಇರುವ ಶಂಕೆ ಇದೆ’ ಎಂದು ಕೆನಡಾ ಪ್ರಧಾನಿ ಜಸ್ಟಿನ್ ಟ್ರೂಡೊ ಆರೋಪಿಸಿದ್ದರು.

ಈ ಆರೋಪಗಳನ್ನು ತಳ್ಳಿ ಹಾಕಿದ್ದ ಭಾರತ, ಇದು ‘ಅಸಂಬದ್ಧ’ ಆರೋಪ ಎಂದು ಹೇಳಿತ್ತು. ಇದಾದ ಬಳಿಕ ಭಾರತ ಮತ್ತು ಕೆನಡಾ ನಡುವಿನ ಸಂಬಂಧದಲ್ಲಿ ಬಿಕ್ಕಟ್ಟು ತಲೆದೋರಿತ್ತು.

‘ಜಾಮೀನಿನ ನಂತರವೂ ಕಸ್ಟಡಿ; ಬಂಧನಕ್ಕೆ ಒಳಪಡಿಸಿದಂತಲ್ಲವೇ’

ಮುಂಬೈ(ಪಿಟಿಐ): ಪೋಶೆ ಕಾರು ಅಪಘಾತ ಪ್ರಕರಣದಲ್ಲಿ ಆರೋಪಿಯಾಗಿರುವ ಬಾಲಕನಿಗೆ ಜಾಮೀನು ನೀಡಿದ್ದರೂ ಆತನನ್ನು ಪುನಃ ಕಸ್ಟಡಿಗೆ ತೆಗೆದುಕೊಂಡು, ನಿರೀಕ್ಷಣಾ ಮಂದಿರದಲ್ಲಿ ಇರಿಸಲಾಗಿದೆ. ಇದು ಆತನನ್ನು ಬಂಧನಕ್ಕೆ ಒಳಪಡಿಸಿದಂತೆ ಆಗುವುದಿಲ್ಲವೇ ಎಂದು ಬಾಂಬೆ ಹೈಕೋರ್ಟ್ ಶುಕ್ರವಾರ ಪ್ರಶ್ನಿಸಿದೆ.

ಈ ಕುರಿತ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಭಾರತಿ ಡಾಂಗ್ರೆ ಹಾಗೂ ಮಂಜೂಷಾ ದೇಶಪಾಂಡೆ ಅವರಿದ್ದ ವಿಭಾಗೀಯ ಪೀಠವು, ‘ಈ ಅಪಘಾತ ದುರದೃಷ್ಟಕರ ಎಂಬುದನ್ನು ಅಲ್ಲಗಳೆಯಲಾಗದು. ಇಬ್ಬರು ಪ್ರಾಣ ಕಳೆದುಕೊಂಡಿದ್ದಾರೆ. ಬಾಲಕನೂ ಸೇರಿದಂತೆ ಹಲವರಿಗೆ ಮಾನಸಿಕ ಆಘಾತವಾಗಿದೆ’ ಎಂದು ಹೇಳಿದೆ.

‘ಬಾಲ ಆರೋಪಿಗೆ ನೀಡಿರುವ ಜಾಮೀನನ್ನು ಕಾನೂನಿನ ಯಾವ ಅವಕಾಶದಡಿ ತಿದ್ದುಪಡಿ ಮಾಡಲಾಗಿದೆ ಹಾಗೂ ಆತನನ್ನು ಬಂಧನದಲ್ಲಿ ಇರಿಸಲಾಗಿದೆ’ ಎಂದು ಪೀಠವು ಪೊಲೀಸರನ್ನು ಪ್ರಶ್ನಿಸಿತು.


ಹಜ್ ಯಾತ್ರೆ: 98 ಭಾರತೀಯರ ಸಾವು

ನವದೆಹಲಿ (ಪಿಟಿಐ): ಈ ವರ್ಷ ಹಜ್ ಯಾತ್ರೆ ಕೈಗೊಂಡ ಭಾರತೀಯರ ಪೈಕಿ 98 ಯಾತ್ರಿಗಳು ಮೃತಪಟ್ಟಿದ್ದಾರೆ ಎಂದು ವಿದೇಶಾಂಗ ಸಚಿವಾಲಯ ಶುಕ್ರವಾರ ಹೇಳಿದೆ.

ಕಳೆದ ವರ್ಷ 187 ಮಂದಿ ಮೃತಪಟ್ಟಿದ್ದರು ಎಂದು ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಹೇಳಿದ್ದಾರೆ.

‘ಈ ವರ್ಷ 1.75 ಲಕ್ಷ ಮುಸ್ಲಿಮರು ಮೆಕ್ಕಾಗೆ ಭೇಟಿ ನೀಡಿದ್ದಾರೆ. ಸಹಜ ಕಾರಣಗಳು, ಗಂಭೀರ ಕಾಯಿಲೆ ಮತ್ತು ವಯಸ್ಸಿನ ಕಾರಣಕ್ಕೆ ಯಾತ್ರಿಗಳು ಮೃತಪಟ್ಟಿದ್ದಾರೆ. ಅರಫಾ (ದುಲ್ ಹಜ್ ತಿಂಗಳ ಒಂಬತ್ತನೇ ದಿನ) ದಿನದಂದು ಆರು ಮಂದಿ ಮತ್ತು ಅಪಘಾತಕ್ಕೆ ಸಂಬಂಧಿಸಿದ ಪ್ರಕರಣಗಳಲ್ಲಿ ನಾಲ್ವರು ಪ್ರಾಣ ಕಳೆದುಕೊಂಡಿದ್ದಾರೆ’ ಎಂದು ಅವರು ಮಾಹಿತಿ ನೀಡಿದ್ದಾರೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	23,567
ಇಂದಿನ ಅಂತ್ಯ	23,501
▼	65
ದಿನದ ಕನಿಷ್ಠ	23,398

ವಿನಿಮಯ ದರ

$ ಡಾಲರ್	83.57
£ ಪೌಂಡ್	105.68
€ ಯೂರೊ	89.36
¥ ಯೆನ್ (100ಕ್ಕೆ)	52

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹560
12 ಕ್ಕೆ	₹75
ಮೈಸೂರು	
100ಕ್ಕೆ	₹565

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1490 (1490)
ಸೋಯಾ (ರಿಫೈನ್ಡ್)	₹980 (980)
ಸೂರ್ಯಕಾಂತಿ (ರಿಫೈನ್ಡ್)	₹975 (975)
ಪಾಮೋಲಿನ್	₹913 (923)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಪ್ರಿ.ಕೆ)	₹292-493
ದ್ವಿತಳಿ (ಬಿ.ಟಿ)	₹390-639

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ		ರಾಶಿ	32829-53309	ಚಾಲಿ	32599-36618
ಕೋಕ	18000-28500	ಸರಕು	54099-87000	ಕೆಂಪುಗೋಟು	21900-26669
ಹೊಸತು	28500-37500	ಸಿದ್ದಾಪುರ		ರಾಶಿ	43208-49299
ಹಳತು	38000-45500	ಬಿಳಿಗೋಟು	25699-28819	ಯಲ್ಲಾಪುರ	
ಕುಮಟ		ಚಾಲಿ	33309-36109	ಅಪಿ	58915-61395
ಚಿಪ್ಪು	25099-28699	ಕೋಕ	25569-27699	ಬಿಳಿಗೋಟು	21899-30099
ಕೋಕ	13509-24690	ಕೆಂಪುಗೋಟು	26119-28699	ಚಾಲಿ	30809-36405
ಫ್ಯಾಕ್ಟರಿ	11009-20099	ರಾಶಿ	41099-48989	ಕೋಕ	8181-24899
ಹಳೆಚಾಲಿ	36209-38399	ತಟ್ಟಿಬೆಟ್ಟೆ	37119-44099	ಕೆಂಪುಗೋಟು	24016-33899
ಹೊಸಚಾಲಿ	31661-35011	ಶಿರಸಿ		ರಾಶಿ	45490-55799
ಶಿವಮೊಗ್ಗ		ಬೆಟ್ಟೆ	34199-41699	ತಟ್ಟಿಬೆಟ್ಟೆ	34699-45127
ಬೆಟ್ಟೆ	45069-55200	ಬಿಳಿಗೋಟು	20299-30018		
ಗೊರಬಲು	17000-35999				

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹8000-9008
ತುರುವೇಕೆರೆ	₹8600-8800

ಐಸಿಎಆರ್‌ಗೆ ₹20 ಸಾವಿರ ಕೋಟಿ ನೀಡಿ: ರೈತ ಸಂಘಟನೆಗಳ ಒತ್ತಾಯ

‘ರಸಗೊಬ್ಬರ ಸಬ್ಸಿಡಿ ಹೆಚ್ಚಿಸಿ’

ನವದೆಹಲಿ (ಪಿಟಿಐ): ಹವಾಮಾನ ವೈಪರೀತ್ಯದಿಂದ ಕೃಷಿ ವಲಯವು ಸಂಕಷ್ಟದ ಸುಳಿಗೆ ಸಿಲುಕಿದೆ. ಹಾಗಾಗಿ, ರಸಗೊಬ್ಬರಕ್ಕೆ ನೀಡುವ ಸಹಾಯಧನವನ್ನು ಹೆಚ್ಚಿಸಬೇಕು. ಕೃಷಿ ಸಂಶೋಧನೆ ಮತ್ತು ಮೂಲಸೌಕರ್ಯ ಅಭಿವೃದ್ಧಿ ಚಟುವಟಿಕೆಗಳಿಗೆ ಬಜೆಟ್‌ನಲ್ಲಿ ಹೆಚ್ಚಿನ ಅನುದಾನವನ್ನು ಮೀಸಲಿಡಬೇಕಿದೆ ಎಂದು ರೈತ ಸಂಘಟನೆಗಳು ಮತ್ತು ಕೃಷಿ ತಜ್ಞರು ಒಕ್ಕೊರಲ ಬೇಡಿಕೆ ಮಂಡಿಸಿದರು.

ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರ ಅಧ್ಯಕ್ಷತೆಯಲ್ಲಿ ಶುಕ್ರವಾರ ಎರಡೂವರೆ ಗಂಟೆ ಕಾಲ ನಡೆದ ಬಜೆಟ್ ಪೂರ್ವ ಸಮಾಲೋಚನಾ ಸಭೆಯಲ್ಲಿ ಕೃಷಿ ವಲಯದ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಿದರು.

ಸದ್ಯ ಭಾರತೀಯ ಕೃಷಿ ಸಂಶೋಧನಾ ಮಂಡಳಿಗೆ (ಐಸಿಎಆರ್) ₹9,500 ಕೋಟಿ ಅನುದಾನ ಮೀಸಲಿಡಲಾಗಿದೆ. ಈ ಮೊತ್ತವನ್ನು ₹20 ಸಾವಿರ ಕೋಟಿಗೆ ಹೆಚ್ಚಿಸಬೇಕು. ಇದರಿಂದ ಕೃಷಿ ಸಂಶೋಧನೆ ಮತ್ತು ಅಭಿವೃದ್ಧಿಗೆ ನೆರವಾಗಲಿದೆ ಎಂದು ಸಲಹೆ ಮುಂದಿಟ್ಟರು.

ಕೃಷಿ ಸಂಬಂಧಿತ ಸಹಾಯಧನವನ್ನು ಫಲಾನುಭವಿಗಳ ಬ್ಯಾಂಕ್ ಖಾತೆಗಳಿಗೆ ನೇರವಾಗಿ ವರ್ಗಾವಣೆ ಮಾಡಬೇಕು. ಯೂರಿಯಾದ ಚಿಲ್ಲರೆ ದರ ಏರಿಕೆಯಾಗುತ್ತಿದೆ. ಹಾಗಾಗಿ, ಜೈವಿಕ ರಸಗೊಬ್ಬರ ಮತ್ತು ಎಲೆಗಳ ಪೋಷಣೆಗೆ ನೀಡುವ ರಸಗೊಬ್ಬರಕ್ಕೂ ಸಹಾಯಧನ ಸೌಲಭ್ಯ ಕಲ್ಪಿಸಿ, ಇವುಗಳ ಬಳಕೆಗೆ ಉತ್ತೇಜನ ನೀಡಬೇಕು ಎಂದು ಕೃಷಿ ತಜ್ಞರು ಕೋರಿದರು.



ನವದೆಹಲಿಯಲ್ಲಿ ಶುಕ್ರವಾರ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು, ರೈತ ಸಂಘಟನೆಗಳು ಮತ್ತು ಕೃಷಿ ತಜ್ಞರ ಜೊತೆಗೆ ಬಜೆಟ್ ಪೂರ್ವ ಸಮಾಲೋಚನೆ ನಡೆಸಿದರು —ಪಿಟಿಐ ಚಿತ್ರ

ಭಾರತ್ ಕೃಷಿಕ ಸಮಾಜದ ಅಧ್ಯಕ್ಷ ಅಜಯ್ ವೀರ್ ಜಖರ್, ‘ಕೃಷಿ ಶಿಕ್ಷಣ ಮತ್ತು ಸಂಶೋಧನೆಗೆ ಪ್ರತ್ಯೇಕವಾಗಿ ಅನುದಾನ ಮೀಸಲಿಡಬೇಕು’ ಎಂದು ಮನವಿ ಮಾಡಿದರು.

ಕೃಷಿ ಸಂಶೋಧನೆಗೆ ಮಾಡುವ ಹೂಡಿಕೆಯು ಇತರೆ ವಲಯದಲ್ಲಿನ ಹೂಡಿಕೆಗಿಂತ 10 ಪಟ್ಟು ಆದಾಯ ತರುತ್ತದೆ. ಆದರೆ, ಹಣದುಬ್ಬರದ ಪರಿಣಾಮ ಕಳೆದ ಎರಡು ದಶಕಗಳಿಂದ ಈ ವಲಯಕ್ಕೆ ಮೀಸಲಿಡುವ ಅನುದಾನದಲ್ಲಿ ಕಡಿಮೆಯಾಗಿದೆ ಎಂದರು.

> **ಕೃಷಿ ಸಂಶೋಧನೆ ಮತ್ತು ಅಭಿವೃದ್ಧಿಗೆ ಬಜೆಟ್‌ನಲ್ಲಿ ಅನುದಾನ ಹೆಚ್ಚಿಸಿದರೆ ರೈತರ ಆದಾಯ ಏರಿಕೆಗೆ ಸಹಕಾರಿಯಾಗಲಿದೆ**
> **ಎಂ.ಜೆ. ಖಾನ್,** ಅಧ್ಯಕ್ಷ, ಭಾರತೀಯ ಆಹಾರ ಮತ್ತು ಕೃಷಿ ಮಂಡಳಿ

ಕೃಷಿ ವೆಚ್ಚ ಮತ್ತು ಬೆಲೆ ಆಯೋಗದ (ಸಿಎಸಿಪಿ) ಅಧ್ಯಕ್ಷ ಅಶೋಕ್ ಗುಲಾಟಿ ಹಾಜರಿದ್ದರು.

ಎಂಎಸ್‌ಪಿ ಸಮಿತಿ ವಿಸರ್ಜನೆಗೆ ಆಗ್ರಹ

ಕೃಷಿ ಹುಟ್ಟುವಳಿಗಳಿಗೆ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ನಿಗದಿಪಡಿಸಲು ರಚಿಸಿರುವ ಸಮಿತಿಯನ್ನು ವಿಸರ್ಜಿಸಿ, ಹೊಸ ಕೃಷಿ ನೀತಿಯನ್ನು ಜಾರಿಗೊಳಿಸಬೇಕು ಎಂದು ರೈತ ಸಂಘಟನೆಯ ಪ್ರತಿನಿಧಿಗಳು ಒತ್ತಾಯಿಸಿದರು.

ಕೇಂದ್ರ ಸರ್ಕಾರ ಪ್ರಾಯೋಜಿತ ಯೋಜನೆಗಳಿಗೆ ಮೀಸಲಿಡುವ ಹಣದ ಅನುಪಾತವನ್ನು ಪರಿಷ್ಕರಿಸಬೇಕಿದೆ. ಸದ್ಯ 60:40ರ ಅನುಪಾತದಲ್ಲಿ ಅನುದಾನ ನೀಡಲಾಗುತ್ತಿದ್ದು, ಇದನ್ನು 90:10 ಅನುಪಾತ ಕಾಯ್ದುಕೊಳ್ಳಬೇಕು. ಮುಂದಿನ ಐದು ವರ್ಷಗಳ ಕಾಲ ಕೇಂದ್ರವೇ ಶೇ 90ರಷ್ಟು ಅನುದಾನ ಕಲ್ಪಿಸಬೇಕು ಎಂದು ಒತ್ತಾಯಿಸಿದರು.

ಜಿಲ್ಲಾ ಕೇಂದ್ರಗಳನ್ನು ಎಕ್ಸ್‌ಪೋರ್ಟ್ ಹಬ್‌ಗಳಾಗಿ ಅಭಿವೃದ್ಧಿಪಡಿಸಬೇಕು. ರಾಷ್ಟ್ರೀಯ ಮೇಕೆ ಮತ್ತು ಕುರಿ ಮಿಷನ್ ಯೋಜನೆಯನ್ನು ಅನುಷ್ಠಾನಗೊಳಿಸಬೇಕು ಎಂದರು.

ಗೂಳಿ ಓಟಕ್ಕೆ ತಡೆ

ಮುಂಬೈ (ಪಿಟಿಐ): ಸತತ ಆರು ವಹಿವಾಟಿನಲ್ಲಿ ಏರಿಕೆ ಕಂಡಿದ್ದ ಷೇರು ಸೂಚ್ಯಂಕಗಳು ಶುಕ್ರವಾರದ ವಹಿವಾಟಿನಲ್ಲಿ ಇಳಿಕೆ ಕಂಡಿವೆ.

ತೈಲ ಮತ್ತು ಅನಿಲ, ಬಂಡವಾಳ ಸರಕು ಹಾಗೂ ಎಫ್‌ಎಂಸಿಜಿ ಷೇರುಗಳು ಮಾರಾಟದ ಒತ್ತಡಕ್ಕೆ ಸಿಲುಕಿದ್ದರಿಂದ ಗೂಳಿಯ ಓಟಕ್ಕೆ ತಡೆ ಬಿದ್ದಿದ್ದು, ಕರಡಿ ಕುಣಿತ ಜೋರಾಯಿತು.

ಸೆನ್ಸೆಕ್ಸ್ 269 ಅಂಶ ಇಳಿಕೆಯಾಗಿ, 77,209ಕ್ಕೆ ಅಂತ್ಯಗೊಂಡಿತು. ದಿನದ ವಹಿವಾಟಿನ ವೇಳೆ 676 ಅಂಶ ಕುಸಿದಿತ್ತು. ನಿಫ್ಟಿ 65 ಅಂಶ ಕಡಿಮೆಯಾಗಿ 23,501ಕ್ಕೆ ಸ್ಥಿರಗೊಂಡಿತು. ವಹಿವಾಟಿನ ವೇಳೆ ಸೂಚ್ಯಂಕವು 100 ಅಂಶ ಏರಿಕೆಯಾಗಿತ್ತು.

ಅಲ್ಟ್ರಾಟೆಕ್ ಸಿಮೆಂಟ್, ಲಾರ್ಸೆನ್ ಆ್ಯಂಡ್ ಟೊಬ್ರೊ, ಟಾಟಾ ಮೋಟರ್ಸ್, ನೆಸ್ಲೆ ಇಂಡಿಯಾ, ಟಾಟಾ ಸ್ಟೀಲ್, ಹಿಂದುಸ್ತಾನ್ ಯೂನಿಲಿವರ್, ಬಜಾಜ್ ಫೈನಾನ್ಸ್, ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ.





ಕೋಳಿ ಮಾಂಸ, ಮೊಟ್ಟೆ ಉತ್ಪಾದನೆ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ 2022–23ನೇ ಆರ್ಥಿಕ ವರ್ಷದಲ್ಲಿ ಮೊಟ್ಟೆ ಉತ್ಪಾದನೆಯು ಶೇ 33ರಷ್ಟು ಹಾಗೂ ಕೋಳಿ ಮಾಂಸದ ಉತ್ಪಾದನೆಯಲ್ಲಿ ಶೇ 32.5ರಷ್ಟು ಏರಿಕೆಯಾಗಿದೆ ಎಂದು ಪಶು ಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ ತಿಳಿಸಿದೆ.

2018–19ರಲ್ಲಿ ಉತ್ಪಾದನೆಯಾಗಿದ್ದಕ್ಕಿಂತಲೂ ಇದು ಹೆಚ್ಚಿದೆ. ನಗರ ಪ್ರದೇಶಗಳಲ್ಲಿನ ಬೇಡಿಕೆ ಹೆಚ್ಚಳವೇ ಈ ಏರಿಕೆಗೆ ಕಾರಣವಾಗಿದೆ ಎಂದು ತಿಳಿಸಿದೆ.

ಬೆಂಗಳೂರು ಗ್ರಾಮಾಂತರ, ತುಮಕೂರು, ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಬ್ರಾಯ್ಲರ್ ಕೋಳಿಗಳ ಉತ್ಪಾದನೆ ಹೆಚ್ಚಿದೆ. ಬಳ್ಳಾರಿ, ಚಿತ್ರದುರ್ಗ, ದಾವಣಗೆರೆ, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಯಲ್ಲಿ ಮೊಟ್ಟೆಗಳ ಉತ್ಪಾದನೆಯಲ್ಲಿ ಏರಿಕೆಯಾಗಿದೆ. 2023ರಲ್ಲಿ ಒಟ್ಟು 90 ಲಕ್ಷ ಮೊಟ್ಟೆಗಳು ಉತ್ಪಾದನೆಯಾಗಿದ್ದರೆ, 1.79 ಲಕ್ಷ ಟನ್‌ನಷ್ಟು ಮಾಂಸದ ಉತ್ಪಾದನೆಯಾಗಿದೆ ಎಂದು ವಿವರಿಸಿದೆ.

‘ಕೆಲವು ವರ್ಷಗಳಿಂದ ನಗರ ಪ್ರದೇಶಗಳಲ್ಲಿ ಮೊಟ್ಟೆ ಮತ್ತು ಮಾಂಸಕ್ಕೆ ಬೇಡಿಕೆ ಏರಿಕೆಯಾಗುತ್ತಿದೆ. ಇತ್ತೀಚಿನ ದಿನಗಳಲ್ಲಿ ಕುಟುಂಬಗಳು ವಾರಕ್ಕೆ 2ರಿಂದ 3 ಬಾರಿ ಕೋಳಿ ಮಾಂಸ ಖರೀದಿಸುವುದು ಹೆಚ್ಚುತ್ತಿದೆ’ ಎಂದು ಕೋಳಿ ಸಾಕಾಣಿಕೆದಾರ ಕೆ.ಎಸ್. ಅಶೋಕ್ ‘ಪ್ರಜಾವಾಣಿ’ಗೆ ತಿಳಿಸಿದರು.

ಎನ್‌ಪಿಎಸ್ ಹೂಡಿಕೆ: ಹೊಸ ವ್ಯವಸ್ಥೆ ಜಾರಿ

ನವದೆಹಲಿ (ಪಿಟಿಐ): ರಾಷ್ಟ್ರೀಯ ಪಿಂಚಣಿ ಯೋಜನೆ (ಎನ್‌ಪಿಎಸ್) ನಿಧಿಯ ಹೂಡಿಕೆಯಲ್ಲಿ ಸಮತೋಲನ ಕಾಯ್ದುಕೊಳ್ಳುವ ಸಂಬಂಧ ಹೊಸ ವ್ಯವಸ್ಥೆ ಜಾರಿಗೊಳಿಸಲು ಪಿಂಚಣಿ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ (ಪಿಎಫ್‌ಆರ್‌ಡಿಎ) ಮುಂದಾಗಿದೆ.

ಆಗಸ್ಟ್ ಅಥವಾ ಸೆಪ್ಟೆಂಬರ್‌ನಿಂದ ಜಾರಿಗೆ ಬರಲಿರುವ ಈ ವ್ಯವಸ್ಥೆಯು ಖಾಸಗಿ ವಲಯದ ಉದ್ಯೋಗಿಗಳಿಗಷ್ಟೇ ಅನ್ವಯವಾಗಲಿದೆ.

ವಯಸ್ಸಿನ ಆಧಾರದ ಮೇಲೆ ಸ್ವಯಂಚಾಲಿತ ವಿಧಾನದ ಮೂಲಕ ಈಕ್ವಿಟಿ ಮಾರುಕಟ್ಟೆಯಲ್ಲಿ ಶೇ 50ರಷ್ಟು ಹೂಡಿಕೆ ಮಾಡಲು ಚಂದಾದಾರರಿಗೆ ಈ ವ್ಯವಸ್ಥೆಯಡಿ ಅವಕಾಶ ದೊರೆಯಲಿದೆ. ಅಲ್ಲದೆ, ಇದೊಂದು ಹೆಚ್ಚುವರಿ ಆಯ್ಕೆಯಷ್ಟೇ ಆಗಿದೆ ಎಂದು ಪಿಎಫ್‌ಆರ್‌ಡಿಎ ಅಧ್ಯಕ್ಷ ಡಾ.ದೀಪಕ್ ಮೊಹಂತಿ ತಿಳಿಸಿದ್ದಾರೆ.

ಪ್ರಸ್ತುತ ಎನ್‌ಪಿಎಸ್ ಅಡಿಯಲ್ಲಿ ಹೂಡಿಕೆದಾರರ ನಿಧಿ ನಿರ್ವಹಣೆಗೆ ಸ್ವಯಂಚಾಲಿತ (ಆಟೊ ಚಾಯ್ಸ್) ಹಾಗೂ ಸಕ್ರಿಯ ಎಂಬ ಎರಡು ಆಯ್ಕೆಗಳಿವೆ.

ಸಕ್ರಿಯ ವಿಧಾನದಡಿ ಚಂದಾದಾರರೇ ಈಕ್ವಿಟಿ, ಕಾರ್ಪೊರೇಟ್ ಬಾಂಡ್ ಮತ್ತು ಸರ್ಕಾರಿ ಸಾಲಪತ್ರಗಳಲ್ಲಿ ಹೂಡಿಕೆ ಬಗ್ಗೆ ನಿರ್ಧಾರ ಕೈಗೊಳ್ಳಬಹುದಾಗಿದೆ.



ದೀಪಕ್ ಮೊಹಂತಿ

ಸ್ವಯಂಚಾಲಿತ ವಿಧಾನದಡಿ ಅಗ್ರೆಸೀವ್ ಫಂಡ್ (ಈಕ್ವಿಟಿ ಹೂಡಿಕೆ ಶೇ 75ರಷ್ಟು), ಮಧ್ಯಮ ಫಂಡ್ (ಈಕ್ವಿಟಿ ಹೂಡಿಕೆ ಶೇ 50ರಷ್ಟು) ಮತ್ತು ಕನ್ಸರ್ವೇಟಿವ್ ಫಂಡ್ (ಈಕ್ವಿಟಿ ಹೂಡಿಕೆ ಶೇ 25ರಷ್ಟು) ಎಂಬ ಮೂರು ಆಯ್ಕೆಗಳಿವೆ. ಈ ವಿಧಾನದಡಿ ಹೂಡಿಕೆಯಾದ ಮೊತ್ತವನ್ನು ಚಂದಾದಾರರ ವಯೋಮಾನಕ್ಕೆ ಅನುಗುಣವಾಗಿ ಸಂಬಂಧಿತ ಎನ್‌ಪಿಎಸ್ ಪಾಲುದಾರ ಸಂಸ್ಥೆಗಳೇ ನಿರ್ವಹಣೆ ಮಾಡುತ್ತವೆ.

ಚಂದಾದಾರರು 35 ವರ್ಷ ದಾಟಿದ ಬಳಿಕ ಈ ಮೂರು ಆಯ್ಕೆಗಳಲ್ಲಿ ಈಕ್ವಿಟಿ ಮಾರುಕಟ್ಟೆಗೆ ನಿಧಿಯ ಹಂಚಿಕೆ ಪ್ರಮಾಣ ಕಡಿಮೆಯಾಗಲಿದೆ. ಸದ್ಯ ಈ ವಯಸ್ಸಿನ ಮಿತಿಯನ್ನು 45ಕ್ಕೆ ಹೆಚ್ಚಿಸಲು ನಿರ್ಧರಿಸಲಾಗಿದೆ ಎಂದು ಮೊಹಾಂತಿ ತಿಳಿಸಿದ್ದಾರೆ.

ಚಂದಾದಾರರ ಸಂಖ್ಯೆ ಏರಿಕೆ: 2023–24ನೇ ಆರ್ಥಿಕ ವರ್ಷದಲ್ಲಿ ಖಾಸಗಿ ವಲಯದಿಂದ ಎನ್‌ಪಿಎಸ್‌ಗೆ ಹೊಸದಾಗಿ 9.47 ಲಕ್ಷ ಚಂದಾದಾರರು ಸೇರ್ಪಡೆಯಾಗಿದ್ದಾರೆ. ಪ್ರಾಧಿಕಾರದಿಂದ ನಿರ್ವಹಿಸುವ ಸಂಪತ್ತಿನ ಮೊತ್ತದಲ್ಲಿ (ಎಯುಎಂ) ಶೇ 30.5ರಷ್ಟು ಏರಿಕೆಯಾಗಿದೆ ಎಂದು ಮೊಹಂತಿ ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ಜಿಎಸ್‌ಟಿ ಮಂಡಳಿ ಸದಸ್ಯರಾಗಿ ಕೃಷ್ಣ ಬೈರೇಗೌಡ ನೇಮಕ

ನವದೆಹಲಿ (ಪಿಟಿಐ): ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆಯಡಿ ತೆರಿಗೆ ಪ್ರಮಾಣ ಸರಳಗೊಳಿಸಲು ರಚಿಸಿದ್ದ ಏಳು ಸಚಿವರನ್ನು ಒಳಗೊಂಡ ಸಮಿತಿಯನ್ನು ಪುನರ್ ರಚಿಸಲಾಗಿದೆ.

ಬಿಹಾರದ ಉಪ ಮುಖ್ಯಮಂತ್ರಿ ಸಾಮ್ರಾಟ್ ಚೌಧರಿ ಈ ಸಮಿತಿಯ ಸಂಚಾಲಕರಾಗಿ ನೇಮಕವಾಗಿದ್ದಾರೆ. ಕರ್ನಾಟಕದ ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರನ್ನು ಸಮಿತಿಯ ಸದಸ್ಯರನ್ನಾಗಿ ನೇಮಿಸಲಾಗಿದೆ. ಮಂಡಳಿಯ ವೆಬ್‌ಸೈಟ್‌ನಲ್ಲಿ ಈ ಕುರಿತು ಅಧಿಕೃತವಾಗಿ ಪ್ರಕಟಿಸಲಾಗಿದೆ.

ಉತ್ತರಪ್ರದೇಶದ ಹಣಕಾಸು ಸಚಿವ ಸುರೇಶ್ ಕುಮಾರ್ ಖನ್ನಾ, ಗೋವಾದ ಸಾರಿಗೆ ಸಚಿವ ಮೌವಿನ್ ಗೊಡಿನ್ಹೊ, ರಾಜಸ್ಥಾನದ ವೈದ್ಯಕೀಯ ಮತ್ತು ಆರೋಗ್ಯ ಸೇವಾ ಸಚಿವ ಗಜೇಂದ್ರ ಸಿಂಗ್, ಪಶ್ಚಿಮ ಬಂಗಾಳದ ಹಣಕಾಸು ಸಚಿವರಾದ ಚಂದ್ರಿಮಾ ಭಟ್ಟಾಚಾರ್ಯ ಮತ್ತು ಕೇರಳದ ಹಣಕಾಸು ಸಚಿವ ಕೆ.ಎನ್. ಬಾಲಗೋಪಾಲ್ ಈ ಸಮಿತಿಯ ಉಳಿದ ಸದಸ್ಯರಾಗಿದ್ದಾರೆ.

ಜಿಎಸ್‌ಟಿ ದರ ಸರಳೀಕರಣ, ಯಾವ ವಿಭಾಗಕ್ಕೆ ವಿನಾಯಿತಿ ಸೌಲಭ್ಯ ನೀಡಬೇಕು ಮತ್ತು ಜಿಎಸ್‌ಟಿ ವರಮಾನ ಹೆಚ್ಚಳಕ್ಕೆ ಸಂಬಂಧಿಸಿದಂತೆ ಅಧ್ಯಯನ ನಡೆಸಿ ವರದಿ ಸಲ್ಲಿಸುವುದು ಈ ಸಮಿತಿಯ ಜವಾಬ್ದಾರಿಯಾಗಿದೆ. ಸದ್ಯ ಜಿಎಸ್‌ಟಿ ಅಡಿಯಲ್ಲಿ ನಾಲ್ಕು ಹಂತದಲ್ಲಿ ತೆರಿಗೆ ನಿಗದಿಪಡಿಸಲಾಗಿದೆ.

ಕರ್ನಾಟಕದ ಮುಖ್ಯಮಂತ್ರಿಯಾಗಿದ್ದ ಬಸವರಾಜ ಬೊಮ್ಮಾಯಿ ಅವರ ಅಧ್ಯಕ್ಷತೆಯಲ್ಲಿ 2021ರಲ್ಲಿ ಈ ಸಮಿತಿ ರಚಿಸಲಾಗಿತ್ತು. ಈ ಸಮಿತಿಯು 2022ರ ಜೂನ್‌ನಲ್ಲಿ ಮಧ್ಯಂತರ ವರದಿ ಸಲ್ಲಿಸಿದೆ.

ಕಳೆದ ವರ್ಷದ ಅಕ್ಟೋಬರ್‌ನಲ್ಲಿ ಪುನರ್ ರಚನೆಗೊಂಡಿದ್ದ ಸಮಿತಿಯ ಸಂಚಾಲಕರಾಗಿ ಸುರೇಶ್ ಕುಮಾರ್ ಖನ್ನಾ ನೇಮಕವಾಗಿದ್ದರು.

ಇಂದು ಸಭೆ: ಜಿಎಸ್‌ಟಿ ಮಂಡಳಿಯ 53ನೇ ಸಭೆಯು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರ ಅಧ್ಯಕ್ಷತೆಯಲ್ಲಿ ಜೂನ್ 22ರಂದು ನಡೆಯಲಿದೆ.



ಬೆಳ್ಳಿ ಧಾರಣೆ ₹1,400 ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಶುಕ್ರವಾರ ಚಿನ್ನ ಮತ್ತು ಬೆಳ್ಳಿ ಧಾರಣೆಯು ಏರಿಕೆ ಕಂಡಿದೆ.

10 ಗ್ರಾಂ ಚಿನ್ನದ ದರವು ₹800 ಏರಿಕೆಯಾಗಿ, ₹73,350ಕ್ಕೆ ಮಾರಾಟವಾಗಿದೆ. ಬೆಳ್ಳಿ ಧಾರಣೆಯು ಕೆ.ಜಿಗೆ ₹1,400 ಹೆಚ್ಚಳವಾಗಿ, ₹93,700ಕ್ಕೆ ಮುಟ್ಟಿದೆ.

‘ಅಮೆರಿಕದಲ್ಲಿ ಚಿಲ್ಲರೆ ಹಣದುಬ್ಬರವು ಅಂದಾಜಿಗೂ ಮೀರಿ ಇಳಿಕೆಯಾಗಿದೆ. ಹಾಗಾಗಿ, ಪ್ರಸಕ್ತ ವರ್ಷದಲ್ಲಿ ಅಮೆರಿಕದ ಫೆಡರಲ್ ರಿಸರ್ವ್ ಎರಡು ಬಾರಿ ಬಡ್ಡಿದರ ಕಡಿತಗೊಳಿಸಲಿದೆ ಎಂಬ ನಿರೀಕ್ಷೆ ಹೆಚ್ಚಿದೆ. ಇದು ಹಳದಿ ಲೋಹದ ಬೆಲೆ ಏರಿಕೆಗೆ ಕಾರಣವಾಗಿದೆ’ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ಸೌಮಿಲ್ ಗಾಂಧಿ ಹೇಳಿದ್ದಾರೆ.

ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆಯು ಒಂದು ಔನ್ಸ್‌ಗೆ (28.34 ಗ್ರಾಂ) ಕ್ರಮವಾಗಿ 2,360 ಡಾಲರ್ (ಅಂದಾಜು ₹1.97 ಲಕ್ಷ) ಮತ್ತು 30.40 ಡಾಲರ್‌ನಂತೆ (ಅಂದಾಜು ₹2,540) ಮಾರಾಟವಾಗಿದೆ.

ಇಬ್ಬರು ಸಿಖ್ಖರ ವಿಮಾನ ಯಾನ ನಿರ್ಬಂಧ: ಆದೇಶ ಎತ್ತಿಹಿಡಿದ ಕೋರ್ಟ್

ಒಟ್ಟಾವಾ (ಪಿಟಿಐ): ಇಬ್ಬರು ಖಾಲಿಸ್ತಾನಿ ಮೂಲಭೂತವಾದಿಗಳ ವಿಮಾನಯಾನಕ್ಕೆ ಹೇರಿದ್ದ ನಿರ್ಬಂಧ ಸಡಿಲಿಸಲು ಕೆನಡಾದ ಕೋರ್ಟ್ ನಿರಾಕರಿಸಿದೆ.

ಭಗತ್ ಸಿಂಗ್ ಬ್ರಾರ್ ಮತ್ತು ಪರ್ವಕರ್ ಸಿಂಗ್ ದುಲ್ಲೆ ಅವರು ಸಲ್ಲಿಸಿದ್ದ ಮನವಿಯನ್ನು ಕೆನಡಾದ ಫೆಡರಲ್ ಕೋರ್ಟ್ ಕಳೆದ ವಾರ ವಜಾ ಮಾಡಿದೆ.

ಈ ಇಬ್ಬರಿಗೂ ಪ್ರಯಾಣಕ್ಕೆ ಅವಕಾಶ ಮಾಡಿಕೊಟ್ಟರೆ, ಭಯೋತ್ಪಾದನೆ ಆದೀತೆಂಬ ಆತಂಕಕ್ಕೆ ಸಕಾರಣವಿದೆ ಎಂದು ಕೋರ್ಟ್ ಅಭಿಪ್ರಾಯಪಟ್ಟಿದೆ.

ಕೆನಡಾದ ವಿಮಾನಯಾನ ಭದ್ರತಾ ಕಾಯ್ದೆಯಡಿ ಇವರ ಪ್ರಯಾಣಕ್ಕೆ ನಿರ್ಬಂಧ ಹೇರಲಾಗಿತ್ತು ಎಂದು ಕೆನಡಾದ ಸುದ್ದಿಸಂಸ್ಥೆ ಗುರುವಾರ ವರದಿ ಮಾಡಿದೆ. ಈ ಇಬ್ಬರೂ ವ್ಯಾಂಕೋವರ್‌ನಿಂದ ಪ್ರಯಾಣಿಸಲು 2018ರಲ್ಲಿ ಅನುಮತಿ ನಿರಾಕರಿಸಲಾಗಿತ್ತು. 2019ರಲ್ಲಿ ಈ ಇಬ್ಬರೂ ಫೆಡರಲ್ ಕೋರ್ಟ್ ಮೆಟ್ಟಿಲೇರಿದ್ದರು. ಇವರ ವಿರುದ್ಧವಾಗಿ ನ್ಯಾಯಮೂರ್ತಿ ಸೈಮನ್ ನೋಯೆಲ್ 2022ರಲ್ಲಿ ಆದೇಶ ನೀಡಿದ್ದರು.

ಕೇಜ್ರಿವಾಲ್ ಉಗ್ರನೇ?: ಇ.ಡಿ ವರ್ತನೆಗೆ ಪತ್ನಿ ಕಿಡಿ

ನವದೆಹಲಿ (ಪಿಟಿಐ): ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರಿಗೆ ವಿಶೇಷ ನ್ಯಾಯಾಲಯ ಜಾಮೀನು ಮಂಜೂರು ಮಾಡಿರುವುದನ್ನು ಪ್ರಶ್ನಿಸಿ ಜಾರಿ ನಿರ್ದೇಶನಾಲಯ (ಇ.ಡಿ) ದೆಹಲಿ ಹೈಕೋರ್ಟ್ ಮೆಟ್ಟಿಲೇರಿರುವುದಕ್ಕೆ ಆಕ್ರೋಶ ವ್ಯಕ್ತಪಡಿಸಿರುವ ಕೇಜ್ರಿವಾಲ್ ಪತ್ನಿ ಸುನೀತಾ, ‘ಕೇಜ್ರಿವಾಲ್ ಅವರು ಹಲವು ಪ್ರಕರಣಗಳಲ್ಲಿ ಬೇಕಾಗಿರುವ ಕುಖ್ಯಾತ ಭಯೋತ್ಪಾದಕರೇನೋ ಎಂಬಂತೆ ಇ.ಡಿ ವರ್ತಿಸುತ್ತಿದೆ’ ಎಂದು ವಾಗ್ದಾಳಿ ನಡೆಸಿದ್ದಾರೆ.

ಹರಿಯಾಣದಿಂದ ಹೆಚ್ಚು ನೀರು ಪೂರೈಸಬೇಕು ಎಂದು ಆಗ್ರಹಿಸಿ ದೆಹಲಿ ಸಚಿವೆ ಆತಿಶಿ ಅವರು ಉಪವಾಸ ಸತ್ಯಾಗ್ರಹ ಆರಂಭಿಸಿರುವ ದಕ್ಷಿಣ ದೆಹಲಿಯ ಭೋಗಲ್‌ನಲ್ಲಿ ಮಾತನಾಡಿದ ಸುನೀತಾ, ‘ಮುಖ್ಯಮಂತ್ರಿಯವರಿಗೆ ಗುರುವಾರ ಜಾಮೀನು ಸಿಕ್ಕಿತು. ಬೆಳಿಗ್ಗೆ ಆದೇಶ ಅಪ್‌ಲೋಡ್ ಆಗಬೇಕಿತ್ತು. ಆದರೆ, ಕೇಜ್ರಿವಾಲ್ ಭಾರತಕ್ಕೆ ಬೇಕಾದ ಕುಖ್ಯಾತ ಉಗ್ರರೇನೋ ಎಂಬಂತೆ ಇದು (ಮೇಲ್ಮನವಿ) ನಡೆದಿದೆ’ ಎಂದು ದೂರಿದರು.

‘ದೇಶದಲ್ಲಿ ಸರ್ವಾಧಿಕಾರವು ಎಲ್ಲ ಮಿತಿಗಳನ್ನೂ ಮೀರಿದೆ. ಯಾರೊಬ್ಬರಿಗೂ ಸೆರೆಮನೆವಾಸದಿಂದ ಮುಕ್ತಿ ನೀಡಲು ಇ.ಡಿ ಬಯಸುತ್ತಿಲ್ಲ. ಜಾಮೀನು ನೀಡಿರುವುದರ ವಿರುದ್ಧ ಹೈಕೋರ್ಟ್‌ನಲ್ಲಿ ಅರ್ಜಿ ಹಾಕಿದೆ. ಹೈಕೋರ್ಟ್ ನಮಗೆ ನ್ಯಾಯ ನೀಡಲಿದೆ ಎಂಬ ವಿಶ್ವಾಸವಿದೆ’ ಎಂದರು.

ನ್ಯಾಯಾಂಗ ವ್ಯವಸ್ಥೆಯ ಅಣಕು: ಹೈಕೋರ್ಟ್‌ಗೆ ಇ.ಡಿ ಮೇಲ್ಮನವಿ ಸಲ್ಲಿಸಿರುವುದಕ್ಕೆ ಆಕ್ರೋಶ ವ್ಯಕ್ತಪಡಿಸಿರುವ ಎಎಪಿ ಸಂಸದ ಸಂಜಯ್ ಸಿಂಗ್, ‘ಪ್ರಧಾನಿ ನರೇಂದ್ರ ಮೋದಿ ಅವರು ದೇಶದ ನ್ಯಾಯಾಂಗ ವ್ಯವಸ್ಥೆಯನ್ನು ಅಣಕವಾಡುತ್ತಿದ್ದಾರೆ’ ಎಂದು ಆರೋಪಿಸಿದ್ದಾರೆ.

‘ಮೋದಿ ಸರ್ಕಾರದ ಗೂಂಡಾಗಿರಿ ನೋಡಿ. ಅಧೀನ ನ್ಯಾಯಾಲಯದ ಆದೇಶ ಇನ್ನೂ ಬಂದಿಲ್ಲ. ಅದರ ಪ್ರತಿಯೂ ಸಿಕ್ಕಿಲ್ಲ. ಅಷ್ಟರಲ್ಲೇ ಇ.ಡಿಯು ಹೈಕೋರ್ಟ್‌ಗೆ ಹೋಗಿದೆ. ಯಾವ ಆದೇಶದ ವಿರುದ್ಧ ಅದು ಮೇಲ್ಮನವಿ ಸಲ್ಲಿಸಿದೆ? ಈ ದೇಶದಲ್ಲಿ ಏನು ನಡೆಯುತ್ತಿದೆ? ಮೋದಿಯವರೇ ಈ ದೇಶದ ನ್ಯಾಯ ವ್ಯವಸ್ಥೆಯನ್ನು ಯಾಕೆ ಅಪಹಾಸ್ಯ ಮಾಡುತ್ತಿದ್ದೀರಿ? ಇಡೀ ದೇಶ ನಿಮ್ಮನ್ನು ನೋಡುತ್ತಿದೆ’ ಎಂದು ಅವರು ‘ಎಕ್ಸ್’ನಲ್ಲಿ ಹೇಳಿದ್ದಾರೆ.

ಕೇಜ್ರಿವಾಲ್‌ಗೆ ತಪ್ಪದ ಜೈಲು

ಒಂದನೇ ಪುಟದಿಂದ...

ವಿಚಾರಣಾ ನ್ಯಾಯಾಲಯ ತಮಗೆ ಜಾಮೀನು ನೀಡಿರುವುದನ್ನು ಪ್ರಶ್ನಿಸಿ ಜಾರಿ ನಿರ್ದೇಶನಾಲಯ (ಇ.ಡಿ) ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿ ಪ್ರತಿಕ್ರಿಯೆ ಸಲ್ಲಿಸುವಂತೆ ಅರವಿಂದ ಕೇಜ್ರಿವಾಲ್ ಅವರಿಗೆ ಸೂಚನೆ ನೀಡಿದ ನ್ಯಾಯಪೀಠ, ಅರ್ಜಿ ವಿಚಾರಣೆಯನ್ನು ಜುಲೈ 10ಕ್ಕೆ ಮುಂದೂಡಿತು.

ಆಮ್ ಆದ್ಮಿ ಪಕ್ಷದ (ಎಎಪಿ) ಸಂಚಾಲಕರೂ ಆಗಿರುವ ಕೇಜ್ರಿವಾಲ್ ಅವರನ್ನು ಜಾರಿ ನಿರ್ದೇಶನಾಲಯ ಮಾರ್ಚ್ 21ರಂದು ಬಂಧಿಸಿತ್ತು.

ಇ.ಡಿ ವಾದ: ಇದಕ್ಕೂ ಮುನ್ನ, ವಿಚಾರಣಾ ನ್ಯಾಯಾಲಯ ಕೇಜ್ರಿವಾಲ್ ಅವರಿಗೆ ಜಾಮೀನು ನೀಡಿ ಹೊರಡಿಸಿದ್ದ ಆದೇಶಕ್ಕೆ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ.ರಾಜು ವಿರೋಧ ವ್ಯಕ್ತಪಡಿಸಿದ್ದರು.

ವಿಚಾರಣಾ ನ್ಯಾಯಾಲಯದ ಆದೇಶ ಪ್ರಶ್ನಿಸಿ ಸಲ್ಲಿಸಿರುವ ಅರ್ಜಿಯ ತ್ವರಿತ ವಿಚಾರಣೆಗೆ ರಾಜು ಮನವಿ ಮಾಡಿದರು. ‘ವಿಚಾರಣಾ ನ್ಯಾಯಾಲಯದ ಆದೇಶವು ತರ್ಕಕ್ಕೆ ವಿರುದ್ಧವಾಗಿದ್ದು, ಏಕಪಕ್ಷೀಯ ಹಾಗೂ ತಪ್ಪಿನಿಂದ ಕೂಡಿದೆ. ಅಪ್ರಸ್ತುತ ಸಂಗತಿಗಳ ಆಧಾರದಲ್ಲಿ ಜಾಮೀನು ನೀಡಲಾಗಿದೆ. ವಿಶೇಷ ನ್ಯಾಯಾಧೀಶರು ಸಂಬಂಧಿಸಿದ ಅಂಶಗಳನ್ನು ಪರಿಗಣಿಸಿಯೇ ಇಲ್ಲ’ ಎಂದು ಎಸ್.ವಿ.ರಾಜು ವಾದಿಸಿದರು.

‘ತನ್ನ ವಾದ ಮಂಡಿಸಲು ಜಾರಿ ನಿರ್ದೇಶನಾಲಯಕ್ಕೆ ಸಾಕಷ್ಟು ಅವಕಾಶ ನೀಡಲಾಗಿಲ್ಲ. ಲಭ್ಯವಿರುವ ಸಾಕ್ಷ್ಯಗಳನ್ನು ವಿಚಾರಣಾ ನ್ಯಾಯಾಲಯ ಪರಿಗಣಿಸಿಲ್ಲ. ಹೀಗಾಗಿ, ಜಾಮೀನು ರದ್ದುಗೊಳಿಸುವುದಕ್ಕೆ ಇದಕ್ಕಿಂತ ಉತ್ತಮವೆನಿಸುವ ಬೇರೆ ಪ್ರಕರಣ ಇರಲಿಕ್ಕಿಲ್ಲ’ ಎಂದು ನ್ಯಾಯಪೀಠಕ್ಕೆ ತಿಳಿಸಿದರು.

ಕೇಜ್ರಿವಾಲ್ ಪರ ಹಾಜರಿದ್ದ ಹಿರಿಯ ವಕೀಲ ಅಭಿಷೇಕ್ ಸಿಂಘ್ವಿ,‘ಜಾರಿ ನಿರ್ದೇಶನಾಲಯ ಪರ ವಕೀಲರು ವಿಚಾರಣಾ ನ್ಯಾಯಾಲಯದಲ್ಲಿ 3 ಗಂಟೆ 45 ನಿಮಿಷಗಳಷ್ಟು ಕಾಲ ವಾದ ಮಂಡಿಸಿದ್ದಾರೆ’ ಎಂದರು.

‘ಕೇಜ್ರಿವಾಲ್ ಅವರಿಗೆ ಜಾಮೀನು ನೀಡಿ ಹೊರಡಿಸಿರುವ ಆದೇಶಕ್ಕೆ ತಡೆಯಾಜ್ಞೆ ನೀಡಬಾರದು. ಇಲ್ಲದೇ ಹೋದರೆ, ಬಲವಾದ ಸಂದರ್ಭಗಳನ್ನು ಮುಂದು ಮಾಡಿ ಕೇಜ್ರಿವಾಲ್ ಅವರನ್ನು ಮತ್ತೆ ಜೈಲಿಗೆ ಕಳುಹಿಸಲಾಗುತ್ತದೆ’ ಎಂದೂ ಸಿಂಘ್ವಿ ಹೇಳಿದರು.

ವಾದ–ಪ್ರತಿವಾದಗಳನ್ನು ಆಲಿಸಿದ ನ್ಯಾಯಪೀಠ, ವಿಚಾರಣಾ ನ್ಯಾಯಾಲಯವು ಕೇಜ್ರಿವಾಲ್ ಅವರಿಗೆ ಜಾಮೀನು ನೀಡಿ ಹೊರಡಿಸಿದ್ದ ಆದೇಶಕ್ಕೆ ಗುರುವಾರ ಸಂಜೆ ತಡೆ ನೀಡಿ ಆದೇಶಿಸಿತು.

ಮಹೇಶ್‌ಗೆ ಮಧ್ಯಂತರ ಜಾಮೀನು

ನವದೆಹಲಿ (ಪಿಟಿಐ): ಭೀಮಾ ಕೋರೆಗಾಂವ್ ಹಿಂಸಾಚಾರ ಪ್ರಕರಣದಲ್ಲಿ ಜೈಲಿನಲ್ಲಿರುವ ಹೋರಾಟಗಾರ ಮಹೇಶ್ ರಾವುತ್ ಅವರಿಗೆ ಸುಪ್ರೀಂ ಕೋರ್ಟ್ ಶುಕ್ರವಾರ ಎರಡು ವಾರಗಳ ಮಧ್ಯಂತರ ಜಾಮೀನು ಮಂಜೂರು ಮಾಡಿದೆ.

ನ್ಯಾಯಮೂರ್ತಿಗಳಾದ ವಿಕ್ರಮ್‌ನಾಥ್ ಹಾಗೂ ಎಸ್.ವಿ.ಎನ್ ಭಟ್ಟಿ ಅವರಿದ್ದ ದ್ವಿಸದಸ್ಯ ನ್ಯಾಯಪೀಠ ಈ ತೀರ್ಪು ನೀಡಿದ್ದು ಇದೇ ವೇಳೆ, ಜುಲೈ10 ರಂದು ಕಡ್ಡಾಯವಾಗಿ ಎನ್‌ಐಎ ಕಚೇರಿಗೆ ತೆರಳಿ ಶರಣಾಗುವಂತೆ ರಾವುತ್ ಅವರಿಗೆ ಸೂಚಿಸಿದೆ.

ಅರ್ಜಿದಾರರ ಅಜ್ಜಿಯ ಅಂತಿಮ ಸಂಸ್ಕಾರ ಈಗಾಗಲೇ ನಡೆದಿದೆ. ಹಾಗಾಗಿ ಜಾಮೀನು ಮಂಜೂರು ಮಾಡಬಾರದು ಎಂದು ಎನ್‌ಐಎ ಪರ ವಕೀಲರು ಮನವಿ ಮಾಡಿದರು. ಇದಕ್ಕೆ ಆಕ್ಷೇಪಿಸಿದ ಅರ್ಜಿದಾರರ ಪರ ವಕೀಲರಾದ ಅಪರ್ಣಾ ಭಟ್, ಇದೇ 29, 30 ರಂದು ಹಾಗೂ ಜು. 5 ಮತ್ತು 6 ರಂದು ಅರ್ಜಿದಾರರ ಅಜ್ಜಿಯ ಅಂತಿಮ ವಿಧಿ–ವಿಧಾನ ಕಾರ್ಯಗಳು ನಡೆಯಲಿವೆ ಎಂದು ನ್ಯಾಯಪೀಠದ ಗಮನಕ್ಕೆ ತಂದರು. ವಾದ–ಪ್ರತಿವಾದಗಳನ್ನು ಆಲಿಸಿದ ಪೀಠ, ಜೂ.26ರಿಂದ ಜು.9ರ ವರೆಗೆ ರಾವುತ್ ಅವರಿಗೆ ಮಧ್ಯಂತರ ಜಾಮೀನು ಮಂಜೂರು ಮಾಡಿತು. ವಿಶೇಷ ಎನ್‌ಐಎ ನ್ಯಾಯಾಲಯ ನಿಗದಿಪಡಿಸಿರುವ ನಿಬಂಧನೆಗಳು ಷರತ್ತನ್ನು ಜಾಮೀನು ಒಳಗೊಂಡಿರಲಿದೆ ಎಂದು ಸ್ಪಷ್ಟಪಡಿಸಿದೆ.

ವಿಷಯುಕ್ತ ಮದ್ಯ: ಮೃತರ ಸಂಖ್ಯೆ 47ಕ್ಕೆ ಏರಿಕೆ

ಚೆನ್ನೈ (ಪಿಟಿಐ): ತಮಿಳುನಾಡಿನ ಕಲ್ಲಕುರಿಚ್ಚಿಯಲ್ಲಿ ನಡೆದ ವಿಷಯುಕ್ತ ಮದ್ಯ ಸೇವನೆ ದುರಂತದಲ್ಲಿ ಮೃತಪಟ್ಟವರ ಸಂಖ್ಯೆ 47ಕ್ಕೆ ಏರಿದ್ದು, 30 ಜನರ ಸ್ಥಿತಿ ಇನ್ನೂ ಗಂಭೀರವಾಗಿಯೇ ಇದೆ.

‘ಸತ್ತವರ ಪೈಕಿ 29 ಮಂದಿಯ ಶವಗಳನ್ನು ಅವರ ಕುಟುಂಬದ ಸದಸ್ಯರಿಗೆ ಒಪ್ಪಿಸಲಾಗಿದೆ. 118 ಮಂದಿ ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ’ ಎಂದು ಕಲ್ಲಕುರಿಚಿ ಜಿಲ್ಲಾಧಿಕಾರಿ ಪ್ರಶಾಂತ್ ಎಂ.ಎಸ್ ಅವರು ಮಾಹಿತಿ ನೀಡಿದರು.

‘ಬಾಧಿತರ ಪೈಕಿ ಮೂವರು ಚೇತರಿಸಿಕೊಂಡಿದ್ದಾರೆ. ಜಿಲ್ಲೆಯಲ್ಲಿ ವಿಷಯುಕ್ತ ಮದ್ಯ ಮಾರಾಟ ತಡೆಗೆ ವಿಶೇಷ ತಂಡಗಳನ್ನು ರಚಿಸಲಾಗಿದೆ’ ಎಂದು ತಿಳಿಸಿದ್ದಾರೆ.

ಪುದುಚೇರಿಯಿಂದ ಮೆಥನಾಲ್: ಸಿ.ಎಂ

ಚೆನ್ನೈ: ತಮಿಳುನಾಡಿನಲ್ಲಿ ಸಾವಿಗೆ ಕಾರಣವಾದ ವಿಷಯುಕ್ತ ಮದ್ಯದಲ್ಲಿ ಮಿಶ್ರಣವಾಗಿದ್ದ ಮೆಥನಾಲ್, ನೆರೆಯ ಪುದುಚೇರಿಯಿಂದ ಪೂರೈಕೆ ಆಗಿತ್ತು ಎಂದು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಹೇಳಿದ್ದಾರೆ.

ಅವಘಡಕ್ಕೆ ಕಾರಣರಾದ ಸಮಾಜವಿರೋಧಿ ಶಕ್ತಿಗಳ ವಿರುದ್ಧ ಡಿಎಂಕೆ ಸರ್ಕಾರ ಕಠಿಣ ಕ್ರಮವನ್ನು ಕೈಗೊಳ್ಳಲಿದೆ ಎಂದು ವಿಧಾನಸಭೆಯಲ್ಲಿ ವಿಶೇಷ ಗಮನಸೆಳೆಯುವ ನಿಲುವಳಿಗೆ ಉತ್ತರಿಸಿ ಅವರು ಹೇಳಿದರು.

ಘಟನೆಗೆ ಸಂಬಂಧಿಸಿ ಸುಮಾರು 164 ಜನರನ್ನು ವಿವಿಧ ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ. 47 ಜನರು ಸತ್ತಿದ್ದಾರೆ. ಅನೇಕ ಮಕ್ಕಳು, ಮಹಿಳೆಯರು ಅನಾಥರಾಗಲು ಕಾರಣರಾದ ಈ ಅವಘಡಕ್ಕೆ ಕಾರಣರಾದವರನ್ನು ಶಿಕ್ಷೆಗೆ ಗುರಿಪಡಿಸಲಾಗುವುದು ಎಂದು ತಿಳಿಸಿದರು.

ಕಂದಾಯ ಮತ್ತು ಪೊಲೀಸ್ ಇಲಾಖೆಗಳು ಜಂಟಿ ತನಿಖೆಯಲ್ಲಿ ಮೆಥನಾಲ್ ಪುದುಚೇರಿಯಿಂದ ಬಂದಿರುವುದು ಗೊತ್ತಾಗಿದೆ ಎಂದು ತಿಳಿಸಿದರು.

‘ಅಗತ್ಯ ಪ್ರಮಾಣದ ಔಷಧ ದಾಸ್ತಾನು ಇದೆ. ವಿಷಯುಕ್ತ ಮದ್ಯ ಸೇವಿಸಿದವರು ಸ್ವಯಂಪ್ರೇರಣೆಯಿಂದ ಚಿಕಿತ್ಸೆ ಪಡೆದು ಸಂಭವನೀಯ ಅವಘಡದಿಂದ ಪಾರಾಗಬೇಕು’ ಎಂದು ಕೋರಿದ್ದಾರೆ.

ಸಂಕ್ಷಿಪ್ತ ಸುದ್ದಿ

ಇಟಲಿ: ಚಿಕಿತ್ಸೆ ಸಿಗದೆ ಭಾರತ ಮೂಲದ ಕಾರ್ಮಿಕ ಸಾವು

ಲಂಡನ್/ರೋಮ್ (ಪಿಟಿಐ): ಇಟಲಿಯ ರೋಮ್‌ನಲ್ಲಿ ಭಾರತ ಮೂಲದ ಕೃಷಿ ಕಾರ್ಮಿಕರೊಬ್ಬರು ಚಿಕಿತ್ಸೆ ಸಿಗದೆ ಮೃತಪಟ್ಟಿದ್ದಾರೆ.

ಸತ್ನಾಂ ಸಿಂಗ್ ಎಂಬುವವರೇ ಮೃತ ಕಾರ್ಮಿಕ. ಅವರು ಸೋಮವಾರ ರೋಮ್ ಸಮೀಪದ ಲಾಜಿಯೋದಲ್ಲಿ ಕೃಷಿ ಚಟುವಟಿಕೆಯಲ್ಲಿ ತೊಡಗಿದ್ದಾಗ, ಆಕಸ್ಮಿಕವಾಗಿ ಭಾರಿ ಕೃಷಿ ಯಂತ್ರೋಪಕರಣಕ್ಕೆ ಕೈ ಸಿಲುಕಿ ತುಂಡಾಗಿತ್ತು. ಆದರೆ, ಗಾಯಗೊಂಡ ಅವರಿಗೆ ಮಾಲೀಕ ಚಿಕಿತ್ಸೆ ಕೊಡಿಸಲಿಲ್ಲ. ಕಾರ್ಮಿಕ ಮತ್ತು ಆತನ ಪತ್ನಿಯನ್ನು ರಸ್ತೆ ಬದಿಯೇ ಬಿಟ್ಟು ಪರಾರಿಯಾಗಿದ್ದಾನೆ ಎಂದು ವರದಿಯಾಗಿದೆ.

‘ಅಮೆರಿಕ–ಭಾರತ ಒಗ್ಗೂಡಿದರೆ ಚೀನಾಗೆ ಸಂದೇಶ’

ವಾಷಿಂಗ್ಟನ್ (ಪಿಟಿಐ): ಕಾರ್ಯತಂತ್ರ ಹಿತಾಸಕ್ತಿ ದೃಷ್ಟಿಯಿಂದ ಭಾರತ ಮತ್ತು ಅಮೆರಿಕ ಒಗ್ಗೂಡಿ ಕೆಲಸ ಮಾಡಿದರೆ, ಚೀನಾಗೆ ಪ್ರಬಲ ಸಂದೇಶ ರವಾನಿಸಬಹುದಾಗಿದೆ ಎಂದು ಅಮೆರಿಕದ ಜನಪ್ರತಿನಿಧಿ ಹೇಳಿದ್ದಾರೆ.

ಅತ್ಯಾಧುನಿಕ ಶಸ್ತ್ರಾಸ್ತ್ರಗಳು ಮತ್ತು ತಂತ್ರಜ್ಞಾನವನ್ನು ಉತ್ಪಾದಿಸಲು ಪ್ರಜಾಸತ್ತಾತ್ಮಕ ರಾಷ್ಟ್ರಗಳು ಒಗ್ಗೂಡಿ ಕೆಲಸ ಮಾಡುವುದು ಅಗತ್ಯ ಎಂದು ಅಮೆರಿಕದ ಸಂಸದ ಮೈಕೆಲ್ ಮೆಕಾಲ್ ಗುರುವಾರ ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ನವದೆಹಲಿಯಲ್ಲಿ ನಡೆದ ಸಭೆಯಲ್ಲಿ ಅಭಿಪ್ರಾಯಪಟ್ಟಿದ್ದಾರೆ.

ಗ್ರೀನ್ ಕಾರ್ಡ್: ಟ್ರಂಪ್ ಒಲವು

ವಾಷಿಂಗ್ಟನ್ (ಪಿಟಿಐ): ವಲಸಿಗರ ವಿಷಯದಲ್ಲಿ ತಮ್ಮ ನಿಲುವು ಸಡಿಲಿಸಿರುವ ಅಮೆರಿಕದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ‘ಅಮೆರಿಕದ ಕಾಲೇಜುಗಳಲ್ಲಿ ಪದವಿ ಶಿಕ್ಷಣ ಪೂರೈಸುವ ವಿದೇಶಿ ವಿದ್ಯಾರ್ಥಿಗಳಿಗೆ ಪದವಿ ಜೊತೆಗೆ ಸ್ವಾಭಾವಿಕವಾಗಿ ಗ್ರೀನ್ ಕಾರ್ಡ್ ಸಿಗಬೇಕು’ ಎಂದು ಪ್ರತಿಪಾದಿಸಿದ್ದಾರೆ.

ಪದವಿ ಶಿಕ್ಷಣ ಪೂರೈಸಿದ ಪ್ರತಿಭಾನ್ವಿತ ವಿದ್ಯಾರ್ಥಿಗಳು ಭಾರತ ಅಥವಾ ಚೀನಾದಂತಹ ತಾಯ್ನಾಡಿಗೆ ಮರಳುವುದನ್ನು ತಡೆಯುವುದು ಇದರ ಉದ್ದೇಶ ಎಂದೂ ಹೇಳಿದ್ದಾರೆ.

ಬಿಆರ್‌ಎಸ್ ಶಾಸಕ ಕಾಂಗ್ರೆಸ್‌ಗೆ ಸೇರ್ಪಡೆ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ತೆಲಂಗಾಣ ವಿಧಾನಸಭೆಯ ಮಾಜಿ ಸ್ಪೀಕರ್, ಭಾನ್ಸವಾಡಾ ಕ್ಷೇತ್ರದ ಬಿಆರ್‌ಎಸ್ ಶಾಸಕ ಪೋಚಾರಂ ಶ್ರೀನಿವಾಸ ರೆಡ್ಡಿ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾಗಿದ್ದಾರೆ.

ಮುಖ್ಯಮಂತ್ರಿ ಎ.ರೇವಂತರೆಡ್ಡಿ, ಕೃಷಿ ಸಚಿವ ಪೊಂಗುಲೇಟಿ ಶ್ರೀನಿವಾಸ ರೆಡ್ಡಿ ಅವರು ಶಾಸಕರ ಮನೆಗೆ ಭೇಟಿ ನೀಡಿ, ಪಕ್ಷಕ್ಕೆ ಆಹ್ವಾನಿಸಿದರು. ಪೋಚಾರಂ ಶ್ರೀನಿವಾಸ ರೆಡ್ಡಿ ಕಾಂಗ್ರೆಸ್ ಸೇರುತ್ತಿರುವ ಬಿಆರ್‌ಎಸ್‌ನ ನಾಲ್ಕನೇ ಶಾಸಕ. ತೆಲ್ಲಂ ವೆಂಕಟರಾವ್, ದಾನಂ ನಾಗೇಂದರ್ ಮತ್ತು ಕಡಿಯಂ ಶ್ರೀಹರಿ ಲೋಕಸಭೆ ಚುನಾವಣೆಗೆ ಮುನ್ನವೇ ಕಾಂಗ್ರೆಸ್‌ಗೆ ಸೇರ್ಪಡೆಯಾಗಿದ್ದರು.

ಭಾರತ – ಬಾಂಗ್ಲಾದೇಶ ನಡುವೆ ಹಣಾಹಣಿ ಇಂದು

ಸೆಮಿಗೆ ಸನಿಹವಾಗುವತ್ತ ಚಿತ್ತ



ಮುಸ್ತಫಿಜುರ್ ರೆಹಮಾನ್

ಜಸ್‌ಪ್ರೀತ್ ಬೂಮ್ರಾ

ಪ್ರಜಾವಾಣಿ ವಾರ್ತೆ

ನಾರ್ತ್‌ಸೌಂಡ್, ಆಂಟಿಗಾ: ರೋಹಿತ್ ಶರ್ಮಾ ನಾಯಕತ್ವದ ಭಾರತ ತಂಡವು ಟಿ20 ವಿಶ್ವಕಪ್ ಟೂರ್ನಿಯಲ್ಲಿ ಅಜೇಯ ಓಟ ಮುಂದುವರಿಸುವ ಛಲದಲ್ಲಿದೆ. ಶನಿವಾರ ಇಲ್ಲಿ ನಡೆಯಲಿರುವ ಸೂಪರ್ ಎಂಟರ ಹಂತದ ಪಂದ್ಯದಲ್ಲಿ ಬಾಂಗ್ಲಾದೇಶ ವಿರುದ್ಧ ಗೆದ್ದು ಸೆಮಿಫೈನಲ್ ಹಾದಿಯನ್ನು ಸುಗಮಗೊಳಿಸಿಕೊಳ್ಳುವತ್ತ ಚಿತ್ತ ನೆಟ್ಟಿದೆ.

ಗುಂಪು ಹಂತದಲ್ಲಿ ಮತ್ತು ಎಂಟರ ಘಟ್ಟದ ಮೊದಲ ಪಂದ್ಯದಲ್ಲಿ ಸೋಲಿಲ್ಲದೇ ಮುನ್ನುಗ್ಗುತ್ತಿರುವ ಭಾರತ ತಂಡವು ಈ ಪಂದ್ಯದಲ್ಲಿ ಜಯಿಸುವ ನೆಚ್ಚಿನ ತಂಡವಾಗಿದೆ. ಬಾಂಗ್ಲಾ ತಂಡವು ಮೊದಲ ಪಂದ್ಯದಲ್ಲಿ ಆಸ್ಟ್ರೇಲಿಯಾ ಎದುರು ಸೋತಿದೆ. ಆದ್ದರಿಂದ ಇನ್ನುಳಿದಿರುವ ಎರಡು ಪಂದ್ಯಗಳಲ್ಲಿ ಜಯಿಸುವ ಒತ್ತಡದಲ್ಲಿದೆ.

ಭಾರತ ಹಾಗೂ ಬಾಂಗ್ಲಾ ತಂಡಗಳ ಬಲಾಬಲದ ಇತಿಹಾಸ ನೋಡಿದರೆ ಭಾರತ ತಂಡವೇ ಹೆಚ್ಚು ಸಲ ಜಯಿಸಿದೆ. ಆದರೆ ಬಾಂಗ್ಲಾ ತಂಡಕ್ಕೆ ಅಚ್ಚರಿ ಫಲಿತಾಂಶ ನೀಡುವ ಸಾಮರ್ಥ್ಯ ವಿದೆ ಎಂಬುದನ್ನು ಅಲ್ಲಗಳೆಯಲಾಗದು. ಆದ್ದರಿಂದ ರೋಹಿತ್ ಬಳಗವು ಇಲ್ಲಿಯವರೆಗೆ ಮಾಡಿರುವ ಲೋಪಗಳನ್ನು ಸರಿಪಡಿಸಿಕೊಂಡು ಕಣಕ್ಕಿಳಿಯಬೇಕಿದೆ.

ಪ್ರಮುಖವಾಗಿ ಅಗ್ರಕ್ರಮಾಂಕದ ಬ್ಯಾಟಿಂಗ್ ಬಲಿಷ್ಠಗೊಳ್ಳಬೇಕಾಗಿದೆ. ಅನುಭವಿ ಜೋಡಿ ವಿರಾಟ್ ಕೊಹ್ಲಿ ಮತ್ತು ರೋಹಿತ್ ಅವರು ಅಫ್ಗನ್ ತಂಡದ ಎದುರಿನ ಪಂದ್ಯದಲ್ಲಿ ಆತ್ಮವಿಶ್ವಾಸದಿಂದ ಆಡಿರಲಿಲ್ಲ. ರನ್ ಗಳಿಕೆಯು ವೇಗ ಕಡಿಮೆಯಿತ್ತು. ರಿಷಭ್ ಪಂತ್ ಮೂರನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಬಂದು ರನ್ ವೇಗ ಹೆಚ್ಚಿಸಿದರು. ಆದರೆ, ದೀರ್ಘ ಇನಿಂಗ್ಸ್ ಆಡುವಲ್ಲಿ ವಿಫಲರಾದರು. ಅದರೆ ರಿಷಭ್ ಅವರು ವಿಕೆಟ್‌ಕೀಪಿಂಗ್‌ನಲ್ಲಿ ಮೂರು ಕ್ಯಾಚ್ ಪಡೆದು ಮಿಂಚಿದರು.

ಸೂರ್ಯಕುಮಾರ್ ಯಾದವ್ ಮತ್ತು ಹಾರ್ದಿಕ್ ಪಾಂಡ್ಯ ಅವರ ದಿಟ್ಟ ಆಟದಿಂದಾಗಿ ತಂಡವು ಉತ್ತಮ ಮೊತ್ತ ಗಳಿಸಿತು. ವೇಗಿ ಜಸ್‌ಪ್ರೀತ್ ಬೂಮ್ರಾ ಮತ್ತು ಅರ್ಷದೀಪ್ ಸಿಂಗ್ ಅವರ ನಿಖರ ದಾಳಿಯ ಮುಂದೆ ಅಫ್ಗನ್ ಬ್ಯಾಟಿಂಗ್ ಪಡೆ ಶರಣಾಯಿತು. ಆದರೆ ಶಿವಂ ದುಬೆ ಕೇವಲ ಒಂದು ಸಿಕ್ಸರ್ ಮಾತ್ರ ಗಳಿಸಿದ್ದರು. ಅವರು ತಮ್ಮ ನೈಜ ಲಯಕ್ಕೆ ಮರಳಿದರೆ ಎದುರಾಳಿ ಬೌಲರ್‌ಗಳಿಗೆ ಕಠಿಣ ಸವಾಲು ಎದುರಾಗಬಹುದು.

ಬಾಂಗ್ಲಾ ತಂಡದ ಬೌಲಿಂಗ್ ಪಡೆ ಉತ್ತಮವಾಗಿದೆ. ಅನುಭವಿ ವೇಗಿ ಮುಸ್ತಫಿಜುರ್ ರೆಹಮಾನ್, ರಿಷದ್ ಹುಸೇನ್ ಹಾಗೂ ಮೆಹದಿ ಹಸನ್ ಅವರು ಇದುವರೆಗೆ ಉತ್ತಮವಾಗಿ ಬೌಲಿಂಗ್ ಮಾಡಿದ್ದಾರೆ.

ಆದರೆ ತಂಡದ ಸಮಸ್ಯೆ ಇರುವುದು ಬ್ಯಾಟಿಂಗ್‌ನಲ್ಲಿ ಮಾತ್ರ. ನಾಯಕ ನಜ್ಮುಲ್ ಹುಸೇನ್ ಶಾಂತೊ, ತೌಹಿದ್ ಹೃದಯ್ ಹಾಗೂ ಲಿಟನ್ ದಾಸ್ ಅವರು ಉತ್ತಮ ಲಯದಲ್ಲಿದ್ದಾರೆ. ಉಳಿದವರ ಆಟದಲ್ಲಿ ಸ್ಥಿರತೆ ಇಲ್ಲ.

ಇಲ್ಲಿಯ ವಿವಿಯನ್ ರಿಚರ್ಡ್ಸ್ ಕ್ರೀಡಾಂಗಣದ ಪಿಚ್ ಶುಕ್ರವಾರ ನಡೆದ ಪಂದ್ಯದಲ್ಲಿ ವೇಗಿಗಳಿಗೆ ನೆರವು ನೀಡಿದೆ.

ಬಲಾಬಲ

ಪಂದ್ಯ	13
ಭಾರತ ಜಯ	12
ಬಾಂಗ್ಲಾ ಜಯ	1

ಇಂದಿನ ಪಂದ್ಯಗಳು

ಅಮೆರಿಕ – ವೆಸ್ಟ್ ಇಂಡೀಸ್	Vs	ಬೆಳಿಗ್ಗೆ 6
ಭಾರತ – ಬಾಂಗ್ಲಾದೇಶ	Vs	ರಾತ್ರಿ 8

ಲೈವ್: ಸ್ಟಾರ್ ಸ್ಪೋರ್ಟ್ಸ್, ಡಿಡಿ ಸ್ಪೋರ್ಟ್ಸ್, ಹಾಟ್‌ ಸ್ಟಾರ್

ವಿಂಡೀಸ್‌ಗೆ ಇಂದು ಅಮೆರಿಕ ಸವಾಲು

ಬ್ರಿಜ್‌ಟೌನ್ (ಬಾರ್ಬಡೋಸ್), (ಪಿಟಿಐ): ವೆಸ್ಟ್ ಇಂಡೀಸ್ ತಂಡ, ದಿಟ್ಟ ಆಟವಾಡುತ್ತಿರುವ ಅಮೆರಿಕ ತಂಡವವನ್ನು ಶನಿವಾರ ನಡೆಯುವ ಟಿ20 ವಿಶ್ವಕಪ್‌ನ ಸೂಪರ್ ಎಂಟರ ಹಂತದಲ್ಲಿ ಎದುರಿಸಲಿದೆ. ವೆಸ್ಟ್ ಇಂಡೀಸ್ ತಂಡಕ್ಕೆ ಈ ಪಂದ್ಯ ನಿರ್ಣಾಯಕವಾಗಿದ್ದು ನಾಕೌಟ್‌ಗೆ ಮುನ್ನಡೆಯಬೇಕದರೆ ಎಚ್ಚರ ತಪ್ಪುವಂತಿಲ್ಲ.

ಗುಂಪು ಹಂತದಲ್ಲಿ ಅಜೇಯರಾಗುಳಿದಿದ್ದ ಜಂಟಿ ಆತಿಥೇಯ ವೆಸ್ಟ್ ಇಂಡೀಸ್ ಸೂಪರ್ ಎಂಟರ ಹಂತದ ಮೊದಲ ಪಂದ್ಯದಲ್ಲಿ ಇಂಗ್ಲೆಂಡ್ ಕೈಲಿ ಎಂಟು ವಿಕೆಟ್‌ಗಳ ಸೋಲನುಭವಿಸಿತ್ತು. ಇಂಗ್ಲೆಂಡ್ ಬೌಲರ್‌ಗಳು 51 ಎಸೆತಗಳಲ್ಲಿ ರನ್ ಕೊಡದೇ ವಿಂಡೀಸರನ್ನು ಕಟ್ಟಿಹಾಕಿದ್ದರು.

ಈ ಸೋಲಿನಿಂದ ರೋವ್ಮನ್ ಪೊವೆಲ್ ಬಳಗ ಗುಂಪಿನಲ್ಲಿ –1.343 ರನ್ ರೇಟ್‌ನೊಂದಿಗೆ ತಳದಲ್ಲಿದೆ. ಮುಂದಿನ ಹಂತಕ್ಕೆ ಹೋಗಬೇಕಾದರೆ ಉಳಿದ ಪಂದ್ಯಗಳನ್ನು ಗೆಲ್ಲಲೇಬೇಕಿದೆ.

ಪಾಕಿಸ್ತಾನ ಮೇಲೆ ಅಮೋಘ ಜಯಗಳಿಸಿದ ನಂತರ ಅಮೆರಿಕ ಯಾವುದೇ ಪಂದ್ಯ ಗೆದ್ದಿಲ್ಲ. ಆದರೆ ಭಾರತ ವಿರುದ್ಧವೂ ಸಾಧಾರಣ ಆಟ ವಾಡಿದ್ದ ಆ ತಂಡ, ದಕ್ಷಿಣ ಆಫ್ರಿಕಾಕ್ಕೆ ಸೋಲುವ ಮೊದಲು ಒಂದು ಹಂತದಲ್ಲಿ ಆತಂಕ ಮೂಡಿಸಿತ್ತು. ಹೀಗಾಗಿ ಜಂಟಿ ಆತಿಥೇಯರು ತಮ್ಮನ್ನು ಲಘುವಾಗಿ ಪರಿಗಣಿಸುವಂತಿಲ್ಲ ಎಂಬ ಸಂದೇಶ ರವಾನಿಸಿದ್ದಾರೆ. ಅಕ್ರಮಣಕಾರಿ ಬ್ರಾಂಡ್‌ನ ಆಟವಾಡಿರುವ ವೆಸ್ಟ್ ಇಂಡೀಸ್ ತಂಡ ಅದನ್ನು ಮುಂದುವರಿಸುವಂತೆ ಕಾಣುತ್ತಿದೆ. ಆದರೆ ಆ ತಂಡದ ಸಮಸ್ಯೆ ಎಂದರೆ ಅನನುಭವಿ ಬೌಲಿಂಗ್ ದಾಳಿ ಹೊಂದಿರುವುದು. ಭರ್ಜರಿ ಆಟಕ್ಕೆ ಹೆಸರಾದ ನಿಕೋಲಸ್ ಪೂರನ್, ಆಂಡ್ರೆ ರಸೆಲ್, ಪೊವೆಲ್, ಶರ್ಫೆನ್ ರುದರ್‌ಫೋರ್ಡ್ ಅಂಥ ಆಟಗಾರರನ್ನು ಹೊಂದಿರುವ ವೆಸ್ಟ್ ಇಂಡೀಸ್ ಇದನ್ನೇ ಬಂಡವಾಳವನ್ನಾಗಿ ಮಾಡುವ ತವಕದಲ್ಲಿದೆ.

ಕಮಿನ್ಸ್ ಹ್ಯಾಟ್ರಿಕ್: ಆಸ್ಟ್ರೇಲಿಯಾ ಜಯ

ಮಳೆಯ ಆಟ: ಡೇವಿಡ್ ವಾರ್ನರ್ ಅಜೇಯ ಅರ್ಧಶತಕ

ನಾರ್ತ್ ಸೌಂಡ್ (ಆ್ಯಂಟಿಗಾ), (ಪಿಟಿಐ): ಅನುಭವಿ ವೇಗದ ಬೌಲರ್ ಪ್ಯಾಟ್ ಕಮಿನ್ಸ್ ಹಾಲಿ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಮೊದಲ ಹ್ಯಾಟ್ರಿಕ್ ಸಾಧಿಸಿದರೆ, ಸ್ಪಿನ್ನರ್ ಆ್ಯಡಂ ಜಂಪಾ ಕರಾರುವಾಕ್ ಬೌಲಿಂಗ್ ಮಾಡಿದರು.

ಶುಕ್ರವಾರ ಮಳೆಯ ಆಟ ಕಂಡ ಸೂಪರ್ ಎಂಟರ ಪಂದ್ಯದಲ್ಲಿ ಆಸ್ಟ್ರೇಲಿಯಾ ಡಕ್‌ವರ್ತ್ ಲೂಯಿಸ್ ಸಿಸ್ಟಂ ಆಧಾರದಲ್ಲಿ 28 ರನ್‌ಗಳಿಂದ ಬಾಂಗ್ಲಾದೇಶ ತಂಡವನ್ನು ಸೋಲಿಸಿತು.

ಆಸ್ಟ್ರೇಲಿಯಾ ಟಾಸ್ ಗೆದ್ದ ಮೇಲೆ ಮಧ್ಯಮ ಹಂತದ ಓವರುಗಳಲ್ಲಿ ಜಂಪಾ ಕರಾರುವಾಕ್ ಬೌಲಿಂಗ್ ಪ್ರದರ್ಶಿಸಿದರೆ, ಕಮಿನ್ಸ್ (29ಕ್ಕೆ3) ಕೊನೆಯ ಎರಡು ಓವರ್‌ಗಳ ಸತತ ಎಸೆತಗಳಲ್ಲಿ ಹ್ಯಾಟ್ರಿಕ್ ಪಡೆದರು. ಬಾಂಗ್ಲಾದೇಶ ಮೊದಲು ಆಡಿ 8 ವಿಕೆಟ್‌ಗೆ 140 ರನ್ ಗಳಿಸಿತು.

ಅನುಭವಿ ಡೇವಿಡ್ ವಾರ್ನರ್ (ಔಟಾಗದೇ 53, 35 ಎಸೆತ) ಅವರು ಬಿರುಸಿನ ಅರ್ಧ ಶತಕ ಗಳಿಸಿದರು. ಇದರಲ್ಲಿ ಐದು ಬೌಂಡರಿಗಳ ಜೊತೆಗೆ ಮೂರು ಸಿಕ್ಸರ್‌ಗಳಿದ್ದವು. ಟ್ರಾವಿಸ್ ಹೆಡ್ (31, 21ಎ) ಜೊತೆ ವಾರ್ನರ್ ಆರಂಭದಿಂದಲೇ ಆಕ್ರಮಣಕ್ಕಿಳಿದರು.

ಮಳೆಯಿಂದ ಪಂದ್ಯಕ್ಕೆ ಅಡಚಣೆಯಾದಾಗ ಆಸ್ಟ್ರೇಲಿಯಾ 6.2 ಓವರುಗಳಲ್ಲಿ ವಿಕೆಟ್ ನಷ್ಟವಿಲ್ಲದೇ 64 ರನ್ ಗಳಿಸಿತ್ತು.

ಆಟ ಪುನರಾರಂಭವಾದ ಬಳಿಕ ಯುವ ಸ್ಪಿನ್ನರ್ ರಿಷದ್ ಹುಸೇನ್ ಐದು ರನ್‌ಗಳ ಅಂತರದಲ್ಲಿ ಹೆಡ್ ಮತ್ತು ನಾಯಕ ಮಿಚೆಲ್ ಮಾರ್ಷ್ (1) ಅವರ ವಿಕೆಟ್‌ಗಳನ್ನು ಪಡೆದರು. ಆದರೆ ವಾರ್ನರ್ ಇನ್ನೊಂದೆಡೆ ಬಿರುಸಿನ ಆಟ ಮುಂದುವರಿಸಿದರು.

ಎರಡನೇ ಬಾರಿ ಮಳೆ ಶುರುವಾದಾಗ ಆಸ್ಟ್ರೇಲಿಯಾ 11.2 ಓವರುಗಳಲ್ಲಿ 2 ವಿಕೆಟ್‌ಗೆ 100 ರನ್ ಹೊಡೆದಿತ್ತು. ಡಿಎಲ್‌ಎಸ್ ಪ್ರಕಾರ ಆಸ್ಟ್ರೇಲಿಯಾ ಆ ವೇಳೆ ಗಳಿಸಬೇಕಾಗಿದ್ದ ರನ್ 72.

ಇದಕ್ಕೆ ಮೊದಲು ಮಿಚೆಲ್ ಸ್ಟಾರ್ಕ್, ಮೊದಲ ಓವರ್‌ನಲ್ಲೇ ತಂಜಿದ್ ಹಸನ್ ವಿಕೆಟ್ ಪಡೆದು ಆಸ್ಟ್ರೇಲಿಯಾಕ್ಕೆ ಉತ್ತಮ ಆರಂಭ ನೀಡಿದರು.

ವಿಶ್ವಕಪ್‌ನಲ್ಲಿ ಅವರು ಅತ್ಯಧಿಕ (95 ವಿಕೆಟ್) ಪಡೆದಂತಾಯಿತು. ಲಸಿತ್ ಮಾಲಿಂಗ (94) ಎರಡನೇ ಸ್ಥಾನಕ್ಕೆ ಸರಿದರು.

ಲಿಟನ್ ದಾಸ್ (16) ಮತ್ತು ನಜ್ಮುಲ್ ಹುಸೇನ್ ಶಾಂತೊ (41) ಅವರು ಎರಡನೇ ವಿಕೆಟ್‌ಗೆ 58 ರನ್ ಸೇರಿಸಿದರು.

ಆದರೆ ಜಂಪಾ ದಾಳಿಗಿಳಿದ ಮೊದಲ (ಇನಿಂಗ್ಸ್‌ನ 9ನೇ) ಓವರ್‌ನಲ್ಲೇ ದಾಸ್ ಅವರನ್ನು ಎಲ್‌ಬಿ ಬಲೆಗೆ ಕೆಡವಿ ಈ ಜೊತೆಯಾಟ ಮುರಿದರು. ಜಂಪಾ ಮತ್ತು ಮ್ಯಾಕ್ಸ್‌ವೆಲ್ ಎದುರಾಳಿಗಳಿಗೆ ಕಡಿವಾಣ ಹಾಕಿದರು. ಕೊನೆಯಲ್ಲಿ ತೌಹಿದ್ ಹೃದಯ್ (40, 28ಎ) ಅವರು ಬಾಂಗ್ಲಾದೇಶ ತಂಡ 100ರ ಗಡಿದಾಟಲು ನೆರವಾದರು.


ಸ್ಟೊಯಿನಿಸ್ ಬೌಲಿಂಗ್‌ನಲ್ಲಿ ಬೆನ್ನುಬೆನ್ನಿಗೆ ಎರಡು ಸಿಕ್ಸರ್ ಎತ್ತಿದರು.

ಆದರೆ ಇನಿಂಗ್ಸ್‌ನ ಕೊನೆಯಲ್ಲಿ ಹ್ಯಾಟ್ರಿಕ್ ಸಾಧಿಸುವ ಮೂಲಕ ಕಮಿನ್ಸ್ 150ರ ಆಚೆ ಮೊತ್ತ ಒಯ್ಯುವ ಬಾಂಗ್ಲಾ ಕನಸಿಗೆ ಅಡ್ಡಿಯಾದರು.

ಸ್ಕೋರುಗಳು: ಬಾಂಗ್ಲಾದೇಶ: 20 ಓವರುಗಳಲ್ಲಿ 8 ವಿಕೆಟ್‌ಗೆ 140 (ನಜ್ಮುಲ್ ಹಸನ್ ಶಾಂತೊ 41, ತೌಹಿದ್ ಹೃದೊಯ್ 40, ತಸ್ಕಿನ್ ಅಹ್ಮದ್ ಔಟಾಗದೇ 13; ಪ್ಯಾಟ್ ಕಮಿನ್ಸ್ 29ಕ್ಕೆ3, ಆ್ಯಡಂ ಜಂಪಾ 24ಕ್ಕೆ2); ಆಸ್ಟ್ರೇಲಿಯಾ: 11.2 ಓವರುಗಳಲ್ಲಿ 2 ವಿಕೆಟ್‌ಗೆ 100 (ಡೇವಿಡ್ ವಾರ್ನರ್ ಔಟಾಗದೇ 53, ಟ್ರಾವಿಸ್ ಹೆಡ್ 31, ಗ್ಲೆನ್ ಮ್ಯಾಕ್ಸ್‌ವೆಲ್ ಔಟಾಗದೇ 14; ರಿಷದ್ ಹುಸೇನ್ 23ಕ್ಕೆ2). ಪ್ಯಾಟ್ ಪಂದ್ಯದ ಆಟಗಾರ: ಪ್ಯಾಟ್ ಕಮಿನ್ಸ್.

ಟಿ20 ವಿಶ್ವಕಪ್ ಹ್ಯಾಟ್ರಿಕ್ ವೀರರು

ಬೌಲರ್	ದೇಶ	ಎದುರಾಳಿ	ವರ್ಷ
ಬ್ರೆಟ್ ಲೀ	(ಆಸ್ಟ್ರೇಲಿಯಾ)	ಬಾಂಗ್ಲಾದೇಶ	2007
ಕರ್ಟಿಸ್ ಕ್ಯಾಂಪರ್	ಐರ್ಲೆಂಡ್	ನೆದರ್ಲೆಂಡ್ಸ್	2021
ವನಿಂದು ಹಸರಂಗ	ಶ್ರೀಲಂಕಾ	ದಕ್ಷಿಣ ಆಫ್ರಿಕಾ	2021
ಕಗಿಸೊ ರಬಾಡ	ದಕ್ಷಿಣ ಆಫ್ರಿಕಾ	ಇಂಗ್ಲೆಂಡ್	2021
ಕಾರ್ತಿಕ್ ಮೀಯಪ್ಪನ್	ಯುಎಇ	ಶ್ರೀಲಂಕಾ	2022
ಜೋಶ್ ಲಿಟ್ಲ್	ಐರ್ಲೆಂಡ್	ನ್ಯೂಜಿಲೆಂಡ್	2022
ಪ್ಯಾಟ್ ಕಮಿನ್ಸ್	ಆಸ್ಟ್ರೇಲಿಯಾ	ಬಾಂಗ್ಲಾದೇಶ	2024



ಹ್ಯಾಟ್ರಿಕ್ ಸಾಧಿಸಿದ ಪ್ಯಾಟ್ ಕಮಿನ್ಸ್ ಎಪಿ/ಪಿಟಿಐ ಚಿತ್ರ

ಡಿಕಾಕ್ ಅಬ್ಬರ: ದಕ್ಷಿಣ ಆಫ್ರಿಕಾಕ್ಕೆ ಗೆಲುವು

ಗ್ರಾಸ್ ಐಲ್, ಸೇಂಟ್ ಲೂಸಿಯಾ(ಪಿಟಿಐ): ಕ್ವಿಂಟನ್ ಡಿಕಾಕ್ (65; 38ಎ, 4X4, 6X4) ಬಿರುಸಿನ ಅರ್ಧ ಶತಕ ಹಾಗೂ ಕೇಶವ್ ಮಹಾರಾಜ್ (25ಕ್ಕೆ2) ಅವರ ಪರಿಣಾಮಕಾರಿ ಬೌಲಿಂಗ್ ನೆರವಿನಿಂದ ಸೂಪರ್ ಎಂಟರ ರೋಚಕ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ತಂಡ ಶುಕ್ರವಾರ ಇಂಗ್ಲೆಂಡ್ ಮೇಲೆ 7 ರನ್‌ಗಳ ಜಯ ಸಾಧಿಸಿತು.



ದಕ್ಷಿಣ ಆಫ್ರಿಕಾದ ಕ್ವಿಂಟನ್ ಡಿಕಾಕ್ ಬ್ಯಾಟಿಂಗ್ –ಎಎಫ್‌ಪಿ ಚಿತ್ರ

ಮೊದಲ ಆಡಿದ ದಕ್ಷಿಣ ಆಫ್ರಿಕಾ 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 163 ರನ್ ಗಳಿಸಿತು. 164 ರನ್‌ಗಳ ಗುರಿ ಬೆನ್ನತ್ತಿದ ಇಂಗ್ಲೆಂಡ್ ತಂಡಕ್ಕೆ ಕೊನೆಯ ಓವರ್‌ನಲ್ಲಿ ಗೆಲ್ಲಲು 14 ರನ್‌ಗಳ ಅಗತ್ಯವಿತ್ತು. ಆದರೆ ಆನ್ರಿಚ್ ನಾಕಿಯಾ ಅಂತಿಮ ಓವರ್‌ನಲ್ಲಿ ಹ್ಯಾರಿ ಬ್ರೂಕ್ (53) ಅವರ ಪ್ರಮುಖ ವಿಕೆಟ್ ಪಡೆದರಲ್ಲದೇ ಕೇವಲ ಅರು ರನ್ ಬಿಟ್ಟುಕೊಟ್ಟು ಗೆಲುವಿಗೆ ನೆರವಾದರು. ಇಂಗ್ಲೆಂಡ್ ತಂಡದ ಆರಂಭ ಉತ್ತಮವಾಗಿರಲಿಲ್ಲ. ಜಾನಿ ಬೇಸ್ಟೊ ಹಾಗೂ ಜೋಸ್ ಬಟ್ಲರ್ ಅವರ ವಿಕೆಟ್ ಕಬಳಿಸುವ ಮೂಲಕ ಕೇಶವ್ ಮಹಾರಾಜ್ ಆರಂಭಿಕ ಆಘಾತ ನೀಡಿದರು. ನಂತರ ಬಂದ ಹ್ಯಾರಿ ಬ್ರೂಕ್ (53) ಅರ್ಧ ಶತಕ ಗಳಿಸಿ ತಂಡಕ್ಕೆ ಆಸರೆಯಾದರು. ಲಿಯಾಮ್ ಲಿವಿಂಗ್‌ಸ್ಟೋನ್ ಮತ್ತು ಹ್ಯಾರಿ ಬ್ರೂಕ್ ಜೋಡಿ ಐದನೇ ವಿಕೆಟ್‌ಗೆ 50 ರನ್ ಸೇರಿಸಿತು. ಈ ಇಬ್ಬರ ನಿರ್ಗಮನ ಬಳಿಕ ಉಳಿದವರಿಗೆ ತಂಡವನ್ನು ಗೆಲುವಿನ ದಡ ಸೇರಿಸಲು ಆಗಲಿಲ್ಲ.

ಇದಕ್ಕೂ ಮುನ್ನ ಕ್ವಿಂಟನ್ ಮತ್ತು ರೀಜಾ ಹೆನ್ರಿಕ್ಸ್ ಅವರು ಮೊದಲ ವಿಕೆಟ್ ಜೊತೆಯಾಟದಲ್ಲಿ 86 ರನ್ ಸೇರಿಸಿದರು. ಹತ್ತನೇ ಓವರ್‌ನಲ್ಲಿ ಮೋಯಿನ್ ಅಲಿ ಅವರು ರೀಜಾ ವಿಕೆಟ್ ಗಳಿಸಿ ಜೊತೆಯಾಟ ಮುರಿದರು. ಎರಡು ಓವರ್‌ಗಳ ನಂತರ ಜೋಫ್ರಾ ಆರ್ಚರ್ ಎಸೆತದಲ್ಲಿ ಕ್ವಿಂಟನ್ ಔಟಾದರು.

ಸಂಕ್ಷಿಪ್ತ ಸ್ಕೋರು: ದಕ್ಷಿಣ ಆಫ್ರಿಕಾ: 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 163 (ರೀಜಾ ಹೆನ್ರಿಕ್ಸ್ 19, ಕ್ವಿಂಟನ್ ಡಿಕಾಕ್ 65, ಡೇವಿಡ್ ಮಿಲ್ಲರ್ 43, ಜೋಫ್ರಾ ಆರ್ಚರ್ 40ಕ್ಕೆ3) ಇಂಗ್ಲೆಂಡ್ 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 156 (ಹ್ಯಾರಿ ಬ್ರೂಕ್ 53, ಲಿಯಾಮ್ ಲಿವಿಂಗ್‌ಸ್ಟೋನ್ 33, ಕೇಶವ್ ಮಹಾರಾಜ್ 25ಕ್ಕೆ2, ಕಗಿಸೊ ರಬಾಡ 32ಕ್ಕೆ2) ಪಂದ್ಯ ಶ್ರೇಷ್ಠ: ಕ್ವಿಂಟನ್ ಡಿಕಾಕ್

ಬೆಂಗಳೂರು ರೇಸ್

ಆಲ್ಡ್‌ಗೇಟ್ ಗೆಲ್ಲುವ ನಿರೀಕ್ಷೆ

ರೇಸಿಂಗ್ ಪ್ಯಾಟ್ರನ್ಸ್ ಟ್ರೋಫಿ ಶನಿವಾರದಿಂದ ಪ್ರಾರಂಭವಾಗಲಿರುವ ಬೆಂಗಳೂರು ಬೇಸಿಗೆ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಆಲ್ಡ್‌ಗೇಟ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಮಾನ್ಸ ಮೂಸ 5, ಮ್ಯಾಂಡರಿನೊ 4, ಮ್ಯಾಗ್ನೆಟಿಕ್ 8
2ನೇ ರೇಸ್: ವ್ಯಾಸ 4, ಗ್ರೀಲಿ 3, ಸೆವೆನ್ತ್ ಸಮುರಾಯ್ 1
3ನೇ ರೇಸ್: ಮಿಸ್ಟಿಕಲ್ ಏರ್ 2, ಸ್ಟ್ರೈಕಿಂಗ್ ಐಸ್ 7, ಕ್ವಿಕ್ ವಿಟ್ಟೆಡ್ 1
4ನೇ ರೇಸ್: ಗೋಲ್ಡನ್ ಲೈಟ್ 3, ಸ್ಟಾರ್ ಆಫ್ ನೈಟ್ 10, ಮೆಹ್ರಾ 9
5ನೇ ರೇಸ್: ಆಲ್ಡ್‌ಗೇಟ್ 6, ಸಿದ್ಧಾರ್ಥ್ 1, ಯುಕಾನ್ 3
6ನೇ ರೇಸ್: ಆಗಸ್ಟ್ 3, ವಿಕ್ಟೋರಿಯಾ ದೊರೆಸಾನಿ 1, ಕ್ವೀನ್ ಆಫ್ ಕಿವ್ 5
7ನೇ ರೇಸ್: ಕ್ವಾರ್ 1, ಕಲ್ಕಿ 8, ನೆವರ್ ಗೀವ್ ಇನ್ 6

ಉತ್ತಮ ಬೆಟ್: ಆಗಸ್ಟ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಮಿಂಚಿದ ಯರೆಮ್‌ಚುಕ್: ಸ್ಲೊವಾಕಿಯಾಕ್ಕೆ ಸೋಲು

ಹಿನ್ನಡೆಯಿಂದ ಗೆದ್ದ ಉಕ್ರೇನ್

ಡಸೆಲ್‌ಡಾರ್ಫ್ (ಜರ್ಮನಿ), (ಎಎಫ್‌ಪಿ): ಸಬ್‌ಸ್ಟಿಟ್ಯೂಟ್ ಆಟಗಾರ ರೋಮನ್ ಯರೆಮ್‌ಚುಕ್ ಅವರು 80ನೇ ನಿಮಿಷ ಗಳಿಸಿದ ಗೋಲಿನ ನೆರವಿನಿಂದ ಉಕ್ರೇನ್ ಶುಕ್ರವಾರ ಯೂರೊ ಕಪ್ ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ ಸ್ಲೊವಾಕಿಯಾ ತಂಡವನ್ನು 2–1 ಗೋಲುಗಳಿಂದ ಸೋಲಿಸಿತು.

‘ಇ’ ಗುಂಪಿನ ಈ ಪಂದ್ಯ ಗೆದ್ದರೆ ಒಂದು ಪಂದ್ಯ ಉಳಿದಿರುವಂತೆ ನಾಕೌಟ್ ಹಂತಕ್ಕೆ ತಲುಪಬಹುದೆಂಬ ಲೆಕ್ಕಾಚಾರದಲ್ಲಿ ಆಡಿದ ಸ್ಲೊವಾಕಿಯಾ 17ನೇ ನಿಮಿಷ ಇವಾನ್ ಶ್ರಾಂಝ್ ಅವರ ಗೋಲಿನಿಂದ ಮುನ್ನಡೆ ಪಡೆದಿತ್ತು. ಬೆಲ್ಜಿಯಂ ವಿರುದ್ಧ ಅಚ್ಚರಿಯ ಗೆಲುವಿನಲ್ಲೂ ಇವಾನ್ ಗೋಲು ಗಳಿಸಿದ್ದರು.



ಗೋಲು ಗಳಿಸಿದ ಸಂಭ್ರಮದಲ್ಲಿ ಉಕ್ರೇನ್‌ನ ರೋಮನ್ ಯರೆಮ್‌ಚುಕ್ ಎಎಫ್‌ಪಿ ಚಿತ್ರ

ಯುರೋ ಕಪ್ 2024 ಜರ್ಮನಿ

ರುಮೇನಿಯಾ ಕೈಲಿ 0–3 ಗೋಲಿನಿಂದ ಸೋಲನುಭವಿಸಿದ್ದ ಉಕ್ರೇನ್ ಈ ಪಂದ್ಯದಲ್ಲಿ ಧೃತಿಗೆಡಲಿಲ್ಲ. ಅವಕಾಶಕ್ಕಾಗಿ ಕಾಯುತ್ತಿದ್ದ ತಂಡ ವಿರಾಮಕ್ಕೆ 9 ನಿಮಿಷಗಳಿರುವಾಗ ಮಿಕೊಲಾ ಶಪರೆಂಕೊ ಗಳಿಸಿದ ಗೋಲಿನಿಂದ ಸಮ ಮಾಡಿಕೊಂಡಿತು.

ಡೈನಮೊ ಕೀವ್ ಕ್ಲಬ್‌ಗೆ ಆಡುವ ಶಪರೆಂಕೊ ಪಂದ್ಯ ಮುಕ್ತಾಯಕ್ಕೆ 10 ನಿಮಿಷಗಳಿರುವಾಗ ಉಕ್ರೇನ್ ಮತ್ತೊಂದು ಗೋಲಿಗೆ ಬುನಾದಿ ಹಾಕಿಕೊಟ್ಟರು. ಅವರ ಪಾಸ್‌ನಲ್ಲಿ ಯರೆಮ್‌ಚುಕ್ ಸ್ಕೋರ್ ಮಾಡಿದರು.

‘ಇ’ ಗುಂಪಿನಲ್ಲಿ ಈ ಗೆಲುವಿನೊಡನೆ ಉಕ್ರೇನ್ ಸಹ ರುಮೇನಿಯಾ ಮತ್ತು ಸ್ಲೊವಾಕಿಯ ಜೊತೆ ತಲಾ ಮೂರು ಪಾಯಿಂಟ್‌ಗಳೊಡನೆ ಅಗ್ರಸ್ಥಾನ ಹಂಚಿಕೊಂಡಿತು.

ರುಮೇನಿಯಾ ತಂಡ ಫ್ರಾಂಕ್‌ಫರ್ಟ್‌ನಲ್ಲಿ ಶನಿವಾರ ಬೆಲ್ಜಿಯಂ ವಿರುದ್ಧ ಆಡಲಿದೆ.

ಡ್ರಾ ಪಂದ್ಯದಲ್ಲಿ ಇಂಗ್ಲೆಂಡ್: ಗುರುವಾರ ರಾತ್ರಿ ಫ್ರಾಂಕ್‌ಫರ್ಟ್‌ನಲ್ಲಿ ಇಂಗ್ಲೆಂಡ್ ಮತ್ತು ಡೆನ್ಮಾರ್ಕ್ ನಡುವಣ ನಡೆದ ‘ಸಿ’ ಗುಂಪಿನ ಪಂದ್ಯ 1–1 ಡ್ರಾ ಆಯಿತು. ಇಂಗ್ಲೆಂಡ್ ಪರ ಹ್ಯಾರಿ ಕೇನ್ (18ನೇ ನಿಮಿಷ) ಮತ್ತು ಡೆನ್ಮಾರ್ಕ್ ಪರ ಮಾರ್ಟಿನ್ ಹುಲ್ಮಂಡ್ (34ನೇ ನಿಮಿಷ) ಗೋಲು ಗಳಿಸಿದರು.

ವಿಶೇಷ ಎಂದರೆ ಗುರುವಾರ ನಡೆದಿದ್ದ ಮೊದಲ ಎರಡು ಪಂದ್ಯಗಳೂ ಸಹ 1–1 ಡ್ರಾ ಆಗಿದ್ದವು.

ಆರ್ಜೆಂಟೀನಾಕ್ಕೆ ಜಯ

ಅಟ್ಲಾಂಟಾ (ಎಪಿ): ಲಯೊನೆಲ್ ಮೆಸ್ಸಿ ದಾಖಲೆಯ 35ನೇ ಕೊಪಾ ಅಮೆರಿಕ ಪಂದ್ಯದಲ್ಲಿ ಗೋಲು ಗಳಿಸಲಿಲ್ಲ. ಆದರೆ ಕೆನಡಾ ವಿರುದ್ಧ ಗುರುವಾರ ಕೆನಡಾ ವಿರುದ್ಧ ನಡೆದ ಪಂದ್ಯದಲ್ಲಿ ಆರ್ಜೆಂಟೀನಾ ತಂಡ 2–0 ಗೋಲುಗಳಿಂದ ಗೆಲ್ಲಲು ಸಹಾಯ ಮಾಡಿದರು.

ಅಟ್ಲಾಂಟಾ ಮರ್ಸಿಡಿಸ್ ಬೆಂಝ್ ಕ್ರೀಡಾಂಗಣದಲ್ಲಿ ಪಂದ್ಯ ಆರಂಭಕ್ಕೆ ಒಂದು ಗಂಟೆ ಮೊದಲೇ ಮೆಸ್ಸಿ... ಮೆಸ್ಸಿ... ಎಂಬ ಅಭಿಮಾನದ ಘೋಷಣೆಗಳು ಕೇಳಿಬಂದವು ಅವರು ನಿರಾಸೆ ಮೂಡಿಸಲಿಲ್ಲ. 43ನೇ ನಿಮಿಷ ಅವರು ಒದಗಿಸಿದ ಪಾಸ್‌ನಲ್ಲಿ ಜೂಲಿಯನ್ ಅಲ್ವಾರೆಜ್ ಆರ್ಜೆಂಟೀನಾಕ್ಕೆ ಮುನ್ನಡೆ ಒದಗಿಸಿದರು. 89ನೇ ನಿಮಿಷ ಲೌತರೊ ಮಾರ್ಟಿನೆಜ್ ಗೆಲುವಿನ ಅಂತರ ಹೆಚ್ಚಿಸಲೂ ಮೆಸ್ಸಿ ಅವರ ಪಾಸ್ ನೆರವಿಗೆ ಬಂದಿತು.

ಬೆಂಗಳೂರಿನಲ್ಲಿಯೇ ಎಲ್ಲ ಪಂದ್ಯಗಳು

ಮಹಾರಾಜ ಟ್ರೋಫಿ ಅನಾವರಣ; ಆ. 15ರಿಂದ ಕ್ರಿಕೆಟ್ ಟೂರ್ನಿ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇದೇ ಆಗಸ್ಟ್ 15ರಿಂದ ಆರಂಭವಾಗಲಿರುವ ಮೂರನೇ ಆವೃತ್ತಿಯ ಮಹಾರಾಜ ಟ್ರೋಫಿ ಕ್ರಿಕೆಟ್ ಟೂರ್ನಿಯ ಎಲ್ಲ ಪಂದ್ಯಗಳೂ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಲಿವೆ.

ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯಲ್ಲಿ ಶುಕ್ರವಾರ ಸಂಜೆ ನಡೆದ ಟ್ರೋಫಿ ಅನಾವರಣ ಕಾರ್ಯಕ್ರಮ ಮತ್ತು ಪತ್ರಿಕಾಗೋಷ್ಠಿಯಲ್ಲಿ ಈ ವಿಷಯವನ್ನು ಪ್ರಕಟಿಸಲಾಯಿತು. ಕ್ರಿಕೆಟ್ ದಂತಕಥೆ ಇ.ಎ.ಎಸ್ ಪ್ರಸನ್ನ ಅವರು ಟ್ರೋಫಿ ಅನಾವರಣಗೊಳಿಸಿದರು.

‘ಮಳೆಗಾಲದ ಸಮಯವಾಗಿರುವುದರಿಂದ ಗ್ರಾಮಾಂತರ ವಿಭಾಗಗಳಾದ ಹುಬ್ಬಳ್ಳಿ, ಮೈಸೂರು ಕ್ರೀಡಾಂಗಣಗಳಲ್ಲಿ ಪಂದ್ಯಗಳನ್ನು ನಡೆಸುವುದು ಕಷ್ಟ. ಬೆಂಗಳೂರಿನಲ್ಲಿ ಸಬ್ ಏರ್ ಸಿಸ್ಟಮ್ ಇರುವುದರಿಂದ ಮಳೆ ಬಂದರೂ ಕ್ರೀಡಾಂಗಣವನ್ನು ಬೇಗನೆ ಪಂದ್ಯಕ್ಕೆ ಸಿದ್ಧಗೊಳಿಸಬಹುದು. ಅಲ್ಲದೇ ಅಧಿಕೃತ ಪ್ರಸಾರ ವಾಹಿನಿಗೆ ಬೆಂಗಳೂರಿನಲ್ಲಿ ಪಂದ್ಯಗಳು ನಡೆದರೆ ನೇರಪ್ರಸಾರಕ್ಕೆ ಹೆಚ್ಚು ಅನುಕೂಲವಾಗುತ್ತದೆ’ ಎಂದು ಕೆಎಸ್‌ಸಿಎ ಜಂಟಿ ಕಾರ್ಯದರ್ಶಿ ಶಾವೀರ್ ತಾರಾಪುರ್ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.



ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಎರ್ರಪಳ್ಳಿ ಪ್ರಸನ್ನ ಅವರು ಮಹಾರಾಜ ಟ್ರೋಫಿ ಅನಾವರಣ ಮಾಡಿದರು. ಶಾವೀರ್ ತಾರಾಪುರ್ (ಜಂಟಿ ಕಾರ್ಯದರ್ಶಿ), ರಘುರಾಮ್ ಭಟ್ (ಅಧ್ಯಕ್ಷ), ಬಿ.ಕೆ. ಸಂಪತ್ ಕುಮಾರ್ (ಲೀಗ್ ಕಮಿಷನರ್) , ಎಂ.ಎಸ್. ವಿನಯ್ (ಆಡಳಿತ ಸಮಿತಿ ಸದಸ್ಯ) ಚಿತ್ರದಲ್ಲಿದ್ದಾರೆ

ಪ್ರತಿ ಬಾರಿ ಡಿವಿಷನ್ ಲೀಗ್, ಕ್ಲಬ್ ಲೀಗ್ ಟೂರ್ನಿಗಳ ಮೂಲಕ ಕೆಎಸ್‌ಸಿಎ ಋತುಗಳು ಆರಂಭವಾಗುತ್ತಿದ್ದವು. ಈ ವರ್ಷ ಫ್ರ್ಯಾಂಚೈಸಿ ಲೀಗ್ ಮೇಲೆ ಹೆಚ್ಚು ಗಮನ ನೀಡಿ ಋತು ಆರಂಭವಾಗುತ್ತಿದೆಯೇ ಎಂಬ ಪ್ರಶ್ನೆಗೆ ಶಾವೀರ್ ಪ್ರತಿಕ್ರಿಯಿಸಿದರು.

‘ಹಾಗೇನಿಲ್ಲ. ಈಗಾಗಲೇ ವಯೋಮಿತಿ ಕ್ಲಬ್ ಟೂರ್ನಿಗಳು ಆರಂಭವಾಗಿವೆ. 16 ವರ್ಷ ಹಾಗೂ 19 ವರ್ಷದೊಳಗಿನವರ ಅಂತರ ಕ್ಲಬ್ ಟೂರ್ನಿಗಳು ನಡೆಯುತ್ತಿವೆ. ಮೊದಲ ಮೂರು ಡಿವಿಷನ್ ಲೀಗ್ ಟೂರ್ನಿಗಳು ಇದೇ 29ರಿಂದ ಆರಂಭವಾಗಲಿವೆ. ಮಹಾರಾಜ ಟ್ರೋಫಿ ಟೂರ್ನಿ ಆರಂಭಕ್ಕೂ ಬಹಳ ಮುನ್ನವೇ ಡಿವಿಷನ್ ಲೀಗ್‌ಗಳನ್ನು ಯೋಜಿಸಲಾಗಿದೆ’ ಎಂದು ಸ್ಪಷ್ಟಪಡಿಸಿದರು.

ಹಾಲಿ ಚಾಂಪಿಯನ್ ಹುಬ್ಬಳ್ಳಿ ಟೈಗರ್ಸ್, ರನ್ನರ್ಸ್ ಅಪ್ ಮೈಸೂರು ವಾರಿಯರ್ಸ್, ಗುಲ್ಬರ್ಗ ಮಿಸ್ಟಿಕ್ಸ್, ಬೆಂಗಳೂರು ಬ್ಲಾಸ್ಟರ್ಸ್, ಮಂಗಳೂರು ಡ್ರ್ಯಾಗನ್ಸ್ ಮತ್ತು ಶಿವಮೊಗ್ಗ ಲಯನ್ಸ್ ತಂಡಗಳು ಟೂರ್ನಿಯಲ್ಲಿ ಆಡಲಿವೆ. ಜುಲೈ 25ರಂದು ಆಟಗಾರರ ಹರಾಜು ಪ್ರಕ್ರಿಯೆ ನಡೆಯಲಿದೆ. 700 ಆಟಗಾರರು ಖರೀದಿಗೆ ಲಭ್ಯರಿದ್ದಾರೆ.

ಚೌಬೆ ದೂರವಿದ್ದಷ್ಟೂ ಫುಟ್‌ಬಾಲ್‌ಗೆ ಒಳಿತು: ಸ್ಟಿಮಾಚ್

ನವದೆಹಲಿ (ಪಿಟಿಐ): ಭಾರತ ತಂಡದ ಕೋಚ್ ಸ್ಥಾನದಿಂದ ಪದಚ್ಯುತರಾದ ಕೋಚ್ ಇಗೊರ್ ಸ್ಟಿಮಾಚ್ ಅವರು ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್‌ನ ಅಧ್ಯಕ್ಷ ಕಲ್ಯಾಣ್ ಚೌಬೆ ವಿರುದ್ಧ ಹರಿಹಾಯ್ದಿದ್ದಾರೆ. ಅವರು ಅಧ್ಯಕ್ಷ ಸ್ಥಾನದಿಂದ ಎಷ್ಟು ಬೇಗ ನಿರ್ಗಮಿಸುವರೊ, ದೇಶದ ಫುಟ್‌ಬಾಲ್ ಭವಿಷ್ಯಕ್ಕೆ ಅಷ್ಟು ಒಳಿತಾಗಲಿದೆ ಎಂದು ಹೇಳಿದ್ದಾರೆ.

ಸ್ಟಿಮಾಚ್ ಅವರನ್ನು ಕೋಚ್ ಸ್ಥಾನದಿಂದ ಸೋಮವಾರ ವಜಾ ಮಾಡಲಾಗಿತ್ತು. ಅದರ ಮರುದಿನವೇ ಆಕ್ರೋಶ ವ್ಯಕ್ತಪಡಿಸಿದ್ದ ಸ್ಟಿಮಾಚ್, ತಮ್ಮ ಬಾಕಿಯನ್ನು 10 ದಿನಗಳ ಒಳಗೆ ತೀರಿಸದಿದ್ದರೆ, ಫಿಫಾ ಟ್ರಿಬ್ಯೂನಲ್‌ನಲ್ಲಿ ಎಐಎಫ್‌ಎಫ್ ವಿರುದ್ಧ ದಾವೆ ಹೂಡುವುದಾಗಿ ಎಚ್ಚರಿಕೆ ನೀಡಿದ್ದರು.

ಭಾರತದ ಫುಟ್‌ಬಾಲ್ ‘ಬಂದಿಯಾಗಿದೆ’ ಎಂದು ಶುಕ್ರವಾರ ದೀರ್ಘ ಪತ್ರಿಕಾಗೋಷ್ಠಿಯಲ್ಲಿ ಹೇಳಿದ ಸ್ಟಿಮಾಚ್ ಈ ಆಟವನ್ನು ಕಾಡುತ್ತಿರುವ ಹೆಚ್ಚಿನ ಸಮಸ್ಯೆಗಳಿಗೆ ಚೌಬೆ ಅವರನ್ನು ಹೊಣೆ ಮಾಡಿದರು. ತಮ್ಮ ಅವಧಿಯಲ್ಲಿ ಅವರ ಸುಳ್ಳು ಮತ್ತು ಈಡೇರಿಸದೇ ಹೋದ ಭರವಸೆಗಳಿಂದ ಜುಗುಪ್ಸೆಗೊಂಡಿರುವುದಾಗಿ ತಿಳಿಸಿದರು.



ಇಗೊರ್ ಸ್ಟಿಮಾಚ್

‘ಜನಪ್ರಿಯತೆಯ ಕಡೆಗಷ್ಟೇ ಕಲ್ಯಾಣ್ ಅವರ ಗಮನವಿದೆ. ಇತ್ತೀಚಿನ ಮಾಧ್ಯಮಗೋಷ್ಠಿಗಳಿಂದ ಇದು ಗೊತ್ತಾಗುತ್ತದೆ. ಅವರು ರಾಜಕಾರಣಿಯೆಂದು ನೀವು ಹೇಳುತ್ತೀರಿ. ಆದರೆ ಕೋಲ್ಕತ್ತದಲ್ಲೇ ಬಹಳಷ್ಟು ಮಂದಿಗೆ ಅವರು ಗೊತ್ತಿಲ್ಲ. ನಮಗೆ ಸಮರ್ಥ, ಪ್ರಭಾವಶಾಲಿ ಮತ್ತು ಭಾರತದ ಫುಟ್‌ಬಾಲ್ ಮುನ್ನಡೆಸುವವರ ಅಗತ್ಯವಿದೆ’ ಎಂದು ಸ್ಟಿಮಾಚ್ ಹೇಳಿದರು.

ಎಐಎಫ್‌ಎಫ್ ತಾಂತ್ರಿಕ ಸಮಿತಿ ಮುಖ್ಯಸ್ಥ ಐ.ಎಂ.ವಿಜಯನ್ ಅವರ ವಿರುದ್ಧವೂ ಅಸಮಾಧಾನ ವ್ಯಕ್ತಪಡಿಸಿದ ಸ್ಟಿಮಾಚ್, ‘ಅವರು ಈ ಹುದ್ದೆಗೆ ಯೋಗ್ಯರಲ್ಲ’ ಎಂದರು. ‘ವಿಜಯನ್ ಅಮೋಘ ಆಟಗಾರ. ಆದರೆ ಫೆಡರೇಷನ್‌ನ ತಾಂತ್ರಿಕ ಸಮಿತಿಗೆ ಅವರು ಸರಿಹೊಂದುವ ವ್ಯಕ್ತಿಯಲ್ಲ’ ಎಂದರು.

ಚಿನ್ನಸ್ವಾಮಿಯಲ್ಲಿ ಭಾರತ–ಕಿವೀಸ್ ಟೆಸ್ಟ್

ನವದೆಹಲಿ (ಪಿಟಿಐ): ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಅಕ್ಟೋಬರ್ 16ರಿಂದ 20ವರೆಗೆ ಭಾರತ ಮತ್ತು ನ್ಯೂಜಿಲೆಂಡ್ ನಡುವಣ ಟೆಸ್ಟ್ ಪಂದ್ಯ ನಡೆಯಲಿದೆ.

ಭಾರತ ಪ್ರವಾಸ ಮಾಡಲಿರುವ ಕಿವೀಸ್ ತಂಡವು ಮೂರು ಟೆಸ್ಟ್‌ಗಳ ಸರಣಿ ಆಡಲಿದೆ. ಮೊದಲ ಪಂದ್ಯವು ಬೆಂಗಳೂರಿನಲ್ಲಿ ನಡೆಯಲಿದೆ. ಸೆಪ್ಟೆಂಬರ್‌ನಲ್ಲಿ ಬಾಂಗ್ಲಾದೇಶ ಕೂಡ ಭಾರತ ಪ್ರವಾಸ ಮಾಡಲಿದ್ದು, ಟೆಸ್ಟ್ ಪಂದ್ಯ ಆಡಲಿದೆ.

ದಕ್ಷಿಣ ಆಫ್ರಿಕಾಕ್ಕೆ ಭಾರತ: ಈ ವರ್ಷದ ನವೆಂಬರ್‌ನಲ್ಲಿ ಭಾರತ ತಂಡವು ದಕ್ಷಿಣ ಆಫ್ರಿಕಾಕ್ಕೆ ತೆರಳಲಿದೆ. ಅಲ್ಲಿ ನಾಲ್ಕು ಟಿ20 ಪಂದ್ಯಗಳ ಸರಣಿಯಲ್ಲಿ ಆಡಲಿದೆ.

ಡರ್ಬನ್ (ನ.8), ಜಿಟಿಬೆರಾ (ನ.10), ಸೆಂಚುರಿಯನ್ (ಡಿ 13) ಮತ್ತು ಜೋಹಾನ್ಸ್‌ಬರ್ಗ್ (ನ.15) ಕ್ರೀಡಾಂಗಣಗಳಲ್ಲಿ ಪಂದ್ಯಗಳು ನಡೆಯಲಿವೆ ಎಂದು ಬಿಸಿಸಿಐ ತಿಳಿಸಿದೆ.

ವೇಳಾಪಟ್ಟಿ: ಬಾಂಗ್ಲಾ ಎದುರು ಟೆಸ್ಟ್ ಪಂದ್ಯಗಳು: ಚೆನ್ನೈ (ಸೆ 19–23), ಕಾನ್ಪುರ (ಸೆ 27 ರಿಂದ ಅ.1). ಟಿ20: ಧರ್ಮಶಾಲಾ (ಅ.6), ದೆಹಲಿ (ಅ.9), ಹೈದರಾಬಾದ್ (ಅ.12)

ನ್ಯೂಜಿಲೆಂಡ್ ಎದುರು ಟೆಸ್ಟ್: ಬೆಂಗಳೂರು (ಅ. 16ರಿಂದ 20), ಪುಣೆ (ಅ. 24 ರಿಂದ 28), ಮುಂಬೈ (ನ.1ರಿಂದ 5)

ಇಂಗ್ಲೆಂಡ್ ವಿರುದ್ಧ ಟಿ20: ಚೆನ್ನೈ (ಜನವರಿ 22), ಕೋಲ್ಕತ್ತ (ಜ.25), ರಾಜ್‌ಕೋಟ್ (ಜ.28), ಪುಣೆ (ಜ. 31), ಮುಂಬೈ (ಫೆ. 2) ಏಕದಿನ: ನಾಗಪುರ (ಫೆ.6), ಕಟಕ್ (ಫೆ. 9) ಮತ್ತು ಅಹಮದಾಬಾದ್ (ಫೆ 12)

ಬೋಪಣ್ಣ–ಎಬ್ಡೆನ್‌ಗೆ ಸೋಲು

ಲಂಡನ್ (ಪಿಟಿಐ): ಅಗ್ರ ಶ್ರೇಯಾಂಕದ ರೋಹನ್ ಬೋಪಣ್ಣ– ಮ್ಯಾಥ್ಯೂ ಎಬ್ಡೆನ್ ಜೋಡಿ, ಸಿಂಚ್ ಟೆನಿಸ್ ಚಾಂಪಿಯನ್‌ಷಿಪ್ಸ್‌ನ ಪುರುಷರ ಡಬಲ್ಸ್ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಶುಕ್ರವಾರ ರಷ್ಯಾ–ಅಮೆರಿಕನ್ ಜೋಡಿಯಾದ ಕರೆನ್ ಕಚನೋವ್– ಟೇಲರ್ ಫ್ರಿಟ್ಜ್ ಅವರಿಗೆ ತೀವ್ರ ಹೋರಾಟದ ನಂತರ 7–6 (1), 7–6 (3) ರಲ್ಲಿ ಮಣಿಯಿತು.